ಕರ್ನಾಟಕ
# ಸ್ಕೌಟ್ ಮತ್ತು ಗೈಡ್
ಮಾಸ ಪತ್ರಿಕೆ

Karnataka
# Scout & Guide
Monthly Magazine

Vol -67 | Issue- 5 | May 2026 | Pages: 36 | Annual Subscription: ₹ 200/-

ಸಂಪುಟ: 67 | ಸಂಚಿಕೆ: 5 | ಮೇ-2026 | ಪುಟಗಳು: 36 | ವಾರ್ಷಿಕ ಚಂದ ರೂ. 200/-



ಕರ್ನಾಟಕ ರಾಜ್ಯದ ನೂತನ
ಮುಖ್ಯಮಂತ್ರಿಗಳಾಗಿ
ಪ್ರಮಾಣ ವಚನ ಸ್ವೀಕರಿಸಿದ
**ಸನ್ಮಾನ್ಯ ಶ್ರೀ ಡಿ.ಕೆ ಶಿವಕುಮಾರ್ ಅವರಿಗೆ**
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕರ್ನಾಟಕ ರಾಜ್ಯ ಸಂಸ್ಥೆಯ
ವತಿಯಿಂದ
ಹೃದಯ ಪೂರ್ವಕ ಅಭಿನಂದನೆಗಳು







2025 ಜನವರಿಯಲ್ಲಿ ತಮಿಳುನಾಡಿನ ತಿರುಚಿಯಲ್ಲಿ ಜರುಗಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ರಾಷ್ಟ್ರಮಟ್ಟದ ಡೈಮಂಡ್ ಜೂಬಿಲಿ ಜಾಂಬೂರಿಯಲ್ಲಿ ಸನ್ಮಾನ್ಯ ಡಿ.ಕೆ.ಶಿವಕುಮಾರ್ ರವರು ಭಾಗವಹಿಸಿದ ಕ್ಷಣಗಳು



## ಶ್ರೀ ಸಿದ್ಧರಾಮಯ್ಯ

### ಮಾಜಿ ಮುಖ್ಯಮಂತ್ರಿಗಳು

ಯುವ ಜನರ ವ್ಯಕ್ತಿತ್ವ ನಿರ್ಮಾಣಕ್ಕೆ, ಸೇವಾ ಮನೋಭಾವದ ಬೆಳೆವಣಿಗೆಗೆ ಹಾಗೂ ಸ್ಕೌಟ್ ಮತ್ತು ಗೈಡ್ ಚಳುವಳಿಯ ಸದೃಢತೆಗೆ ಅಮೂಲ್ಯ ಪ್ರೋತ್ಸಾಹ ನೀಡಿದ ಶ್ರೀ ಸಿದ್ದರಾಮಯ್ಯವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯದ ಹೃತ್ಪೂರ್ವಕ ಕೃತಜ್ಞತೆಗಳು

ಎಂಟು ವರ್ಷಗಳಿಗೂ ಹೆಚ್ಚು ಕಾಲ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿರುವ ಶ್ರೀ ಸಿದ್ಧರಾಮಯ್ಯ ಅವರು ಕರ್ನಾಟಕದಲ್ಲಿ ಸ್ಕೌಟ್ಸ್ & ಗೈಡ್ಸ್ ಚಳವಳಿಯ ಬೆಳವಣಿಗೆ, ವಿಸ್ತರಣೆ ಹಾಗೂ ಸದೃಢತೆಗಾಗಿ ನೀಡಿದ ಅಮೂಲ್ಯ ಪ್ರೋತ್ಸಾಹ ಸಂಸ್ಥೆಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯಲಿದೆ.

ಅವರ ಆಡಳಿತಾವಧಿಯಲ್ಲಿ ಕರ್ನಾಟಕದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುಟಿಕೆಗಳು ಹೊಸ ಉತ್ತೇಜನ ಮತ್ತು ಚೈತನ್ಯವನ್ನು ಪಡೆದವು. ಗ್ರಾಮೀಣ ಹಾಗೂ ನಗರ ಪ್ರದೇಶಗಳ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ, ಸೇವಾ ಮನೋಭಾವ, ರಾಷ್ಟ್ರಭಕ್ತಿ, ಪರಿಸರ ಜಾಗೃತಿ ಹಾಗೂ ಸಾಮಾಜಿಕ ಬದ್ದತೆಯಂತಹ ಮೌಲ್ಯಗಳನ್ನು ಬೆಳೆಸುವಲ್ಲಿ ಸರ್ಕಾರದ ಪ್ರೋತ್ಸಾಹ ಮತ್ತು ಬೆಂಬಲ ಮಹತ್ವದ ಪಾತ್ರ ವಹಿಸಿತು.

ವಿಶೇಷವಾಗಿ 2027ರಲ್ಲಿ ಮೈಸೂರಿನಲ್ಲಿ ಆಯೋಜಿಸಲಾಗಿದ್ದ 17ನೇ ರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರಿ ರಾಜ್ಯದ ಹೆಮ್ಮೆಯ ಕಾರ್ಯಕ್ರಮವಾಗಿತ್ತು. ಈ ಐತಿಹಾಸಿಕ ಜಾಂಬೋರಿಯನ್ನು ಯಶಸ್ವಿಯಾಗಿ ಆಯೋಜಿಸಲು ಶ್ರೀ ಸಿದ್ದರಾಮಯ್ಯರವರು ಸರ್ಕಾರದಿಂದ ದೊರಕಿಸಿಕೊಟ್ಟ ಆರ್ಥಿಕ ನೆರವು, ಮೂಲ ಸೌಕರ್ಯ ಸೌಲಭ್ಯಗಳು ಹಾಗೂ ವಿವಿಧ ಇಲಾಖೆಗಳ ಸಮನ್ವಯ ಸಹಕಾರವನ್ನು ನಾವು ಸದಾ ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಸಾವಿರಾರು ಸಂಖ್ಯೆಯ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ನಾಯಕರ ಭಾಗವಹಿಸುವಿಕೆಯಿಂದ ನಡೆದ ಈ ಜಾಂಬೋರಿದೇಶದ ಗಮನ ಸೆಳೆಯಿತು. ಇದರ ಯಶಸ್ಸು ನಮ್ಮ ಸಂಸ್ಥೆಯ ಇತಿಹಾಸದ ಸುವರ್ಣ ಆದ್ಯಾಯವಾಗಿ ದಾಖಲೆಯಾಗಿದೆ.

ಅವರು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಈ ಸಂದರ್ಭದಲ್ಲಿ ಅವರ ಜನಪರ ಆಡಳಿತ, ಮಾನವೀಯ ಮೌಲ್ಯಗಳು ಹಾಗೂ ಯುವಜನರ ಅಭಿವೃದ್ದಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇವೆ. ಮುಂದಿನ ದಿನಗಳಲ್ಲಿಯೂ ಅವರ ಮಾರ್ಗದರ್ಶನ ಮತ್ತು ಆಶೀರ್ವಾದ ನಮ್ಮ ಸಂಸ್ಥೆಗೆ ದೊರೆಯಲಿ ಎಂದು ಕೋರುತ್ತಾ, ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾಗೂ ಇನ್ನಷ್ಟು ಜನಸೇವೆಯ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಆಶಿಸುತ್ತೇನೆ.

**ಸಮಸ್ತ ಸ್ಕೌಟ್ಸ್ & ಗೈಡ್ಸ್ ಬಂಧುಗಳ ಪರವಾಗಿ**

**ಪಿ.ಜಿ.ಆರ್. ಸಿಂಧ್ಯ**

ರಾಜ್ಯ ಮುಖ್ಯ ಆಯುಕ್ತರು





**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಉಪಾಧ್ಯಕ್ಷರು**

ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ಮುಕ್ತಾ ಬಿ. ಕಾಗಲಿ

ಸಂಚಿಕೆಯ ವಾರ್ಷಿಕ ಚಂದಾ ರೂ. 200/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಿಕ ವಾರ್ತಾಪತ್ರಿಕೆ

KARNATAKA Scout & Guide
MONTHLY NEWS MAGAZINE

Vol: 67 Issue: 5 May - 2026

## ಒಳಪುಟಗಳಲ್ಲಿ...

• ರಾಜ್ಯ ಮುಖ್ಯ ಆಯುಕ್ತರ ನುಡಿ ...04
• ಜೂನ್ 2026ರ ಮಾಹೆಯ ಕಾರ್ಯಕ್ರಮ ಮತ್ತು ಚಟುವಟಿಕೆಗಳು ...06
• ಸಂಪಾದಕೀಯ ...07
• ದೂರದರ್ಶಿತ್ವ-2034 ...09
• ಕು॥ ಅನನ್ಯ ಪ್ರಸಾದ್‌ರವರಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಅಭಿನಂದನಾ ಸಮಾರಂಭ ...11
• State-level Yoga And Spiritual Camp, Sericulture Training Camp ...12
• State-level Star Gazing And Mapping Course - Doddaballapura ...13
• ರಾಜ್ಯಮಟ್ಟದ ಕಾರ್ಟೂನ್ ಮತ್ತು ಆರ್ಟಿಸ್ಟ್ ತರಬೇತಿ ಶಿಬಿರ - ದೊಡ್ಡಬಳ್ಳಾಪುರ ಮತ್ತು ರಾಜ್ಯ ಯುವ ಸಮಾವೇಶ 2026-ಕೊಂಡಜ್ಜಿ ...14
• State Level Archery And Rifle Training Camp And Nature Study Camp - Kondajji ...15
• ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಸನ ಜಿಲ್ಲಾ ಸಂಸ್ಥೆ ರಾಜ್ಯ ಮಟ್ಟದ ರೋವರ್ಸ್ ರೇಂಜರ್ಸ್
• ಸಾಹಿತ್ಯ ಕಮ್ಮಟ ಶಿಬಿರ - ಹಾಸನ ...16
• ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಚಾರಣ ಶಿಬಿರ 2026 - ಸುಬ್ರಹ್ಮಣ್ಯ, ದ.ಕ.ಜಿಲ್ಲೆ ..17
• ರಾಜ್ಯ ಮಟ್ಟದ ಚಾರಣ ಶಿಬಿರ - ಕೊಲ್ಲೂರು ...18
• ರಾಜ್ಯ ಮಟ್ಟದ ಪ್ರಕೃತಿ ಚಿಕಿತ್ಸೆ ಯೋಗ ಹಾಗೂ ಪೌಷ್ಠಿಕ ಆಹಾರ ಮಾಹಿತಿ ಶಿಬಿರ - ಉಜಿರೆ, ದ.ಕ.ಜಿಲ್ಲೆ ಹಾಗೂ ರಾಜ್ಯ ಮಟ್ಟದ ಕಡಲತೀರ ಚಾರಣ ಶಿಬಿರ - ಉಡುಪಿ ...19
• ರಾಜ್ಯ ಮಟ್ಟದ ಬದುಕುಳಿಯುವ ಮತ್ತು ಅಗ್ರಗಾಮಿ ಶಿಬಿರ - ಕೊಂಡಜ್ಜಿ ಹಾಗೂ ಆಯುಕ್ತರುಗಳ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ ...21
• 74ನೇ ಸಹಾಯಕ ನಾಯಕ ತರಬೇತುದಾರ ತರಬೇತಿ ಶಿಬಿರ (ಗೈಡ್ ವಿಭಾಗ) ...22
• ಕಬ್ ಮಾಸ್ಟರ್/ಫ್ಲಾಕ್ ಲೀಡರ್/ಸ್ಕೌಟ್ ಮಾಸ್ಟರ್/ಗೈಡ್ ಕ್ಯಾಪ್ಟನ್/ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳವರ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ
• ತರಬೇತಿ ಶಿಬಿರ - ದೊಡ್ಡಬಳ್ಳಾಪುರ ...23
• ಸ್ಕೌಟ್ ಸ್ಕಿಲೋ ಕಾರ್ಯಕ್ರಮ ...24
• ಜಿಲ್ಲಾ ವಾರ್ತೆಗಳು ...25
• "ಸಹಾಯಕ ನಾಯಕಿಯರ ತರಬೇತಿ (ALT-GW)ಒಂದು ಅನುಭವ" ...32
• ಶ್ರದ್ಧಾಂಜಲಿ ...34

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate



# ರಾಜ್ಯ ಮುಖ್ಯ ಆಯುಕ್ತರ ನುಡಿ

ಬೇಸಿಗೆ ರಜೆಯ ಸಂಭ್ರಮ, ಪ್ರವಾಸಗಳು ಮತ್ತು ವಿಶ್ರಾಂತಿಯ ದಿನಗಳು ಮುಗಿದು, ವಿದ್ಯಾರ್ಥಿಗಳು ಮತ್ತೆ ಶಾಲೆಯತ್ತ ಮುಖ ಮಾಡುತ್ತಿರುವ ಈ ಸಂದರ್ಭದಲ್ಲಿ ಹೊಸ ಶೈಕ್ಷಣಿಕ ವರ್ಷದ ಶುಭಾರಂಭವಾಗುತ್ತಿದೆ. ಈ ಶೈಕ್ಷಣಿಕ ವರ್ಷವುಎಲ್ಲ ವಿದ್ಯಾರ್ಥಿಗಳಿಗೆ ಜ್ಞಾನ, ಶಿಸ್ತು, ಆತ್ಮವಿಶ್ವಾಸ ಮತ್ತು ಸರ್ವತೋಮುಖ ಅಭಿವೃದ್ಧಿಯನ್ನು ತಂದುಕೊಡಲಿ ಎಂದು ನಮ್ಮ ಸಂಸ್ಥೆಯ ಪರವಾಗಿ ಶುಭ ಕೋರುತ್ತೇನೆ.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ವಿದ್ಯಾಭ್ಯಾಸ ಮತ್ತು ವೃತ್ತಿ ಜೀವನದ ದಿಕ್ಕನ್ನು ನಿರ್ಧರಿಸುವ ಮಹತ್ವದ ಹಂತದಲ್ಲಿದ್ದಾರೆ. ಅವರೆಲ್ಲರೂ ತಮ್ಮ ಆಸಕ್ತಿ, ಸಾಮರ್ಥ್ಯ ಮತ್ತು ಗುರಿಗಳಿಗೆ ಅನುಗುಣವಾಗಿ ಉತ್ತಮ ಶಿಕ್ಷಣ ಹಾಗೂ ವೃತ್ತಿ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು, ಜೀವನದಲ್ಲಿ ಉನ್ನತ ಸಾಧನೆಗಳನ್ನು ಮಾಡಲೆಂದು ಹಾರೈಸುತ್ತೇನೆ.

ಹೊಸ ಶೈಕ್ಷಣಿಕ ವರ್ಷವು ನಮ್ಮ ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲು ಹಾಗೂ ಬಲಪಡಿಸಲು ಸುವರ್ಣಾವಕಾಶವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆ, ತಾಲ್ಲೂಕು ಹಾಗೂ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು, ಆಯುಕ್ತರು, ದಳನಾಯಕರು ಮತ್ತು ನಾಯಕಿಯರು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ನಿಯಮಿತವಾಗಿ ಭೇಟಿ ನೀಡಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಾಲಾ ಆಡಳಿತದೊಂದಿಗೆ ಇನ್ನಷ್ಟು ನಿಕಟ ಬಾಂಧವ್ಯವನ್ನು ಬೆಳೆಸಿಕೊಂಡು ಹೆಚ್ಚಿನ ವಿದ್ಯಾರ್ಥಿಗಳನ್ನು ಚಳುವಳಿಗೆ ಸೇರ್ಪಡೆಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸೋಣ ಎಂದು ಆಶಿಸುತ್ತೇನೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ಕೇವಲ ಒಂದು ಸಂಘಟನೆಯಲ್ಲ; ಉತ್ತಮ ನಾಗರಿಕರನ್ನು ರೂಪಿಸುವ ಜೀವನ ಪದ್ಧತಿಯಾಗಿದೆ. ಸೇವೆ, ಶಿಸ್ತು, ಸ್ವಾವಲಂಬನೆ, ನಾಯಕತ್ವ ಹಾಗೂ ರಾಷ್ಟ್ರಪ್ರೇಮದ ಮೌಲ್ಯಗಳನ್ನು ಯುವಜನರಲ್ಲಿ ಬೆಳೆಸುವ ಮೂಲಕ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿರುವ ಈ ಚಳುವಳಿ, ತನ್ನ ಮೂಲ ಆಶಯಗಳನ್ನು ಉಳಿಸಿಕೊಂಡು ನಿರಂತರವಾಗಿ ಮುನ್ನಡೆಯುತ್ತಿದೆ. ಮೇ 2026ರಲ್ಲಿ ಕರ್ನಾಟಕ ರಾಜ್ಯ ಸಂಸ್ಥೆ ಆಯೋಜಿಸಿದ ವಿವಿಧ ಕಾರ್ಯಕ್ರಮಗಳು ಈ ಬದ್ದತೆಗೆ ಸಾಕ್ಷಿಯಾಗಿವೆ.

ದಿನಾಂಕ 04–05–2026 ರಿಂದ 08.05.2026ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ, ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯದ ಸಹಭಾಗಿತ್ವದಲ್ಲಿ ನಡೆದ **ರಾಜ್ಯ ಮಟ್ಟದ ಯೋಗ, ಪ್ರಕೃತಿ ಚಿಕಿತ್ಸೆ ಮತ್ತು ಪೌಷ್ಠಿಕ ಆಹಾರ ಮಾಹಿತಿ ಶಿಬಿರವು** ಆರೋಗ್ಯಕರ ಜೀವನ ಶೈಲಿಯ ಮಹತ್ವವನ್ನು ಸದಸ್ಯರಿಗೆ ಮನದಟ್ಟು ಮಾಡಿತು. ದೈಹಿಕ ಮತ್ತು ಮಾನಸಿಕ ಸದೃಢತೆಯನ್ನು ಉತ್ತೇಜಿಸುವ ಈ ಕಾರ್ಯಕ್ರಮವು ಯುವಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ನೆರವಾಗಿದೆ.

ದಿನಾಂಕ 12–05–2026 ರಿಂದ 16–05–2026 ರವರೆಗೆ ದಾವಣಗೆರೆಯ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ **ರಾಜ್ಯ ಮಟ್ಟದ ಯುವ ಶಿಬಿರ ಹಾಗೂ ಆಯುಕ್ತರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳು,** ದಿ:17.05.2025 ರಿಂದ 23–05–2026ರ ವರೆಗೆ ನಡೆದ **ಗೈಡ್ ವಿಭಾಗದ ಸಹಾಯಕ ನಾಯಕಿಯರ ತರಬೇತುದಾರರ ತರಬೇತಿ ಶಿಬಿರ,** ದಿನಾಂಕ 13–05–2026 ರಿಂದ 19–05–2026 ರವರೆಗೆ ದೊಡ್ಡಬಳ್ಳಾಪುರದ ತರಬೇತಿ ಕೇಂದ್ರದಲ್ಲಿ ಬೆಂಗಳೂರು ಉತ್ತರಜಿಲ್ಲಾ ಸಂಸ್ಥೆ ಆಯೋಜಿಸಿದ್ದ **ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಕಾರ್ಯಕ್ರಮ** ಮತ್ತು ದಿನಾಂಕ 20–05–2026 ರಿಂದ 26–05–2026 ರವರೆಗೆ ನಡೆದ **ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳು** ಅತ್ಯಂತ ಅರ್ಥಪೂರ್ಣ ಹಾಗೂ ಯಶಸ್ವಿಯಾಗಿ ಜರುಗಿದವು. ಇಂತಹ ಶಿಬಿರಗಳು ನಾಯಕತ್ವ, ಶಿಸ್ತು, ಸೇವಾ ಮನೋಭಾವ ಹಾಗೂ ಕೌಶಲ್ಯಾಭಿವೃದ್ಧಿಗೆ ಪೂರಕವಾಗಿದ್ದು, ರಾಜ್ಯಾದ್ಯಂತ ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುಟಿಕೆಗಳ ಗುಣಮಟ್ಟವನ್ನು ಹೆಚ್ಚಿಸುತ್ತದೆ.

ರಾಜ್ಯಾದ್ಯಂತ ನಮ್ಮ ಸಂಸ್ಥೆಯ ವತಿಯಿಂದ ಸ್ಥಳೀಯ ಸಂಸ್ಥೆಗಳ / ಕ್ಲಸ್ಟರ್ ಹಂತದಲ್ಲಿ ಆಯೋಜಿಸಲ್ಪಟ್ಟ ಬೇಸಿಗೆ ಶಿಬಿರಗಳು ಅತ್ಯಂತ ಯಶಸ್ವಿಯಾಗಿ ನೆರವೇರಿರುವುದು ಸಂತಸದ ಸಂಗತಿಯಾಗಿದೆ. ಈ ವರ್ಷ ಪ್ರಾಯೋಗಿಕವಾಗಿ ಆರಂಭಿಸಲಾದ ವಿಶೇಷ ಬೇಸಿಗೆ ಶಿಬಿರಗಳಿಗೂ ಅಭೂತಪೂರ್ವ ಸ್ಪಂದನೆ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ.

ಏಪ್ರಿಲ್ 28 ರಿಂದ ಮೇ 2 ರವರೆಗೆ ದೊಡ್ಡಮರಳವಾಡಿಯ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ಆಯೋಜಿಸಲಾದ **ರಾಜ್ಯ ಮಟ್ಟದ ರೇಷ್ಮೆ, ಆಧ್ಯಾತ್ಮಿಕ ಹಾಗೂ ಯೋಗ ತರಬೇತಿ ಶಿಬಿರ,** ದೊಡ್ಡಬಳ್ಳಾಪುರದ ನಮ್ಮ ತರಬೇತಿ ಕೇಂದ್ರದಲ್ಲಿ ರಾಷ್ಟ್ರಮಟ್ಟದ ವ್ಯಂಗ್ಯ ಚಿತ್ರಕಾರರಾದ ಶ್ರೀ ಬಿ.ಜಿ. ಗುಜ್ಜಾರಪ್ಪ ಅವರ ಮಾರ್ಗದರ್ಶನದಲ್ಲಿ ಏರ್ಪಡಿಸಿದ್ದ **ವ್ಯಂಗ್ಯ ಚಿತ್ರರಚನಾ ತರಬೇತಿ ಶಿಬಿರ, ರಾಜ್ಯಮಟ್ಟದ ನಕ್ಷತ್ರ ವೀಕ್ಷಣೆ ಮತ್ತು ಖಗೋಳ ವಿಜ್ಞಾನ ಶಿಬಿರ,** ಹಾಗೂ ಕೊಂಡಜ್ಜಿಯ ರಾಜ್ಯ ತರಬೇತಿ ಕೇಂದ್ರದಲ್ಲಿ ನಡೆದ **ರಾಜ್ಯ ಮಟ್ಟದ ರೈಫಲ್ ಮತ್ತು ಆರ್ಚರಿ ತರಬೇತಿ ಶಿಬಿರ,** ದಾವಣಗೆರೆ ಜಿಲ್ಲೆ ತೋಳಹುಣಸೆಯ ಶ್ರೀಮತಿ ಪಾರ್ವತಮ್ಮ ಮತ್ತು ಶಾಮನೂರು ಶಿವಶಂಕರಪ್ಪ ವಸತಿ ಶಾಲೆಯಲ್ಲಿ ನಡೆದ **ರಾಜ್ಯ ಮಟ್ಟದ ಪೈಪ್ ಬ್ಯಾಂಡ್ ತರಬೇತಿ ಶಿಬಿರಗಳು,** ಅತ್ಯಂತ ಯಶಸ್ವಿಯಾಗಿ ನಡೆಯುವ ಮೂಲಕ ಭಾಗವಹಿಸಿದ ಯುವಜನರಲ್ಲಿ ಹೊಸ ಜ್ಞಾನ, ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿವೆ. ಈ ಯಶಸ್ವಿ ಪ್ರಯತ್ನಗಳು ಮುಂದಿನ ವರ್ಷಗಳಲ್ಲಿ ಇನ್ನಷ್ಟು ವೈವಿಧ್ಯಮಯ, ನವೀನ ಹಾಗೂ ಉಪಯುಕ್ತ ಬೇಸಿಗೆ ಶಿಬಿರಗಳನ್ನು ಆಯೋಜಿಸಲು ನಮಗೆ ಸ್ಫೂರ್ತಿಯಾಗಿವೆ.

ಈ ಎಲ್ಲ ವಿಶೇಷ ಶಿಬಿರಗಳ ಯಶಸ್ಸಿಗೆ ತಮ್ಮ ಅಮೂಲ್ಯ ಸಹಕಾರ ನೀಡಿದ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದ ಪ್ರತಿನಿಧಿಗಳಿಗೆ, ರೇಷ್ಮೆ ಬೀಜ ಉತ್ಪಾದನೆ ಮತ್ತು ತಯಾರಿಕೆಯಲ್ಲಿ ಪರಿಣಿತರಾಗಿರುವ ರಾಜ್ಯ ಪ್ರಶಸ್ತಿ ಪುರಸ್ಕೃತ ಶ್ರೀ ಜಗದೀಶ್ ಕೀರಣಗೆರೆ ಅವರಿಗೆ, ಪ್ರಖ್ಯಾತ ವ್ಯಂಗ್ಯ ಚಿತ್ರಕಾರ ಶ್ರೀ ಬಿ.ಜೆ. ಗುಜ್ಜಾರಪ್ಪ ಅವರಿಗೆ, ನೆಹರು ತಾರಾಲಯದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಹಾಗೂ ಈ ಶಿಬಿರಗಳ ಆಯೋಜನೆ ಮತ್ತು ನಿರ್ವಹಣೆಯಲ್ಲಿ ಪ್ರತ್ಯಕ್ಷವಾಗಿ–ಪರೋಕ್ಷವಾಗಿ ನೆರವು ನೀಡಿದ ಎಲ್ಲಾ ಅಧಿಕಾರಿಗಳು, ತರಬೇತುದಾರರು, ಕಾರ್ಯಕರ್ತರು ಹಾಗೂ ಹಿತೈಷಿಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅವರ ಸಹಕಾರ ಮತ್ತು ಪ್ರೋತ್ಸಾಹವೇ ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳ ಯಶಸ್ಸಿನ ಹಿಂದಿನ ಪ್ರಮುಖ ಶಕ್ತಿಯಾಗಿದೆ.

ದಿನಾಂಕ 15–05–2026 ರಂದು ಬೀದರ್‌ನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಹಯೋಗದಲ್ಲಿ ನಿರ್ಮಿಸಲಾದ ಡಾ. ಎಸ್.ಎಸ್. ಸಿದ್ದರೆಡ್ಡಿ ಸ್ಕೌಟ್ ಭವನದ ನೂತನ ಕಟ್ಟಡದ ಲೋಕಾರ್ಪಣೆ ಸಮಾರಂಭವು ರಾಜ್ಯ ಸಂಸ್ಥೆಯ ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ಮಹತ್ವದ ಮೈಲಿಗಲ್ಲಾಯಿತು. ಈ ಭವನವು ಜಿಲ್ಲೆಯಲ್ಲಿ ಸ್ಕೌಟಿಂಗ್ ಚಟುವಟಿಕೆಗಳಿಗೆ ಶಾಶ್ವತನೆಲೆ ಕಲ್ಪಿಸುವ ನಿಟ್ಟಿನಲ್ಲಿ ಉಪಯುಕ್ತವಾಗಿದೆ. ಈ ಕಾರ್ಯಕ್ಕೆ ಸಹಕಾರ ನೀಡಿದ ಕೆ.ಕೆ.ಡಿ.ಬಿ. ಅಧ್ಯಕ್ಷರಾದ ಡಾ. ಅಜಯ್ ಸಿಂಗ್ ಅವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಹಾಗೂ ಜಿಲ್ಲೆಯ ಜನಪ್ರತಿನಿಧಿಗಳಿಗೆ ಹಾಗೂ ನಿವೇಶನವನ್ನು ನೀಡುವುದರ ಜೊತಗೆ, ಕಟ್ಟಡ ನಿರ್ಮಾಣಕ್ಕೆ ವಿಶೇಷ ಆಸಕ್ತಿ ಮತ್ತು ಬದ್ದತೆ ತೋರಿದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದ್ದರೆಡ್ಡಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ದಿನಾಂಕ 19–05–2026 ರಂದು ಬೆಂಗಳೂರಿನ ನಮ್ಮ ಕೇಂದ್ರ ಕಚೇರಿಯಲ್ಲಿ ಪ್ರಕಟಣಾ ಸಮಿತಿ, ಟ್ರಸ್ಟ್ ಸಮಿತಿ ಹಾಗೂ ಸಾಮಾಗ್ರಿ ಮಳಿಗೆ ಸಮಿತಿಯ ಸಭೆಗಳು ಯಶಸ್ವಿಯಾಗಿ ನಡೆದವು. ಸಂಸ್ಥೆಯ ಆಡಳಿತ, ಆರ್ಥಿಕ ನಿರ್ವಹಣೆ, ಪ್ರಕಟಣಾ ಚಟುವಟಿಕೆಗಳು ಹಾಗೂ ಭವಿಷ್ಯದ ಯೋಜನೆಗಳ ಕುರಿತು ಫಲಪ್ರದ ಚರ್ಚೆಗಳು ನಡೆದವು. ಅದೇ ದಿನ ರಾಜ್ಯ ಸಂಸ್ಥೆಯ ನೂತನ ಪ್ರಕಟಣೆಯಾದ "ದಿನಕ್ಕೊಂದು ಒಳ್ಳೆಯ ಕೆಲಸ (Good Turn A Day Book)" – ಪುಸ್ತಕವನ್ನು ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರು ಬಿಡುಗಡೆ ಮಾಡಿದ್ದು ಸಂದರ್ಭೋಚಿತವಾಗಿತ್ತು.

ದಿನಾಂಕ : 16.05.2026 ರಿಂದ 20–05–2026 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಮಣ್ಯದ ಕುಮಾರಸ್ವಾಮಿ ವಿದ್ಯಾಲಯದಲ್ಲಿ ನಡೆದ ರಾಜ್ಯ ಮಟ್ಟದ ರೋವರ್ಸ್–ರೇಂಜರ್ಸ್ ಹಾಗೂ ಸ್ಕೌಟ್ಸ್–ಗೈಡ್ಸ್ ಪ್ರಕೃತಿ ಅಧ್ಯಯನಚಾರಣ ಶಿಬಿರ ಯುವ ಜನರಲ್ಲಿ ಪರಿಸರ ಜಾಗೃತಿ, ಸಾಹಸ ಮನೋಭಾವ ಮತ್ತು ಪ್ರಕೃತಿ ಸಂರಕ್ಷಣೆಯ ಬಗ್ಗೆ ಹೆಚ್ಚಿನಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ದಿನಾಂಕ 23–05–2026 ರಿಂದ 26–05–2026 ರವರೆಗೆ ರಾಜ್ಯ ಸಂಸ್ಥೆ ಆಯೋಜಿಸಿದ್ದ "Vision Echo Workshop – 2034" ಕಾರ್ಯಕ್ರಮವು ರಾಜ್ಯ ಸಂಸ್ಥೆಯ ಮುಂದಿನ ದಶಕದ ದೂರದೃಷ್ಟಿಯ ಯೋಜನೆಗಳಿಗೆ ದಿಕ್ಸೂಚಿಯಾಯಿತು. ವಿವಿಧ ಜಿಲ್ಲೆಗಳ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಹಿರಿಯ ಪದಾಧಿಕಾರಿಗಳು ಭಾಗವಹಿಸಿ ಸದಸ್ಯತ್ವ ವೃದ್ಧಿ, ತರಬೇತಿ ಗುಣಮಟ್ಟ, ಆಡಳಿತ ಸುಧಾರಣೆ ಮತ್ತು Vision–2034 ಗುರಿಗಳ ಕುರಿತು ಸಮಗ್ರ ಚರ್ಚೆ ನಡೆಸಿದ್ದು ಸಂತೋಷದ ಸಂಗತಿ. ಚರ್ಚೆಗಳೆಲ್ಲವೂ ವಿಷಯಾಧಾರಿತವಾಗಿ, ಗಂಭೀರತೆಯಿಂದ ಕೂಡಿದ್ದು ವಿಶೇಷತೆಯಾಗಿತ್ತು.

ಇದೇ ಸಂದರ್ಭದಲ್ಲಿ 25–05–2026 ರಂದು ನಡೆದ ರಾಜ್ಯ ವಯಸ್ಕ ಸಂಪನ್ಮೂಲ ಸಮಿತಿ ಸಭೆ ಹಾಗೂ ರಾಜ್ಯ ತರಬೇತಿ ಸಮಿತಿ ಸಭೆಗಳಲ್ಲಿ ರಾಜ್ಯ ಸಂಸ್ಥೆಯ ಮುಂದಿನ ಚಟುವಟಿಕೆಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಆಡಳಿತಾತ್ಮಕ ವಿಷಯಗಳ ಕುರಿತು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಮೇ ತಿಂಗಳಿನಲ್ಲಿ ಆಯೋಜಿಸಲಾದ ಈ ಎಲ್ಲಾ ಕಾರ್ಯಕ್ರಮಗಳು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಯುವಜನರ ಸರ್ವಾಂಗೀಣ ಅಭಿವೃದ್ಧಿ, ನಾಯಕತ್ವನಿರ್ಮಾಣ, ಪರಿಸರಜಾಗೃತಿ, ಆರೋಗ್ಯಕರ ಜೀವನಶೈಲಿ ಹಾಗೂ ಸಾಮಾಜಿಕ ಸೇವೆಯ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಸಾಕ್ಷಿಯಾಗಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ನನಗೆ ಅಪಾರ ಸಂತೋಷ ಹಾಗೂ ತೃಪ್ತಿಯನ್ನು ನೀಡಿದೆ. ಸದಸ್ಯರು, ನಾಯಕರು ಮತ್ತು ಪದಾಧಿಕಾರಿಗಳು ಪ್ರದರ್ಶಿಸಿದ ಉತ್ಸಾಹ, ಶಿಸ್ತು ಹಾಗೂ ಸಂಘಟನೆಯ ಮೇಲಿನ ಬದ್ದತೆ ಸಂಸ್ಥೆಯ ಉಜ್ವಲ ಭವಿಷ್ಯದ ಸೂಚಕವಾಗಿದೆ ಎಂದು ಭಾವಿಸುತ್ತೇನೆ. ಈ ಎಲ್ಲಾ ಕಾರ್ಯಕ್ರಮಗಳ ಯಶಸ್ಸಿಗೆ ಸಹಕಾರ ನೀಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು, ಸ್ಥಳೀಯ ಸಂಘ–ಸಂಸ್ಥೆಗಳು ಹಾಗೂ ಎಲ್ಲ ಸಹೋದ್ಯೋಗಿಗಳಿಗೆ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇಂದಿನ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ, ಸ್ಕೌಟಿಂಗ್ ಮತ್ತು ಗೈಡಿಂಗ್ ಚಳುವಳಿಯ ಪರಂಪರೆ, ಮೌಲ್ಯಗಳು ಮತ್ತು ಆದರ್ಶಗಳನ್ನು ಕಾಪಾಡಿಕೊಳ್ಳುವುದರ ಜೊತೆಗೆ, ಹೊಸ ಆಲೋಚನೆಗಳು, ನವೀನತೆಗಳು, ತಂತ್ರಜ್ಞಾನ ಮತ್ತು ಸೃಜನಾತ್ಮಕ ಕಾರ್ಯಚಟುವಟಿಕೆಗಳನ್ನು ಅಳವಡಿಸಿಕೊಂಡು ಚಳುವಳಿಯ ವಿಸ್ತರಣೆ ಹಾಗೂ ಅಭಿವೃದ್ದಿಗೆ ಒತ್ತು ನೀಡುವುದು ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಸಂಸ್ಥೆಯು ರಾಜ್ಯದಾದ್ಯಂತ ಗುಣಮಟ್ಟದ ತರಬೇತಿಗಳು, ಸಾಹಸ ಚಟುವಟಿಕೆಗಳು, ಸೇವಾ ಕಾರ್ಯಕ್ರಮಗಳು ಹಾಗೂ ವ್ಯಕ್ತಿತ್ವ ವಿಕಸನದ ಯೋಜನೆಗಳ ಮೂಲಕ ಯುವಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿದೆ. ಈ ಯಶಸ್ಸಿನ ಹಿಂದೆ ಶ್ರಮಿಸುತ್ತಿರುವ ಶಿಕ್ಷಕರು, ನಾಯಕರು, ಪದಾಧಿಕಾರಿಗಳು, ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಸಹಕಾರ ಶ್ಲಾಘನೀಯವಾಗಿದೆ.

**"ಸಿದ್ದರಾಗಿರಿ – Be Prepared"** ಎಂಬ ಧ್ಯೇಯವಾಕ್ಯವನ್ನು ಜೀವನದ ಮೌಲ್ಯವಾಗಿ ಅಳವಡಿಸಿಕೊಂಡು ಸಮಾಜ ಸೇವೆ, ರಾಷ್ಟ್ರ ನಿರ್ಮಾಣ ಮತ್ತು ಮಾನವೀಯ ಮೌಲ್ಯಗಳ ಪ್ರಸಾರಕ್ಕೆ ಚಳುವಳಿಯ ಪ್ರತಿಯೊಬ್ಬ ಸದಸ್ಯರೂ ತಮ್ಮ ಕೊಡುಗೆಯನ್ನು ನೀಡಲಿ ಎಂಬುದು ನನ್ನ ಆಶಯ. ನಾವೆಲ್ಲರೂ ಇನ್ನಷ್ಟು ಸಮರ್ಪಣಾಭಾವದಿಂದ ಕಾರ್ಯನಿರ್ವಹಿಸೋಣ.

## ಎಲ್ಲರಿಗೂ ಶುಭವಾಗಲಿ.

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಜೂನ್ 2026ರ ಮಾಹೆಯ ಕಾರ್ಯಕ್ರಮ ಮತ್ತು ಚಟುವಟಿಕೆಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಕೃಷ್ಣರಾಜೇಂದ್ರ ಒಡೆಯರ್‌ರವರ ಜನ್ಮ ದಿನಾಚರಣೆ | 04.06.2026 | ಆನ್‌ಲೈನ್ ಮೂಲಕ |
| 2 | ಪರಿಸರ ದಿನಾಚರಣೆ | 05.06.2026 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಸಂಸ್ಥೆ ಹಂತದಲ್ಲಿ |
| 3 | ರಾಜ್ಯ ಮಟ್ಟದ ಕಬ್ ಮಾಸ್ಟರ್/ ಫ್ಲಾಕ್ ಲೀಡರ್/ ಸ್ಕೌಟ್ ಮಾಸ್ಟರ್/ ಗೈಡ್ ಕ್ಯಾಪ್ಟನ್‌ರವರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳು | 20.06.2026 ರಿಂದ 26.06.2026 | ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 4 | ಅಂತರಾಷ್ಟ್ರೀಯಯೋಗ ದಿನಾಚರಣೆ (ಯೋಗ ಸಪ್ತಾಹ ಕಾರ್ಯಕ್ರಮಗಳು) | 21.06.2026 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಸಂಸ್ಥೆ ಹಂತದಲ್ಲಿ |
| 5 | ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪ್ರತಿಭಾನ್ವಿತ (ಟಾಪರ್ಸ್) ರೋವರ್ಸ್-ರೇಂಜರ್ಸ್‌ಗಳಿಗೆ ಅಭಿನಂದನಾ ಸಮಾರಂಭ | ಜೂನ್ 2026 | ಉಡುಪಿ |
| 6 | ಕರ್ನಾಟಕ ಸ್ಕೌಟ್-ಗೈಡ್ ಮಾಸಪತ್ರಿಕೆಯ ಶತಮಾನೋತ್ಸವ ಕಾರ್ಯಕ್ರಮ | ಜೂನ್ 2026 | ಮೈಸೂರು |
| 7 | ಸ್ಕೌಟರ್ಸ್-ಗೈಡರ್ಸ್ ಸಮಾವೇಶಗಳು ಹಾಗೂ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್ ಮಹಾಸಭೆಗಳು | ಜೂನ್ 2026 | ಸ್ಥಳೀಯ ಸಂಸ್ಥೆಗಳಲ್ಲಿ |
| 8 | ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ತೃತೀಯ ಸೋಪಾನ ಪರೀಕ್ಷೆಗಳು | ಜೂನ್ 2026 | ಜಿಲ್ಲಾ ಮಟ್ಟದಲ್ಲಿ |
| 9 | ರೋವರ್-ರೇಂಜರ್‌ಗಳಿಗೆ ನಿಪುಣ್ ಪರೀಕ್ಷಾ ಶಿಬಿರ | ಜೂನ್ 2026 | ಜಿಲ್ಲಾ ಮಟ್ಟದಲ್ಲಿ |
| 10 | ತೃತೀಯ ಚರಣಕಬ್ಸ್ ಮತ್ತು ಸುವರ್ಣ ಪಂಕ್ ಬುಲ್‌ಬುಲ್ಸ್ ಪರೀಕ್ಷಾ ಶಿಬಿರ | ಜೂನ್ 2026 | ಜಿಲ್ಲಾ ಮಟ್ಟದಲ್ಲಿ |
| 11 | ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಶಿಬಿರ | ಜೂನ್ 2026 | ಜಿಲ್ಲಾ ಮಟ್ಟದಲ್ಲಿ |

# ಸಂಪಾದಕೀಯ



## ಭೌತಿಕ ಪರಿಸರದ ಅಭಿವೃದ್ಧಿಯೊಂದಿಗೆ ನೈಸರ್ಗಿಕ ಪರಿಸರದ ಸಂರಕ್ಷಣೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಸಂಸ್ಥೆಯ ವಿಶಿಷ್ಟ ಕಾರ್ಯಚಟುವಟಿಕೆಗಳು

"ವ್ಯಕ್ತಿ ಪರಿಸರದ ಕೂಸು" (**Man is the product of environment**) ಎಂಬುದು ನಿರ್ವಿವಾದ. ಅದರಂತೆ ಪ್ರತಿಯೊಬ್ಬ ವ್ಯಕ್ತಿಯೂ ಅರ್ಹ ರೀತಿಯಲ್ಲಿ ಬಾಳಿ, ಬದುಕಿ ಬೆಳೆಯಬೇಕಾದಲ್ಲಿ ಅವನ ಪರಿಸರವೂ ಬಹಳಷ್ಟು ಪ್ರಭಾವವನ್ನು ಬೀರುವುದಾಗಿರುವುದು. ಈ ಪರಿಸರ ಮುಖ್ಯವಾಗಿ 2 ರೀತಿಯದ್ದಾಗಿರುವುದು. ಮೊದಲನೇದಾಗಿ ಅವನ ಭೌತಿಕ ಪರಿಸರ(**Physical Environment**), ಎರಡನೇಯದಾಗಿ ಅವನ ನೈಸರ್ಗಿಕ ಪರಿಸರ (**Natural Environment**).

### ಭೌತಿಕ ಪರಿಸರ

ಭೌತಿಕ ಪರಿಸರವು ಅವನ ಹುಟ್ಟು, ಬೆಳವಣಿಗೆ, ಮಾರ್ಗದರ್ಶನ, ಮುಂತಾದವುಗಳನ್ನು ಅವಲಂಭಿಸಿದ್ದು, ಅವುಗಳನ್ನು ಅವನು ತನ್ನ ತಂದೆ–ತಾಯಿ, ಬಂಧು–ಬಳಗ, ಶಾಲಾ–ಕಾಲೇಜುಗಳು ಮತ್ತು ಸಮುದಾಯ, ಮುಂತಾದವುಗಳಿಂದ ಪ್ರಭಾವಿತನಾಗುವುದಾಗಿದೆ. ಹೀಗಾಗಿ ಉತ್ತಮ ಭೌತಿಕ ಪರಿಸರದ ವ್ಯವಸ್ಥೆಯಲ್ಲಿ ಗುಣಾತ್ಮಕ ಶಿಕ್ಷಣದ, ಜೀವನ ಶಿಕ್ಷಣದ ಅವಶ್ಯಕತೆ ಇದ್ದು ಈ ಬಗ್ಗೆ ಶಿಕ್ಷಣ ಇಲಾಖೆಗಳೊಂದಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಬಹಳಷ್ಟು ಸಹಯೋಗ ಹೊಂದಿ ನಿರ್ವಹಿಸುತ್ತಿರುವುದು ಹೆಮ್ಮೆದಾಯಕ. **Scout-Skillo** ಕಾರ್ಯಕ್ರಮಗಳ ಅಡಿಯಲ್ಲಿ, ದಿನಾಂಕ : 03.05.2026 ರಂದು ಶ್ರೀಮತಿ ವಂದನಾ ಶಾಸ್ತ್ರಿ ರವರು ನೀಡಿದ **Public Speaker** ಕೌಶಲ್ಯತೆ ಬಗ್ಗೆ ಮತ್ತು ದಿನಾಂಕ : 17.05.2026 ರಂದು ಕು. ಕಾವ್ಯರವರು ನೀಡಿದ "ಮಕ್ಕಳ ಮಾನಸಿಕ ಸಮಸ್ಯೆಗಳು ಮತ್ತು ಪರಿಹಾರ" ಉಪನ್ಯಾಸ ಬಹಳಷ್ಟು ಪ್ರಭಾವ ಬೀರಿರುವುದು ಉಲ್ಲೇಖಾರ್ಹ. ಇದನ್ನು ಇನ್ನೂ ಹೆಚ್ಚು ಫಲಪ್ರದವಾಗಿ ಅರ್ಥಗರ್ಭಿತವಾಗಿ ನಿರ್ವಹಿಸುವಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಡಾ|| ಪಿ.ಜಿ.ಆರ್. ಸಿಂಧ್ಯರವರ ನೇತೃತ್ವದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚು ಕಾರ್ಯಕ್ರಮ, ಚಟುವಟಿಕೆಗಳ, ತರಬೇತಿಗಳೊಂದಿಗೆ ಮುನ್ನಡೆಯುತ್ತಿರುವುದು ಸ್ಪಷ್ಟ. ಈ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು 2034ರ ವರೆಗಿನ ಸಾಧನೆಯ ದೂರದೃಷ್ಟಿಯ ಗುರಿಗಳನ್ನು ನಿರ್ಧರಿಸಿ ಮುನ್ನಡೆಯುವಲ್ಲಿ **VISION**–2034 ಇಛ್ಝಿಂ ಫುಂಡಿಇಝುಂಠಿ ಅನ್ನು ನಮ್ಮ ರಾಜ್ಯದಲ್ಲಿ ದಿನಾಂಕ : 23.05.2026 ರಿಂದ 26.05.2026ರ ವರೆಗೆ ರಾಷ್ಟ್ರ, ರಾಜ್ಯದ ತಜ್ಞರೊಂದಿಗೆ ರಾಜ್ಯದ ಎಲ್ಲಾ ಹಂತದ ಅಧಿಕಾರಿಗಳು, ಸ್ಥಳೀಯ / ಜಿಲ್ಲಾ / ರಾಜ್ಯ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಸಮಾಲೋಚಿಸಿ, ನಿರ್ಧರಿಸಲ್ಪಟ್ಟಿರುವುದು ಹೆಮ್ಮೆದಾಯಕ. ಈ ಸಂದರ್ಭದಲ್ಲಿ ದೂರದೃಷ್ಟಿ–2034ರ ನಿರ್ಧಾರಗಳಲ್ಲಿ ಈ ಕೆಳಕಂಡ ಕಾರ್ಯತಂತ್ರಗಳಿಗೆ ಆದ್ಯತೆಗಳನ್ನು ನೀಡಿ ಅವುಗಳ ಸಕ್ರಿಯ ಅನುಷ್ಠಾನದಲ್ಲಿ ಉದ್ದೇಶಗಳನ್ನು ನಿರ್ಧರಿಸಿ (**Objective**) ಅಗತ್ಯ ಕಾರ್ಯನಿರ್ವಹಣಾ ಕ್ರಮಗಳನ್ನು (**Action Plan**) ರಚಿಸಿ ಅದರಂತೆ ಇತರೆ ಎಲ್ಲಾ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳನ್ನು ನಿರ್ವಹಿಸುವಲ್ಲಿ ನಿರ್ಧರಿಸಲಾಗಿರುವುದು.

1. ಶೈಕ್ಷಣಿಕ ಪದ್ಧತಿಗಳು (ಯುವ ಕಾರ್ಯಕ್ರಮ ಮತ್ತು ವಯಸ್ಕ ನಾಯಕರ ಸಂಪನ್ಮೂಲ ಅಭಿವೃದ್ಧಿ)
2. ಆಡಳಿತ ವ್ಯವಸ್ಥೆ
3. ಹಣಕಾಸು
4. ಸಂಪರ್ಕ ಮತ್ತು ಸಾರ್ವಜನಿಕ ಸಂಬಂಧ ಮತ್ತು ಗುರುತು ಮಾಡಿಸುವುದು (**Branding**)
5. ವೈವಿಧ್ಯತೆ ಮತ್ತು ಒಳಗೊಳ್ಳುವಿಕೆ
6. ಬೆಳವಣಿಗೆ (**Growth**)

ರಾಜ್ಯ ಮಟ್ಟದ **VISION**–2034 ಕಾರ್ಯ ಯೋಜನೆಯಂತೆ ಜಿಲ್ಲಾ / ಸ್ಥಳೀಯ ಹಂತಗಳಲ್ಲಿ **VISION** 2034 **Echo Workshop** ಗಳು ನಿರ್ವಹಣೆ ಆಗಬೇಕಾಗಿದ್ದು, ಆ ಬಗ್ಗೆ ಸೂಕ್ತ ಮಾರ್ಗದರ್ಶನ ಅವರೆಲ್ಲರಿಗೂ ದೊರೆತಿರುವುದು ಸ್ಪಷ್ಟ.

ಈ ರಾಜ್ಯ ಮಟ್ಟದ **VISION**–2034 **Echo Workshop** ನ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ / ಸ್ಥಳೀಯ ಸಂಸ್ಥೆಗಳವರು ತಮ್ಮ ತಮ್ಮ ಜಿಲ್ಲಾ / ಸ್ಥಳೀಯ ಸಂಸ್ಥೆಯ **VISION** 2034 **Echo Workshop** ಏರ್ಪಡಿಸಿ ಆ ಬಗ್ಗೆಯ ಅಂತಿಮ ವರದಿಯನ್ನು ರಾಜ್ಯ ಸಂಸ್ಥೆಗೆ ಕಳುಹಿಸಲು ವಿನಂತಿಸಿದೆ.

### ನೈಸರ್ಗಿಕ ಪರಿಸರ

ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ್ಯ ಮತ್ತು ನಡವಳಿಕೆಗಳನ್ನು ವೃದ್ಧಿಸುವಲ್ಲಿ ಪೂರಕವಾಗಿ ಪ್ರತಿ ಭಾನುವಾರದಂದು ಬೆಳಗ್ಗೆ 11 ರಿಂದ 12 ಗಂಟೆಯವರೆಗೆ **Scout-Skillo Online Webinar** ಗಳನ್ನು, ತಜ್ಞರನ್ನು ಆಹ್ವಾನಿಸಿ ನಿರ್ವಹಿಸುತ್ತಿರುವುದು ಸರಿಯಷ್ಟೆ. ಅದರಂತೆ ದಿನಾಂಕ : 10.05.2026 ರಂದು ಡಾ|| ಭಾಷಿಣಿ ರವರು ನೀಡಿದ "ಆಹಾರವೇ ಔಷಧಿ" ವೆಬಿನಾರ್ ಕಾರ್ಯಕ್ರಮ, ದಿನಾಂಕ : 24.05.2026 ರಂದು ಶ್ರೀ ಶ್ರೀನಿವಾಸಲು,

ಭಾ.ಅ.ಸೇ, ಪ್ರಧಾನ ಕಾರ್ಯದರ್ಶಿಗಳು, ಪರಿಸರ ಇಲಾಖೆ ನೀಡಿದ **"ಪರಿಸರ ಸಂರಕ್ಷಣೆಯಲ್ಲಿ ಸಮಾಜದ ಪಾತ್ರ"** ವೆಬಿನಾರ್ ಕಾರ್ಯಕ್ರಮ ಮತ್ತು ದಿನಾಂಕ : 31.05.2026 ರಂದು ಡಾ॥ ನರೇಂದ್ರ ರೈ ದೇರ್ಲ ರವರಿಂದ ನಿರ್ವಹಿಸಲ್ಪಟ್ಟ **"ಪ್ರಕೃತಿ ಮತ್ತು ನಾವು"** ವಿಷಯಗಳು ಅವರುಗಳು ನೈಸರ್ಗಿಕ ಪರಿಸರದ ಬಗ್ಗೆ ನೀಡಿದ ಜ್ಞಾನ, ಮಾರ್ಗದರ್ಶನ ಬಹಳ ಅರ್ಥಪೂರ್ಣವಾಗಿದ್ದಿತು. ಎಲ್ಲಿಯ ವರೆಗೆ ನಾವು ಮರಗಿಡಗಳನ್ನು ಪೋಷಿಸಲು ನೆಟ್ಟು ಬೆಳೆಸಲು ಕಲಿಯುವುದಿಲ್ಲವೋ ಅಲ್ಲಿಯ ತನಕ ನಮಗೂ ಮತ್ತು ನಮ್ಮ ಮುಂದಿನ ಸಂತತಿಗೂ ದುಃಖ ತಪ್ಪಿದ್ದಲ್ಲ ಎಂಬುದನ್ನು ಸ್ಪಷ್ಟಪಡಿಸಿರುವರು. ಅಲ್ಲದೇ, ನಿಸರ್ಗದ ಒಡೆತನ ತನ್ನದೆಂದು ಮನಷ್ಯ ಭಾವಿಸುವುದು ಮತ್ತು ಮನುಷ್ಯ ತಾನು, ಈ ಜೀವ ಜಗತ್ತಿನ ಒಡೆಯ ಎಂಬ ಭ್ರಮೆಯನ್ನು ಮೊದಲು ಕಿತ್ತೊಗೆಯಬೇಕೆಂದು ವಿವರಿಸಿರುವುದು ಬಹಳ ಮನೋಜ್ಞವಾಗಿರುವುದು.

ಜೊತೆಗೆ ಮರವೆಂದರೆ ನೀರು, ನೀರೆಂದರೆ ಆಹಾರ, ಆಹಾರದಿಂದಲೇ ಜೀವನ ಎಂಬ ನಾಣ್ನುಡಿಯನ್ನು ಅರಿತು ಸಸ್ಯ ಸಂರಕ್ಷಣೆ ಕಾರ್ಯ ನಿರಂತರವಾಗಿ ನಿರ್ವಹಣೆಯಾಗುವಲ್ಲಿ ಸರ್ವರೂ ಕಾರ್ಯತತ್ಪರರಾಗುವಲ್ಲಿ ಪ್ರೇರೇಪಿಸಿರುವುದು ಶ್ಲಾಘನೀಯ. ಇದನ್ನು ಅರಿತು ಜೂನ್ 2026ರಲ್ಲಿ ನಿರ್ವಹಣೆ ಆಗುವ ಪರಿಸರ ದಿನಾಚರಣಾ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಲು ವಿನಂತಿಸುತ್ತೇನೆ.

ಶೈಕ್ಷಣಿಕ ಚಟುವಟಿಕೆಗಳ ರಜಾ ಅವಧಿ ಮೇ 2026ರ ಮಾಹೆ ಆಗಿದ್ದರೂ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು, ಕಾರ್ಯಕ್ರಮಗಳು, ತರಬೇತಿಗಳು, ಕಾರ್ಯಗಾರಗಳು ಎಡೆಬಿಡದೆ ನಿರ್ವಹಿಸಲ್ಪಟ್ಟು ಯಶಸ್ವಿಯಾಗಿರುವುದು ಅಭಿನಂದನಾರ್ಹ. ಜೊತೆಗೆ ಅನೇಕ ಬೇಸಿಗೆ ಶಿಬಿರಗಳು, ರೋವರ್ಸ್-ರೇಂಜರ್ಸ್‌ಗಳಿಗೆ ವಿಶೇಷ ವಿಷಯಾಧಾರಿತ ಬೇಸಿಗೆ ಶಿಬಿರಗಳು, ಆಯ್ದ ತಜ್ಞ ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ನಿರ್ವಹಣೆಯಾಗಿ ಭಾಗೀದಾರರುಗಳೆಲ್ಲರ ಮನ್ನಣೆಗೆ ಪಾತ್ರ ಆಗಿರುವುದು ನಮಗೆಲ್ಲ ಬಹಳ ಸಂತೋಷ ಮತ್ತು ಉತ್ಸಾಹವನ್ನು ನೀಡಿದೆ.

ಒಟ್ಟಿನಲ್ಲಿ ಮೇ 2026ರ ಎಲ್ಲಾ ಕಾರ್ಯಕ್ರಮ, ಚಟುವಟಿಕೆಗಳು, ತರಬೇತಿಗಳು, ಕಾರ್ಯಗಾರಗಳು, ಬೇಸಿಗೆ ಶಿಬಿರಗಳು ಯಶಸ್ವಿಯಾಗಿ ನಿರ್ವಹಣೆ ಆಗಿ, ಸ್ಕೌಟ್ಸ್-ಗೈಡ್ಸ್ ಚಳುವಳಿಯ ಧ್ಯೇಯೋದ್ದೇಶಗಳನ್ನು ಸಕ್ರಿಯವಾಗಿ ಅನುಷ್ಠಾನವಾಗುವಲ್ಲಿ ಶ್ರಮಿಸಿದ, ಪ್ರೋತ್ಸಾಹಿಸಿದ ಸರ್ವರಿಗೂ ರಾಜ್ಯ ಸಂಸ್ಥೆಯ ಪರವಾಗಿ ಅನಂತಾನಂತ ಅಭಿನಂದನೆಗಳನ್ನು ಈ ಮೂಲಕ ತಿಳಿಸುತ್ತೇನೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ಅಭಿನಂದನೆಗಳು



ಕುಮಾರ ಜಿ.ಮನೋಜ್, ಸ್ಕೌಟ್ ವಿದ್ಯಾರ್ಥಿ, ಮುರಾರ್ಜಿ ದೇಸಾಯಿ ವಸತಿ ಶಾಲೆ, ಮಾದನಬಾವಿ, ನ್ಯಾಮತಿ ತಾಲೂಕು, ದಾವಣಗೆರೆ ಜಿಲ್ಲೆ, ಈತನು 2022-2023ರಲ್ಲಿ ಸ್ಕೌಟ್ ವಿಭಾಗದಲ್ಲಿ ರಾಜ್ಯಪಾಲರ ಪ್ರಶಸ್ತಿಯನ್ನು ಪಡೆದಿದ್ದು ಪ್ರಸ್ತುತ **ಭಾರತೀಯ ಸೇನೆಗೆ** ಆಯ್ಕೆಯಾಗಿರುತ್ತಾನೆ ಈತನಿಗೆ ರಾಜ್ಯ ಸಂಸ್ಥೆಯ ಪರವಾಗಿ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ

# ದೂರದರ್ಶಿತ್ವ–2034




ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯದ ವಿಜ್ಹನ್ ಎಕೋ ಕಾರ್ಯಾಗಾರದ ದೂರದರ್ಶಿತ್ವ–2034ನ್ನು ದಿನಾಂಕ : 23 ರಿಂದ 26 ಮೇ 2026ರ ವರೆಗೆ ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು.

ಡಾ॥ ಪಿ.ಜಿ.ಆರ್. ಸಿಂಧ್ಯ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮತ್ತು ಶ್ರೀ ಎ.ಎಸ್. ಮಧುಸೂದನ್ ಅವಾಲ, ಉಪ ಅಂತಾರಾಷ್ಟ್ರೀಯ ಆಯುಕ್ತರು ಇವರುಗಳ ಮಾರ್ಗದರ್ಶನದಲ್ಲಿ ಕಾರ್ಯಾಗಾರದ ನಾಯಕರಾಗಿ ಶ್ರೀ ಅನಲೇಂದ್ರ ಶರ್ಮ, ಸಹಾಯಕ ನಿರ್ದೇಶಕರು (ಯುವ ಕಾರ್ಯಕ್ರಮ), ರಾಷ್ಟ್ರೀಯ ಸಂಸ್ಥೆ, ನವದೆಹಲಿ, ಇವರು ಮಾರ್ಗದರ್ಶನ ನೀಡಿ, ಕಾರ್ಯಾಗಾರದಲ್ಲಿ ಕರ್ನಾಟಕ ರಾಜ್ಯದ ವಿಜನ್ ಹೇಳಿಕೆ, ಮುಖ್ಯಾಂಶಗಳು, ಉದ್ದೇಶ, ಉದ್ದೇಶದ ಸಾಧನೆಗಾಗಿ ಕ್ರಿಯಾಯೋಜನೆ, ಇತ್ಯಾದಿಗಳ ಬಗ್ಗೆ ಅವರುಗಳ ಗುಂಪುಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸಿ ಶಿಕ್ಷಣ ಪದ್ಧತಿಗಳು, ಆಡಳಿತ, ಹಣಕಾಸು, ಸಾರ್ವಜನಿಕ ಸಂಪರ್ಕ ಮತ್ತು ಪಾಲುದಾರಿಕೆ, ಬೆಳವಣಿಗೆ ಇತ್ಯಾದಿ ಅಂಶಗಳ ಬಗ್ಗೆ ಕರಡು ಪ್ರತಿಯನ್ನು ಸಿದ್ಧಪಡಿಸಲಾಯಿತು.

ಕಾರ್ಯಾಗಾರದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ಸ್ & ಗೈಡ್ಸ್), ಜಿಲ್ಲಾ ಕಾರ್ಯದರ್ಶಿಗಳು, ಸಹಾಯಕ ಜಿಲ್ಲಾ ಆಯುಕ್ತರು, ಜಿಲ್ಲಾ ಕೇಂದ್ರ ಕಛೇರಿ ಆಯುಕ್ತರು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ರಾಜ್ಯ ಸಂಸ್ಥೆ ಪದಾಧಿಕಾರಿಗಳು ಒಟ್ಟು 150 ಜನರು ಭಾಗವಹಿಸಿದ್ದರು.

ಶ್ರೀ ಮಧುಸೂದನ್ ಅವಾಲ ಅವರು ಉತ್ತಮ ಮಾರ್ಗದರ್ಶನವನ್ನು ನೀಡಿದರು ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಕಾರ್ಯಾಗಾರದ ನಿರ್ದೇಶಕರಾಗಿದ್ದರು. ಶ್ರೀ ಬಿ.ಕೆ. ಬಸವರಾಜ, ಸಹಾಯಕ ರಾಜ್ಯ ಆಯುಕ್ತರು, ಮೈಸೂರು ಇವರು ಕಾರ್ಯಾಗಾರದಲ್ಲಿ ಸಹಕರಿಸಿದರು. ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್), ಶ್ರೀಮತಿ ರಾಧ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈ), ಶ್ರೀಮತಿ ಮುಕ್ತಾ ಬಿ. ಕಾಗಲಿ, ಕೇಂದ್ರ ಸ್ಥಾನಿಕ ಆಯುಕ್ತರು(ಗೈ), ಶ್ರೀ ಭರಶೆಟ್ಟಿ, ಎಲ್.ಟಿ. (ಸ್ಕೌ) ಇವರುಗಳು ಸಹಕರಿಸಿದರು.

**SWOT – Strength, Weaknees, Opportunity and Threats –** ಬಗ್ಗೆ ಚರ್ಚಿಸಲಾಯಿತು. ನಂತರ **Strategic Priorities** ಗಳಾದ 1) **Educational Method** 2) **Governance** 3) **Finance** 4) **Communication, Branding & Partnership** 5) **Diversity & Inclusion** 6) **Membership Growth** ಬಗ್ಗೆ ಚರ್ಚಿಸಲಾಯಿತು. ಈ ವಿಷಯಗಳಿಗೆ ಸಂಬಂಧಿಸಿದಂತೆ **Objectives & Action Plan** ಗಳನ್ನು **Specific, Measurable, Attainable, Realastic & Time Bound** ಗಳೊಂದಿಗೆ ನಿರ್ಧರಿಸಲು ತಿಳಿಸಿದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ಸ್ & ಗೈಡ್ಸ್), ಜಿಲ್ಲಾ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ಅಭಿನಂದಿಸಲಾಯಿತು.

ದಿನಾಂಕ: 26.05.2026ರಂದು ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀ ಅನಲೇಂದ್ರ ಶರ್ಮರವರು ಮಾತನಾಡಿ ಇದೊಂದು ಉತ್ತಮ ಕಾರ್ಯಾಗಾರವಾಗಿರುವುದಾಗಿ ತಿಳಿಸಿ, ಕಾರ್ಯಾಗಾರದ ವರದಿಯನ್ನು ಮಂಡಿಸಿದರು. 6 ಪ್ರಿಯಾರಿಟಿಗಳ ಬಗ್ಗೆ

44 ಆಬ್‌ಜಕ್ಟೀವ್ಸ್‌ಗಳೊಂದಿಗೆ ಕಾರ್ಯಯೋಜನೆಗಳನ್ನು ಒಳಗೊಂಡಂತೆ ವಿಜನ್–2034ರ ಕರಡು ಪ್ರತಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ವಿಜನ್–2034ನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಿಗೆ ಹಸ್ತಾಂತರಿಸಿದರು ಹಾಗೂ ರಾಜ್ಯ ಕಾರ್ಯಕಾರಿ ಮತ್ತು ರಾಜ್ಯ ಪರಿಷತ್ ಸಭೆಯ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ತಿಳಿಸಿದರು ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿಯೂ ವಿಜನ್–2034ನ್ನು ಸಿದ್ಧಪಡಿಸಿಕೊಳ್ಳಲು ತಿಳಿಸಿದರು.

ವಿಜನ್–2034ರ ಶಿಫಾರಸ್ಸು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ನೀಡಿದ್ದ ಸಲಹೆಗಳನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಿಗೆ ಸದಸ್ಯರುಗಳು ನೀಡಿದರು.

ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ, ವಿಜನ್–2034ರ ಸಕ್ರಿಯ ಅನುಷ್ಠಾನಕ್ಕಾಗಿ ಎಲ್ಲರೂ ಸಹಕಾರ ನೀಡಿ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಪದಾಧಿಕಾರಿಗಳು ಸಮಯಾವಕಾಶವನ್ನು ನೀಡಿ ಸಹಕಾರ ನೀಡಬೇಕೆಂದರು.

ದಿನಾಂಕ : 30.06.2026 ರಂದು ಸಂಸ್ಥೆಯ ಸೇವೆಯಿಂದ ವಯೋನಿವೃತ್ತಿ ಹೊಂದಲಿರುವ ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ಕಾರ್ಯದರ್ಶಿ ಇವರಿಗೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮತ್ತು ಪದಾಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.







# ಅಟ್ಲಾಂಟಿಕ್ ಸಮುದ್ರದ ರೋಯಿಂಗ್‌ನಲ್ಲಿ ದಾಖಲೆ ನಿರ್ಮಿಸಿದ ಕು॥ ಅನನ್ಯ ಪ್ರಸಾದ್‌ರವರಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಅಭಿನಂದನಾ ಸಮಾರಂಭ



ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪರವರ ಹೆಮ್ಮೆಯ ಮೊಮ್ಮಗಳಾದ ಕು. ಅನನ್ಯರವರು ದಿನಾಂಕ : 11.12.2024 ರಿಂದ 07.02.2025 ರವರೆಗೆ ಒಟ್ಟು 52 ದಿನಗಳು ಅಟ್ಲಾಂಟಿಕ್ ಮಹಾಸಾಗರವನ್ನು ಏಕಾಂಗಿಯಾಗಿ ಇಂಧನ, ವಿದ್ಯುತ್ ಅಥವಾ ಪವನ ಶಕ್ತಿಯನ್ನು ಬಳಸದೇ ಸ್ನಾಯು ಬಲದಿಂದ ದೋಣಿಯನ್ನು ನಡೆಸಿ, 3000 ಮೈಲುಗಳನ್ನು ಪೂರ್ಣಗೊಳಿಸಿ, ವಿಶ್ವದಾಖಲೆ ಬರೆದಿರುವ ಮೊದಲ ಮಹಿಳೆ ಮತ್ತು ಎರಡನೇ ಅತ್ಯಂತ ವೇಗದ ರೋಯಿಂಗ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಇವರೊಂದಿಗೆ ಸಂವಾದ ಮತ್ತು ಸಾಹಸ ಪ್ರಯಾಣದ ರೋಚಕ ಅನುಭವದ ಹಂಚಿಕೆ ಹಾಗೂ ಗೌರವಿಸುವ ಸಮಾರಂಭವನ್ನು ದಿನಾಂಕ : 30.05.2026 ರಂದು ಕೊಂಡಜ್ಜಿ ಬಸಪ್ಪ ಆಡಿಟೋರಿಯಂ, ರಾಜ್ಯ ಕೇಂದ್ರ ಕಛೇರಿ, ಶಾಂತಿ ಗೃಹ, ಅರಮನೆ ರಸ್ತೆ, ಬೆಂಗಳೂರು–01 ಇಲ್ಲಿ ಆಯೋಜಿಸಲಾಗಿತ್ತು.

ಕುಮಾರಿ ಸಿಂಚನಾ ಎಂ. ಭಟ್‌ರವರು ಸ್ವಾಗತ ನೃತ್ಯವನ್ನು ಮಾಡಿದರು. ಡಾ॥ ಮುಕ್ತಾ ಬಿ. ಕಾಗಲಿ, ಕೇಂದ್ರ ಸ್ಥಾನಿಕ ಆಯುಕ್ತರು (ಗೈ) ಇವರು ಸರ್ವರನ್ನು ಸ್ವಾಗತಿಸಿದರು. ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈ) ರವರು ಕುಮಾರಿ ಅನನ್ಯಾ ಪ್ರಸಾದ್‌ರವರ ಪರಿಚಯ ಮಾಡಿಕೊಟ್ಟರು. ಶ್ರೀಮತಿ ನಿರ್ಮಲಾ ಸಿ. ಯಲಿಗಾರ್, ನಿವೃತ್ತ ನಿರ್ದೇಶಕರು, ದೂರದರ್ಶನ & ಸಾಹಿತಿಗಳು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕು. ಅನನ್ಯರವರನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಹಾಗೂ ಎಲ್ಲಾ ಪದಾಧಿಕಾರಿಗಳು ಸನ್ಮಾನಿಸಿದರು. ನಂತರ ಮಾತನಾಡಿದ ಇವರು ತಮ್ಮ ಸ್ಪ್ಯಾನಿಷ್ ಕರಾವಳಿಯ ಲಾ ಗೊಮೆರಾದಿಂದ ಕೆರೆಬಿಯನ್ ದ್ವೀಪವಾದ ಆಂಟಿಗುವಾದವರೆಗೆ ಅಟ್ಲಾಂಟಿಕ್ ಸಮುದ್ರದಾದ್ಯಂತ 3000 ಮೈಲುಗಳ ರೋಯಿಂಗ್‌ನ ಸಂಪೂರ್ಣ ಅನುಭವವನ್ನು ಹಂಚಿಕೊಂಡರು. 3 ಗಂಟೆಗಳ ಕಾಲ ಸತತರೋಯಿಂಗ್ ನಂತರ 1 ಗಂಟೆಯ ವಿರಾಮ, ರಾತ್ರಿ 6 ಗಂಟೆಗಳ ನಿದ್ರೆ ಹೀಗೆ ಸತತ 52 ದಿನಗಳ ತಮ್ಮ ಪ್ರಯಾಣದ ಅನುಭವ, ಸಮುದ್ರದ ಅಲೆಗಳ ಆರ್ಭಟ, ಜಲಚರಗಳ ಚಲನವಲನ ಹೀಗೆ ತಮಗೆ ಆದ ವಿವಿಧ ಅನುಭವಗಳ ಕುರಿತು ತಿಳಿಸಿದರು.

ಈ ಹಾದಿಯಲ್ಲಿ ತಮಗೆ ಅನೇಕ ಅಡೆತಡೆಗಳು ಎದುರಾದರೂ, ತಾವು ಕೈ ಬಿಡದೇ ತಮ್ಮ ಗುರಿಯನ್ನು ತಲುಪಿ ದಾಖಲೆಯನ್ನು ನಿರ್ಮಿಸಿದ ಬಗೆಯನ್ನು ತಿಳಿಸುವುದರ ಮೂಲಕ, ಯಾವುದೇ ಕಾರ್ಯವಾಗಲಿ ನಮ್ಮಿಂದ ಮಾಡಲು ಸಾಧ್ಯವಿಲ್ಲ ಎಂದುಕೊಳ್ಳದೇ, ತಮ್ಮಿಂದ ಎಲ್ಲವೂ ಸಾಧ್ಯ ಎಂದು ಕೊಂಡು ಪ್ರಯತ್ನಿಸಿದರೆ ಎಂತಹ ಸಾಧನೆಯನ್ನಾದರು ನಾವು ಮಾಡಬಹುದು ಎಂದು ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರೇರೇಪಿಸಿದರು.

ಡಾ॥ ಪಿ.ಜಿ.ಆರ್. ಸಿಂಧ್ಯ ರವರು ಮಾತನಾಡಿ, ಕು॥ ಅನನ್ಯ ಪ್ರಸಾದ್ ಅವರು ಕೇವಲ 52 ದಿನಗಳಲ್ಲಿ ಅಟ್ಲಾಂಟಿಕ್ ಸಮುದ್ರವನ್ನು ಜಯಿಸಿ ಭಾರತಕ್ಕೆ ಕೀರ್ತಿ ತಂದಿದ್ದಾರೆ. ಇಂತಹವರನ್ನು ಸನ್ಮಾನಿಸಿ ಅಭಿನಂದಿಸುವುದು ಶ್ಲಾಘನೀಯ. ವಿಶೇಷವಾಗಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರ ಮೊಮ್ಮಗಳಾಗಿ ಇಂತಹ ಸಾಧನೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆಯಾಗಿದೆ ಎಂದು ಹೇಳಿದರು.

ಶ್ರೀಮತಿ ನಿರ್ಮಲಾ ಸಿ. ಯಲಿಗಾರ್‌ರವರು ಮಾತನಾಡಿ, ಡಾ. ಜಿ.ಎಸ್. ಶಿವರುದ್ರಪ್ಪ ನವರ ಸಾಹಿತ್ಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೇರು ಸಾಹಿತ್ಯವಾಗಿದೆ. ಅವರ ಕುಡಿ ಇಂತಹ ಸಾಧನೆ ಮಾಡಿರುವುದು ದೊಡ್ಡ ಸಾಧನೆಯಾಗಿದೆ. ಡಾ॥ ಜಿ.ಎಸ್. ಶಿವರುದ್ರಪ್ಪ ಅವರ ದೃಷ್ಟಿಯಲ್ಲಿ ಕಾಣದಕಡಲಿಗೆ ಹಂಬಲಿಸಿದೆ ಮನ ಎಂಬಂತೆ ಸಾಗರವನ್ನು ದಾಟುವ ಮೂಲಕ ಪ್ರೇರಣದಾಯಕ ಸಾಧನೆಯಾಗಿದ್ದು, ಮೂರು ಸಾವಿರ ಮೈಲಿಗಳಷ್ಟು ಕ್ರಮಿಸಿ ಉತ್ತಮ ಸಾಧನೆ ಮಾಡಿದ್ದಾರೆ ಎಂದರು.

ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ, ಸಹಾಯಕ ರಾಜ್ಯ ಆಯುಕ್ತರು (ಸ್ಕೌ) ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ) ರವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.

ಈ ಕಾರ್ಯಕ್ರಮದಲ್ಲಿ ಕು. ಅನನ್ಯ ಪ್ರಸಾದ್‌ರವರ ತಂದೆ ಡಾ॥ ಶಿವಪ್ರಸಾದ್, ತಾಯಿ ಡಾ॥ ಪೂರ್ಣಿಮಾ ಪ್ರಸಾದ್ ಹಾಗೂ ಕುಟುಂಬಸ್ಥರಾದ ಶ್ರೀಮತಿ ಜಯಂತಿ, ಶ್ರೀ ಮರುಳಸಿದ್ಧಪ್ಪರವರು ಹಾಗೂ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಬೆಂಗಳೂರು ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳು, ದಳನಾಯಕರುಗಳು ಹಾಗೂ 350ಕ್ಕೂ ಹೆಚ್ಚು ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಹಾಗೂ ಕಛೇರಿ ಸಿಬ್ಬಂದಿಗಳು ಭಾಗವಹಿಸಿದ್ದರು.

ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರನ್ನು ವಂದಿಸಿದರು ಹಾಗೂ ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ) ರವರು ಕಾರ್ಯಕ್ರಮವನ್ನು ನಿರೂಪಿಸಿದರು.
















# SPECIAL SUMMER CAMP ORGANISED FOR ROVERS AND RANGERS

## STATE-LEVEL YOGA AND SPIRITUAL CAMP, SERICULTURE TRAINING CAMP - Doddamaralavadi, Ramanagara District



State-level Yoga and Spiritual Camp, Sericulture Training Camp, was successfully conducted from 28.04.2026 to 02.05.2026 at Sri Mata Annapoorneshwari Tapo Kshetra, Doddamaralavadi, Ramanagara District. 37 Rovers and Rangers participated.

On 28th April 2026, the camp was formally inaugurated by Shri Satish Guruji. The Camp was conducted under the leadership of Sri Naveen Kumar, SGV of Tumakuru District.

Yoga trainers from Shivalila Tapo Kshetra conducted a special session for Rovers and Rangers on the core objectives of the camp, focusing on Children's Siddhi, Samadhi, and SSY (Siddha Samadhi Yoga) practices.

On 29th April 2026, the day began with yoga training, bhajans, pranayama, and sessions on spiritual awareness. Later, SSY yoga training and pranayama sessions were conducted for the participants. Shri Raghavendra Prasad delivered a special lecture on life education and the importance of learning. The day concluded with recreational activities and the traditional campfire program.

On 30th April 2026,A special SSY session on personality development was conducted by Smt. Shivalila Madam. Subsequently, as part of the sericulture training, Rovers and Rangers visited the Kiranagere Chawki Centre for the first time. The owner, Shri Jagadish, provided detailed insights into silkworm production, testing methods, feeding practices, and maintenance.

Participants also visited farmers' homes to understand the lifecycle of silkworms and how they transform over a month, including cocoon formation techniques.

On 1st May 2026,Participants visited a silk factory and processing units to gain advanced knowledge about cocoon processing and silk production. Later, Shri Satish Guruji graced the valedictory function and delivered his blessings. A grand campfire program was organized in the evening.

On 2nd May 2026, the day began with a trekking activity, followed by yoga and pranayama in the lap of nature. Afterwards, a All-faith Prayer, flag hoisting, and camp cleanliness activities were carried out. Feedback and reflections were collected from the Rovers and Rangers. The camp concluded with the distribution of certificates and flag lowering ceremony. The camp was successfully completed with active participation,





# STATE-LEVEL STAR GAZING AND MAPPING COURSE - Doddaballapura



The Bharat Scouts and Guides, Karnataka successfully organized the State-Level Star Gazing and Mapping camp at the State Training and Camping Centre, Doddaballapura, Bangalore Rural from 28th April 2026 to 1st May 2026. The programme was conducted with the objective of promoting scientific learning, navigation skills, practical mapping techniques, and outdoor education among Scouts, Guides, Rovers, Rangers, leaders, and adult members.

The camp was led by Mr. Jimmy Sequeira and witnessed active participation from 69 participants representing 14 districts across Karnataka. Throughout the four-day programme, participants were engaged in various educational and practical activities related to compass handling, direction finding, map reading, map setting, and astronomy.

The camp began with introductory sessions on compass usage and navigation techniques, helping participants understand the importance of directions and practical route finding. Educational visits to the Indian Space Research Organisation (ISRO) and a planetarium(Nehru Taralaya, Bengaluru) provided participants with valuable exposure to space science, satellites, astronomy, and scientific advancements.

On 30th April 2026, Shri N. Srinivasan, ASC, BSG Karnataka, conducted special sessions on Map Reading and Map Making. The session provided participants with practical knowledge about different types of maps, Conventional Signs, Route planning, direction findingand techniques of map preparation (Map Making). The hands-on training greatly enhanced the participants understanding of navigation and field mapping skills.

Special practical sessions on map preparation and map reading enabled participants to gain hands-on experience in creating and understanding different types of maps. The evening star gazing programme offered participants a unique opportunity to observe planets and the Moon through telescopes, creating excitement and interest in astronomy and celestial studies.

The course also focused on the practical application of mapping and navigation skills in daily life and outdoor activities. Participants learned techniques for identifying directions, measuring surroundings, and locating routes using practical methods.

On the closing ceremony held on 1st May 2026, Dr. P.G.R. Sindhia, State Chief Commissioner and Former Minister, addressed the gathering and appreciated the participants for their enthusiastic involvement and dedication throughout the course. He encouraged the youth members to continue the developing scientific temper, leadership qualities, and practical outdoor skills through Scouting and Guiding activities.

The programme was successfully conducted under the guidance and leadership of Mr. Jimmy Sequeira with the support of Sri P. Chandru, ASOC, Bengaluru South District and other staff members and organizing team of The Bharat Scouts and Guides, Karnataka.





# ರಾಜ್ಯಮಟ್ಟದ ಕಾರ್ಟೂನ್ ಮತ್ತು ಆರ್ಟಿಸ್ಟ್ ತರಬೇತಿ ಶಿಬಿರ – ದೊಡ್ಡಬಳ್ಳಾಪುರ



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಸನ್ಮಾನ್ಯ ಶ್ರೀ ಡಾ. ಪಿ. ಜಿ. ಆರ್. ಸಿಂಧ್ಯ ಅವರ ಮಾರ್ಗದರ್ಶನದಲ್ಲಿ ರಾಜ್ಯ ಮಟ್ಟದ ಕಾರ್ಟೂನ್ ಮತ್ತು ಆರ್ಟಿಸ್ಟ್ ತರಬೇತಿ ಶಿಬಿರವನ್ನು ದಿನಾಂಕ 03.05.2026 ರಿಂದ 06.05.2026 ರವರೆಗೆ ಡಾ. ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಒಟ್ಟು 27 ರೋವರ್ಸ್, ರೇಂಜರ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ಸನ್ಮಾನ್ಯ ಶ್ರೀ ಬಿ.ಜಿ. ಗುಜ್ಜಾರಪ್ಪ ಅವರು ಆಗಮಿಸಿದ್ದರು. ಶ್ರೀ ಅಶೋಕ್ ಕುಮಾರ ಕೆ.ಪಿ, ಜಿಲ್ಲಾ ಸಂಘಟಕರು, ಚಾಮರಾಜನಗರ ಜಿಲ್ಲೆ ಇವರು ಶಿಬಿರದ ನಾಯಕರಾಗಿದ್ದರು.

ದಿನಾಂಕ : 03.05.2026 ರಂದು, ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಬಿ.ಜಿ. ಗುಜ್ಜಾರಪ್ಪರವರು ದೀಪ ಬೆಳಗಿಸುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು ಹಾಗೂ ಭಾಗವಹಿಸಿದವರಿಗೆ ಕಲೆಯ ಮೂಲಕ ತಮ್ಮ ಸೃಜನಶೀಲತೆಯನ್ನು ಅನ್ವೇಷಿಸಲು ಪ್ರೇರಣೆ ನೀಡಿದರು. ಶ್ರೀ ಅಶೋಕ್ ಕುಮಾರ ಕೆ.ಪಿ. ಅವರು ಸ್ಕೌಟಿಂಗ್‌ನ ಮೂಲಭೂತ ತತ್ವಗಳು ಮತ್ತು ಕೌಶಲ್ಯಗಳ ಕುರಿತು ತರಗತಿಗಳನ್ನು ನಡೆಸಿದರು. ಶಿಬಿರದ ಸಹಾಯಕರಾಗಿ ಶ್ರೀ ನಿಹಾಲ್ ಎನ್.ಎಸ್. ರವರು ಸಹಕರಿಸಿದರು.

ದಿನಾಂಕ : 04.05.2026 ರಂದು ಪ್ರಾರ್ಥನಾ ಗೀತೆ, ಧ್ವಜ ಗೀತೆ, ಪ್ರತಿಜ್ಞೆ ಮತ್ತು ನಿಯಮ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೂಲಭೂತ ತತ್ವಗಳು, ಗಂಟುಗಳು ಇನ್ನಿತರ ವಿಷಯಗಳನ್ನು ಶಿಬಿರದ ನಾಯಕರು, ತಿಳಿಸಿದರು. ನಂತರ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುಜ್ಜಾರಪ್ಪ ರವರು ವಾಟರ್ ಪೇಂಟಿಂಗ್ (Water Painting) ಹಾಗೂ ಚಿತ್ರಕಲೆಯ ಬಗ್ಗೆ ವಿವಿಧ ಕೌಶಲ್ಯಗಳನ್ನು ಶಿಬಿರಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿದರು ಹಾಗೂ ಚಿತ್ರ ಬಿಡಿಸುವುದರ ಮೂಲಕ ಶಿಬಿರಾರ್ಥಿಗಳನ್ನು ಪ್ರೇರೇಪಿಸಿದರು. ನಂತರ ಪ್ರಥಮ ಚಿಕಿತ್ಸೆ ಬಗ್ಗೆ ಉಪನ್ಯಾಸವನ್ನು ನೀಡಲಾಯಿತು. ಸಂಘಟಕರುಗಳಾದ ಶ್ರೀ ಮನು ಮತ್ತು ಶ್ರೀ ವಿಶ್ವನಾಥ್ ವಿ.ರವರು ರಾಜ್ಯ ಸಂಸ್ಥೆಯ ಅಂತರ್ಜಾಲದ ಬಗ್ಗೆ ವಿವರಿಸಿ ಶಿಬಿರಾರ್ಥಿಗಳಿಗೆ ಈ ವಿಶೇಷ ಶಿಬಿರದ ಕೌಶಲ್ಯಗಳನ್ನು ತಿಳಿಸಿ ಪ್ರೇರೇಪಿಸಿದರು.

ದಿನಾಂಕ : 05.05.2026 ರಂದು ಬ್ಯಾಂಡೇಜ್ ಕಟ್ಟುವ ವಿಧಾನ, ಅಪಘಾತವಾದ ಸಂದರ್ಭದಲ್ಲಿ ಗಾಯಾಳುವನ್ನು ಸಾಗಿಸುವ ವಿಧಾನ ಹಾಗೂ ಕೃತಕ ಉಸಿರಾಟ (ಅಕಉ) ನೀಡುವ ಬಗ್ಗೆ ಮತ್ತು ಅಂದಾಜು (Estimation) ಮಾಡುವುದು ಮುಂತಾದ ವಿಷಯಗಳ ಬಗ್ಗೆ ತಿಳಿಸಲಾಯಿತು. ನಂತರ ಕಿರು ಕಥೆಯೊಂದಿಗೆ ಚಿತ್ರವನ್ನು ಬಿಡಿಸುವ ಬಗ್ಗೆ ಶಿಬಿರಾರ್ಥಿಗಳಿಗೆ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಚಿತ್ರಿಸಲಾದ ಚಿತ್ರಗಳ ಮೂಲ ಪ್ರತಿಯನ್ನು ನೀಡಿದರು. ನಂತರ ಶಿಬಿರದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಯಿತು. ದಿನಾಂಕ : 06.05.2026 ರಂದು ಸರ್ವಧರ್ಮ ಪ್ರಾರ್ಥನೆಯನ್ನು ಆಯೋಜಿಸಲಾಯಿತು ಹಾಗೂ ರಾಷ್ಟ್ರಗೀತೆಯೊಂದಿಗೆ ಶಿಬಿರವು ಮುಕ್ತಾಯವಾಯಿತು.





## ರಾಜ್ಯ ಯುವ ಸಮಾವೇಶ 2026–ಕೊಂಡಜ್ಜಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ 2026ರ ಮೇ 12 ರಿಂದ 16 ರವರೆಗೆ ದಾವಣಗೆರೆ ಜಿಲ್ಲೆ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಡಾ ಪಿ.ಜಿ.ಆರ್ ಸಿಂಧ್ಯ ರವರ ಮಾರ್ಗದರ್ಶನದಲ್ಲಿ ರಾಜ್ಯ ಯುವ ಸಮಾವೇಶ 2026 ಯಶಸ್ವಿಯಾಗಿ ನಡೆಯಿತು.

ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ರೋವರ್ಸ್ ಮತ್ತು ರೇಂಜರ್ಸ್ ಈ ಸಮಾವೇಶದಲ್ಲಿ ಭಾಗವಹಿಸಿ ಯುವ ನಾಯಕತ್ವ ಹಾಗೂ ಸ್ಕೌಟಿಂಗ್ ಮೌಲ್ಯಗಳನ್ನು ಬಲಪಡಿಸಿದರು. ಐದು ದಿನಗಳ ಈ ಸಮಾವೇಶದಲ್ಲಿ ನಾಯಕತ್ವ, ವಿಪತ್ತು ನಿರ್ವಹಣೆ, ಸುಸ್ಥಿರ ಅಭಿವೃದ್ಧಿ ಗುರಿಗಳು (SDG), ಡಿಜಿಟಲ್ ಉಪಕ್ರಮಗಳು, ಮಾಧ್ಯಮ ನಿರ್ವಹಣೆ ಹಾಗೂ ಸ್ಕೌಟಿಂಗ್‌ನಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಕುರಿತು ವಿವಿಧ ಅಧಿವೇಶನಗಳನ್ನು ನಡೆಸಲಾಯಿತು. ಭಾಗವಹಿಸಿದವರು ಗುಂಪು ಚರ್ಚೆಗಳು, ಜಿಲ್ಲಾ ಪ್ರಸ್ತುತಿಗಳು, ಸಾಹಸ ಚಟುವಟಿಕೆಗಳು ಹಾಗೂ ಭವಿಷ್ಯದ ಕಾರ್ಯಯೋಜನೆ ರೂಪಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ರಾಜ್ಯ ಸಂಸ್ಥೆ, ರಾಷ್ಟ್ರೀಯ ಮುಖ್ಯ ಕಚೇರಿ ಹಾಗೂ ಖಆಖಜಿ ಕರ್ನಾಟಕದ ಸಂಪನ್ಮೂಲ ವ್ಯಕ್ತಿಗಳು ಯುವ ಸಬಲೀಕರಣ, ಸಮುದಾಯ ಸೇವೆ ಮತ್ತು ಕೌಶಲ್ಯಾಭಿವೃದ್ಧಿ ಕುರಿತು ಮಾರ್ಗದರ್ಶನ ನೀಡಿದರು. ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ತಮ್ಮ ಜಿಲ್ಲೆಗಳ ಉತ್ತಮ ಕಾರ್ಯಚಟುವಟಿಕೆಗಳು ಮತ್ತು ಹೊಸ ಯೋಜನೆಗಳನ್ನು ಹಂಚಿಕೊಂಡು ಪರಸ್ಪರ ಕಲಿಕೆಯ ವಾತಾವರಣ ನಿರ್ಮಿಸಿದರು. ಕಾರ್ಯಯೋಜನೆಗಳ ಪ್ರಸ್ತುತಿ, ಪ್ರಮಾಣಪತ್ರ ವಿತರಣೆ ಹಾಗೂ ಧ್ವಜ ಅವರೋಹಣ ಸಮಾರಂಭದೊಂದಿಗೆ ರಾಜ್ಯ ಯುವ ಸಮಾವೇಶ–2026 ಸಮಾರೋಪಗೊಂಡಿತು. ಈ ಸಮಾವೇಶವು ಯುವ ಸ್ಕೌಟ್ಸ್ ಮತ್ತು ಗೈಡ್ಸ್ ಸೇವಾ ಮನೋಭಾವ, ನಾಯಕತ್ವ ಹಾಗೂ ಸಮಾಜಮುಖಿ ಚಿಂತನೆಗಳನ್ನು ಉತ್ತೇಜಿಸಿದ ಮಹತ್ವದ ಕಾರ್ಯಕ್ರಮವಾಗಿ ಪರಿಣಮಿಸಿತು. ಸದರಿ ಯುವ ಸಮಿತಿ ಸಮಾವೇಶದಲ್ಲಿ ರಾಜ್ಯ ಯುವ ಸಮಿತಿ ಅಧ್ಯಕ್ಷ ಶ್ರೀ ಕಾರ್ತಿಕ್ ರಾಮಚಂದ್ರ, ಶ್ರೀಮತಿ ಬಿ.ವಿ ಲತಾ, ಶಶಾಂಕ್ ಡಿ ಮುರ್ಕಿ, ಚಿದಾನಂದ ರವರು ಕಾರ್ಯನಿರ್ವಹಿಸಿದರು

# STATE LEVEL ARCHERY AND RIFLE TRAINING CAMP AND NATURE STUDY CAMP - Kondajji



The Bharat Scouts and Guides, Karnataka successfully organized the State Level Archery and Rifle Training Camp and Nature Study Camp at Sri Kondajji Basappa State Training and Camping Centre, Kondajji, Davangere District.

The camp was conducted with the objective of promoting adventure, discipline, leadership, and environmental awareness among Scouts, Guides, Rovers, and Rangers.

A total of 46 participants along with 02 trainers actively took part in the five-days residential camp. The programme included specialized training in archery and rifle shooting along with various nature study and adventure activities. Participants were trained in equipment handling, safety procedures, target practice, concentration techniques, and outdoor learning activities.

The camp schedule was systematically organized with physical exercises, technical training sessions, adventure activities, and interactive campfire programmes. Activities such as rope climbing and ladder climbing helped participants improve confidence, teamwork, and physical endurance.

Nature study sessions created awareness about environmental protection, biodiversity, and the importance of conservation. The camp also provided opportunities for participants to develop leadership qualities, discipline, cooperation, and social responsibility.



The programme was conducted under the leadership of Mr. Shakib, Assistant State Commissioner, with organizing support from Smt. Ashwini J, SGV, and logistics support from Shri Halappa, Warden, STC Kondajji.





# ರಾಜ್ಯ ಮಟ್ಟದ ರೋವರ್ಸ್ ರೇಂಜರ್ಸ್ ಸಾಹಿತ್ಯ ಕಮ್ಮಟ ಶಿಬಿರ – ಹಾಸನ






ಭಾರತ್ ಸ್ಕೌಟ್ ಮತ್ತು ಗೈಡ್ ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಹಾಸನ ಜಿಲ್ಲಾ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ರಾಜ್ಯ ಮಟ್ಟದ ರೋವರ್–ರೇಂಜರ್ ಸಾಹಿತ್ಯ ಕಮ್ಮಟ ಶಿಬಿರವನ್ನು ದಿನಾಂಕ : 11.04.2026 ರಿಂದ 13.04.2026 ರವರೆಗೆ ಹಾಸನ ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ವಿವಿಧ ಜಿಲ್ಲೆಯ ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ॥ ಮನುಕುಮಾರ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಓದುವುದರ ಜೊತೆಯಲ್ಲಿ ಸಾಹಿತ್ಯ ಕ್ಷೇತ್ರದ ಮುಂದಾಳತ್ವವನ್ನು ವಹಿಸಿಕೊಳ್ಳುವುದು ವಿದ್ಯಾರ್ಥಿಗಳ ಲಕ್ಷಣವೆಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಿಬಿರದಲ್ಲಿ ನುರಿತ ತಜ್ಞರಿಂದ ಸಾಹಿತ್ಯದ ಬಗ್ಗೆ ಮಾಹಿತಿಯನ್ನು ತಿಳಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾದಶ್ರೀ ಚಲಂ ಆಡ್ಲಹಳ್ಳಿ ಇವರು ವಿದ್ಯಾರ್ಥಿಗಳಿಗೆ "ಕಥೆ ಕಟ್ಟೋಣ ಬಾರೋ" ಎಂಬ ಶೀರ್ಷಿಕೆಯಲ್ಲಿ ಕಥೆ ಬರೆಯುವುದನ್ನು ಹೇಳಿಕೊಟ್ಟರು. ಶ್ರೀ ಜಯಶಂಕರ್ ಬೆಲ್ಗುಂಬ ರವರು ವಿದ್ಯಾರ್ಥಿಗಳಿಗೆ ನಾಟಕವನ್ನು ಕಟ್ಟುವುದು, ಅದರ ಪರಿಕಲ್ಪನೆ, ನಾಟಕವನ್ನು ಮಾಡಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿದರು. ಸಾಹಿತಿಗಳಾದ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್‌ರವರು ವಿದ್ಯಾರ್ಥಿಗಳಿಗೆ ಕಾವ್ಯರಚನೆಯ ಬಗ್ಗೆ ಹೇಳಿ ಕೊಟ್ಟರು ಹಾಗೂ ಕಾವ್ಯವನ್ನು ವಿದ್ಯಾರ್ಥಿಗಳ ಕೈಯಲ್ಲಿ ಬರೆಸಿದರು.

ಶಿಬಿರದ ನಾಯಕರಾಗಿ ಶ್ರೀ ಕೊಟ್ರೇಶ್ ಉಪ್ಪಾರ್‌ರವರು ನಾಯಕತ್ವವನ್ನು ವಹಿಸಿಕೊಂಡಿರುತ್ತಾರೆ ಹಾಗೂ ಎ.ಎಸ್.ಓ.ಸಿ ಶ್ರೀಮತಿ ಪ್ರಿಯಾಂಕರವರು ಶಿಬಿರವನ್ನು ಸಂಘಟಿಸಿರುತ್ತಾರೆ. ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವುದರ ಮೂಲಕ ವಿದ್ಯಾರ್ಥಿಗಳಿಗೆ ಶುಭ ಕೋರಿರುತ್ತಾರೆ.





# ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಚಾರಣ ಶಿಬಿರ 2026 – ಸುಬ್ರಹ್ಮಣ್ಯ, ದ.ಕ.ಜಿಲ್ಲೆ






ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಪಂಜ ಸ್ಥಳೀಯ ಸಂಸ್ಥೆ ಹಾಗೂ ಕುಮಾರಸ್ವಾಮಿ ವಿದ್ಯಾಲಯ ಸುಬ್ರಹ್ಮಣ್ಯ ಇವರ ಸಹಭಾಗಿತ್ವದಲ್ಲಿ ದಿನಾಂಕ 16–05–2026 ರಿಂದ 20–05–2026ರ ವರೆಗೆ ಕುಮಾರಸ್ವಾಮಿ ವಿದ್ಯಾಲಯ ಸುಬ್ರಹ್ಮಣ್ಯ ಇಲ್ಲಿ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಚಾರಣ ಶಿಬಿರ ಜರುಗಿತು.

ಈ ಶಿಬಿರದಲ್ಲಿ ರಾಜ್ಯದ 17 ಜಿಲ್ಲೆಯಿಂದ 21 ಸ್ಕೌಟ್ಸ್, 05 ಗೈಡ್ಸ್, 42 ರೋವರ್ಸ್, 34 ರೇಂಜರ್ಸ್ ಮತ್ತು 07 ದಳ ನಾಯಕರುಗಳು ಒಟ್ಟು 109 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ : 16.05.2026 ರಂದು ಶ್ರೀ ಆಂಜನೇಯ ರೆಡ್ಡಿ, ಪೋಲೀಸ್ ಸಬ್ ಇನ್ಸ್ಪೆಕ್ಟರ್, ಆರಕ್ಷಕ ಠಾಣೆ ಸುಬ್ರಹ್ಮಣ್ಯ ಇವರು ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ಶ್ರೀ ಗಣೇಶ್ ಪ್ರಸಾದ್ ಅಧ್ಯಕ್ಷರು, ಕುಮಾರಸ್ವಾಮಿ ವಿದ್ಯಾಲಯ ಸುಬ್ರಹ್ಮಣ್ಯ ಇವರು ವಹಿಸಿಕೊಂಡಿದ್ದರು.

ವೇದಿಕೆಯಲ್ಲಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿಮಲ ರಂಗಯ್ಯ,ಪಂಜ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಾಧವ ಬಿ.ಕೆ., ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ದೇವಿಪ್ರಸಾದ್ ಜಾಕೆ, ಕುಮಾರಸ್ವಾಮಿ ವಿದ್ಯಾಲಯದ ಮುಖ್ಯ ಶಿಕ್ಷಕಿ ಶ್ರೀಮತಿ ವಿದ್ಯಾರತ್ನ, ಪಂಜ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಶಿಬಿರದ ನಾಯಕರಾದ ಶ್ರೀ ಉದಯಕುಮಾರ್ ರೈ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಉಪಸ್ಥಿತರಿದ್ದರು.

ದಿನಾಂಕ : 17.05.2026 ರಂದು ವನ್ಯಜೀವಿ ಸಂರಕ್ಷಣೆ ಮತ್ತು ಸವಾಲುಗಳು ಎಂಬ ವಿಷಯದ ಮೇಲೆ ಪ್ರಾತ್ಯಕ್ಷಿಕೆಗಳೊಂದಿಗೆ ರಾಷ್ಟ್ರೀಯ ವನ್ಯಜೀವಿ ಅಪರಾಧ ಸಂರಕ್ಷಣದಳದ ಸದಸ್ಯರಾದ ಶ್ರೀ ಭುವನೇಶ್ ಕೈಕಂಬ ವಿಶೇಷ ಉಪನ್ಯಾಸ ನೀಡಿದರು. ಬಳಿಕ ಪ್ರಕೃತಿ ಮತ್ತು ನಾವು ಎಂಬ ವಿಷಯದ ಮೇಲೆ ನಿವೃತ್ತ ಪ್ರಾಧ್ಯಾಪಕರಾದ ಡಾ. ನರೇಂದ್ರ ರೈ ದೇರ್ಲ ವಿಶೇಷ ಉಪನ್ಯಾಸ ನಡೆಸಿಕೊಟ್ಟರು. ಹಾವು ಮತ್ತು ನಾವು ಎಂಬ ವಿಷಯದ ಮೇಲೆ ಪ್ರಾತ್ಯಕ್ಷಿಕೆಯೊಂದಿಗೆ ಡಾ. ರವೀಂದ್ರನಾಥ್ ಐತಾಳ್ ವಿಶೇಷ ಉಪನ್ಯಾಸ ನೀಡಿದರು. ಬಳಿಕ ಶ್ರೀಮತಿ ಪೂರ್ಣರಾವ್ ಸುರತ್ಕಲ್ ಇವರ ಜೀವನದ ಯಶೋಗಾಥೆಯನ್ನು ಟಿವಿ ಪರದೆಯ ಮೂಲಕ ವೀಕ್ಷಿಸಲಾಯಿತು.

ದಿನಾಂಕ : 18. 05.2026 ರಂದು ಬೆಳಗ್ಗೆ 7:30ಕ್ಕೆ ಸುಮಾರು 32 ಕಿಲೋಮೀಟರ್ ದೂರದ ಹೊರ ಸಂಚಾರ ಪ್ರಕೃತಿ ಅಧ್ಯಯನ ಚಾರಣವನ್ನು ಪ್ರಾರಂಭಿಸಲಾಯಿತು. ಸುಮಾರು 14 ವರ್ಷಗಳ ಹಿಂದಿನವರೆಗೂ ರಾಜ್ಯದ ಅತಿ ದೊಡ್ಡ ಜಾನುವಾರು ಜಾತ್ರೆ ನಡೆಯುತ್ತಿದ್ದ ಕುಲ್ಕುಂದ ಎಂಬ ಸ್ಥಳವನ್ನು ವೀಕ್ಷಿಸಿ, ಪಕ್ಕದ ಬಸವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಲಾಯಿತು. ಅಲ್ಲಿಂದ ಹೊರಟು ಕೈಕಂಬ ಮಾರ್ಗವಾಗಿ ಅಂತಾರಾಷ್ಟ್ರೀಯ ತೆಂಗು ಸಂಶೋಧನಾ ಕೇಂದ್ರವಾದ ಸಿಪಿಸಿಆರ್ ಐ ಕಿದು ಈ ಕೇಂದ್ರಕ್ಕೆ ಭೇಟಿ ನೀಡಲಾಯಿತು. ಇಲ್ಲಿ ವಿಜ್ಞಾನಿಗಳು ಮತ್ತು ಮೇಲಧಿಕಾರಿಗಳು ಶಿಬಿರಾರ್ಥಿಗಳನ್ನು ಅದರದಿಂದ ಸ್ವಾಗತಿಸಿ, ತೆಂಗು, ಕೃಷಿಯ, ಜೀವಾಮೃತ ಇತ್ಯಾದಿಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಅಲ್ಲಿಂದ ಹೊರಟು ಕುಮಾರಧಾರ ನದಿ ದಾಟಿ ಏನೇಕಲ್ಲು, ಕಾಡಿನ ದಾರಿಯಾಗಿ ನಡೆದು, ಏನೇಕಲ್ಲು ಹೊಳೆಗೆ ಇಳಿದು, ಬಚ್ಚನಾಯಕನ ಮೀನು ಗುಂಡಿ, ದೇವಸ್ಥಾನಕ್ಕೆ ತಲುಪಿ, ದೇವರ ಮೀನುಗಳನ್ನು ವೀಕ್ಷಿಸಿ, ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು. ಬಳಿಕ ಅಲ್ಲಿಂದ ಹೊರಟು, ಬಾನಡ್ಕಗುಡ್ಡ ತೋಟ ದಾರಿಯಾಗಿ ಎಣ್ಣೆಮಜಲು ಊರನ್ನು ದಾಟಿ 1,200 ವರ್ಷಗಳ ಇತಿಹಾಸವಿರುವ ಪುರಾತತ್ವ ಇಲಾಖೆಯ ತ್ರಿಶೂಲಿನಿ ದೇವಸ್ಥಾನಕ್ಕೆ ಭೇಟಿ ನೀಡಲಾಯಿತು. ಬಳಿಕ ಪಂಜದ ಕಡೆಗೆ ಚಾರಣವನ್ನು ನಡೆಸಿ, 7.45 ಕ್ಕೆ ಚಾರಣದ ಗಮ್ಯ ಸ್ಥಾನವಾದ ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ತಲುಪಿ, ರಾತ್ರಿ ಅಲ್ಲೇ ವಾಸ್ತವ್ಯ ಹೂಡಿದರು.

ದಿನಾಂಕ : 19.05.2026 ರಂದು ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಇದರಲ್ಲಿ ವಿಶೇಷ ಪರಿಣಿತರಾದ ಖ್ಯಾತ ವೈದ್ಯ ಡಾ. ಶಶಿಧರ ಹಾಸನಡ್ಕ ಇವರು ಯೋಗಭ್ಯಾಸವನ್ನು ಪ್ರಾಣಾಯಾಮವನ್ನು ಮಾಡಿಸುವ ಮೂಲಕ ಚಾರಣದ ದಣಿವನ್ನು ಆರಿಸಿದರು. ನಂತರ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನವನ್ನು ಪಡೆಯಲಾಯಿತು.

ದಿನಾಂಕ : 20.05.2026 ರಂದು ಸರ್ವಧರ್ಮ ಪ್ರಾರ್ಥನೆ ನಡೆಯಿತು. ಬಳಿಕ ಶಿಬಿರ ತಾಣದ ಸ್ವಚ್ಛತೆ ಮಾಡಲಾಯಿತು. ನಂತರ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಚಾರಣ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪಂಜ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಶ್ರೀ ಮಾಧವ ಬಿ.ಕೆ. ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯ ಮುಖ್ಯ ಆಯುಕ್ತರಾದ ಡಾ॥ ಪಿ.ಜಿ.ಆರ್. ಸಿಂಧ್ಯರವರು ಮಾತನಾಡಿ ಪ್ರಕೃತಿ ಅಧ್ಯಯನ ಶಿಬಿರದಿಂದ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸುವ ಮತ್ತು ತಿಳುವಳಿಕೆಯ ಜ್ಞಾನವನ್ನು ಮೂಡಿಸುವಲ್ಲಿ ಹೆಚ್ಚಿನ ಮಹತ್ತರ ಪಾತ್ರವಹಿಸುತ್ತದೆ. ಇಂತಹ ವಿಶೇಷ ಶಿಬಿರವನ್ನು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಯಲ್ಲಿ ಸಂಘಟಿಸುತ್ತಿದ್ದು, ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರು ಶ್ರೀ ಎಂ. ಪ್ರಭಾಕರ್ ಭಟ್, ದ.ಕ. ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿಮಲ ರಂಗಯ್ಯ, ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಡಾ. ದೇವಿಪ್ರಸಾದ್ ಕಾನತ್ತೂರು, ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯದ ಅಧ್ಯಕ್ಷರಾದ ಶ್ರೀ ಗಣೇಶ್ ನಾಯರ್, ಸಂಚಾಲಕರಾದ ಶ್ರೀ ಚಂದ್ರಶೇಖರ್ ನಾಯರ್, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪ್ರತೀಮ್ ಕುಮಾರ್, ಜಿಲ್ಲಾ ಸ್ಕೌಟ್ ಸಹಾಯಕ ಆಯುಕ್ತರಾದ ಶ್ರೀ ದೇವಿಪ್ರಸಾದ್ ಜಾಕೆ, ಕುಮಾರಸ್ವಾಮಿ ವಿದ್ಯಾಲಯದ ಮುಖ್ಯ ಶಿಕ್ಷಕಿ ಶ್ರೀಮತಿ ವಿದ್ಯಾರತ್ನ, ಪಂಜ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಶಿಬಿರದ ನಾಯಕರಾದ ಶ್ರೀ ಉದಯಕುಮಾರ್ ರೈ ಎಸ್. ಬಾಳಿಲ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಉಪಸ್ಥಿತರಿದ್ದರು.



ಈ ಸಂದರ್ಭದಲ್ಲಿ ಪಂಜ ಸ್ಥಳೀಯ ಸಂಸ್ಥೆಯ ವತಿಯಿಂದ ಡಾ|| ಪಿ.ಜಿ.ಆರ್. ಸಿಂಧ್ಯ, ಕುಮಾರಸ್ವಾಮಿ ವಿದ್ಯಾಲಯದ ಅಧ್ಯಕ್ಷರಾದ ಶ್ರೀ ಗಣೇಶ್ ನಾಯರ್ ಮತ್ತು ಸಂಚಾಲಕರಾದ ಶ್ರೀ ಚಂದ್ರಶೇಖರ್ ನಾಯರ್ ಇವರನ್ನು ಅಭಿನಂದಿಸಲಾಯಿತು.

ನಂತರ ಭಾಗವಹಿಸಿದ ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಯಿತು. ಧ್ವಜ ಅವರೋಹಣದೊಂದಿಗೆ ಐದು ದಿನಗಳ ಶಿಬಿರವು ಸಂಪನ್ನಗೊಂಡಿತು.



## ರಾಜ್ಯ ಮಟ್ಟದ ಚಾರಣ ಶಿಬಿರ – ಕೊಲ್ಲೂರು

– ದಿನಾಂಕ 30/3/26 ರಿಂದ 2/4/26 ರವರೆಗೆ ರಾಜ್ಯಮಟ್ಟದ ಚಾರಣ, ಕೊಲ್ಲೂರು ಪರಿಸರದಲ್ಲಿ ನಡೆಯಿತು. ಒಂದನೆ ದಿನ ನೋಂದಾವಣೆ, ಶಿಬಿರಾರ್ಥಿಗಳ ಪರಿಚಯದ ನಂತರ ಸೌಪರ್ಣಿಕಾ ನದಿ, ಕೊಲ್ಲೂರು ಶ್ರೀ ಮೂಕಾಂಬಿಕೆ ದೇವಸ್ಥಾನ, ಮಾರಿಕಾಂಬ ದೇವಸ್ಥಾನ ಇಲ್ಲಿಗೆ ಭೇಟಿ ನೀಡಿ, ರಾತ್ರಿ ಭವ್ಯ ಶಿಬಿರಾಗ್ನಿಯೊಂದಿಗೆ ಆ ದಿನದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಎರಡನೇ ದಿನ ಧ್ವಜವಂದನ ಕಾರ್ಯಕ್ರಮದ ಮೂಲಕ ಪ್ರಾರಂಭಿಸಿ. ಆನೆ ಜರಿಗೆ ಚಾರಣವನ್ನು ಹಮ್ಮಿಕೊಳ್ಳಲಾಯಿತು. ಇಲ್ಲಿ ಮೆಹಂದಿಯನ್ನು ಇಡುವುದರೊಂದಿಗೆ ಜಿಲ್ಲೆಯ ಸಂಸ್ಕೃತಿಯನ್ನು ತಿಳಿಸಲಾಯಿತು. ತದನಂತರ ಶಾಸಕರಾಗಿರುವ ಮಾನ್ಯ ಶ್ರೀ ಗುರುರಾಜ್ ಗಂಟಿಹಳೆ ಇವರು ಕಾರ್ಯಕ್ರಮಕ್ಕೆ ಚಾಲನೆಯನ್ನು ಕೊಟ್ಟರು ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿ, ಶ್ರೀ ದಿವಾಕರ್ ಶೆಟ್ಟಿ ಬಾಂಬೆ ಉದ್ಯೋಗಿ, ಉಪಾಧ್ಯಕ್ಷರಾಗಿರುವ ಶ್ರೀಮತಿ ಗುಣರತ್ನ ಮತ್ತು ಶ್ರೀಮತಿ ದೀಪಿಕಾ ಸುಭಾಷ್, ಡಾಕ್ಟರ್ ಶ್ರೀಕಾಂತ್, ಅರಣ್ಯ ಅಧಿಕಾರಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ, 18 ಜಿಲ್ಲೆಗಳಿಂದ ಬಂದಂತಹ 175 ಶಿಬಿರಾರ್ಥಿಗಳು ರೇಂಜರ್ ಲೀಡರ್–ರೋವರ್ ಲೀಡರ್ ಹಾಗೂ ರಾಜ್ಯ ಸಹಾಯಕ ಸಂಘಟನಾಯಕ್ತರಾದ ಶ್ರೀಮತಿ ಸುಮನ್ ಶೇಖರ್ ಉಪಸ್ಥಿತರಿದ್ದರು.

ಮೂರನೇ ದಿನ ಬೆಳಿಗ್ಗೆ ಧ್ವಜವಂದನ ಕಾರ್ಯಕ್ರಮದ ನಂತರ ಕೊಲ್ಲೂರು ದೇವಸ್ಥಾನದ ಪರಿಸರವನ್ನು ಹಲವು ಸಂಘ ಸಂಸ್ಥೆಗಳ ಸಹಯೋಗದಿಂದ ಸ್ವಚ್ಛಗೊಳಿಸಲಾಯಿತು. ಗ್ರಾಮೀಣ ಆರೋಗ್ಯದ ಬಗ್ಗೆ ಮಾಹಿತಿಯನ್ನು ಪಡೆಯಲು ಡಾ. ಶ್ರೀಕಾಂತ್ ಇವರ ವೈದ್ಯಕೀಯ ಪರಿಸರಕ್ಕೆ ಭೇಟಿ ನೀಡಲಾಯಿತು. ನಂತರ ಗೋಶಾಲೆಗೆ ಭೇಟಿಕೊಟ್ಟು ರಾತ್ರಿ ಭವ್ಯ ಶಿಬಿರಾಗ್ನಿಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ನಾಲ್ಕನೇ ದಿನ ಧ್ವಜವಂದನೆ ಸರ್ವಧರ್ಮ ಪ್ರಾರ್ಥನೆ, ದೇವಾಲಯ ದರ್ಶನ ಹಾಗೂ ಸಮಾರೋಪ ಸಮಾರಂಭದೊಂದಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.








## ರಾಜ್ಯ ಮಟ್ಟದ ಪ್ರಕೃತಿ ಚಿಕಿತ್ಸೆ ಯೋಗ ಹಾಗೂ ಪೌಷ್ಠಿಕ ಆಹಾರ ಮಾಹಿತಿ ಶಿಬಿರ – ಉಜಿರೆ, ದ.ಕ.ಜಿಲ್ಲೆ





ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಬೆಳ್ತಂಗಡಿ ಸ್ಥಳೀಯ ಸಂಸ್ಥೆ ಹಾಗೂ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸೆ ಮತ್ತುಯೋಗ ವಿಜ್ಞಾನಗಳ ಮಹಾವಿದ್ಯಾಲಯ ಉಜಿರೆ ಬೆಳ್ತಂಗಡಿ ಇವರ ಸಹಭಾಗಿತ್ವದಲ್ಲಿ ದಿನಾಂಕ 04.05.2026 ರಿಂದ 08.05.2026 ರವರೆಗೆ ನಡೆದ **ರಾಜ್ಯ ಮಟ್ಟದ ಪ್ರಕೃತಿ ಚಿಕಿತ್ಸೆ ಯೋಗ ಹಾಗೂ ಪೌಷ್ಠಿಕ ಆಹಾರ ಮಾಹಿತಿ ಶಿಬಿರ**ವನ್ನು ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ.ಎನ್.ವೈ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರಶಾಂತ್ ಶೆಟ್ಟಿ ವಹಿಸಿದ್ದರು. ವೇದಿಕೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿಮಲಾ ರಂಗಯ್ಯ, ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ವಿಠ್ಠಲ ಶೆಟ್ಟಿ, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಬಿ. ಸೋಮಶೇಖರ್ ಶೆಟ್ಟಿ, ಶಿಬಿರ ನಿರ್ದೇಶಕರಾದ ಡಾ. ರವಿ ಎಂ.ಎನ್, ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮಿಳ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಉಪಸ್ಥಿತರಿದ್ದರು. ಶಿಬಿರದಲ್ಲಿ ಒಟ್ಟು 14 ಜಿಲ್ಲೆಯಿಂದ 95 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರದ ಸಮಾರೋಪ ಸಮಾರಂಭವು ದಿನಾಂಕ 08.05.2026 ರಂದು ಮಾನ್ಯ ಡಾ. ಸತೀಶ್ಚಂದ್ರ ಎಸ್., ಕಾರ್ಯದರ್ಶಿಗಳು ಎಸ್.ಡಿ.ಎಂ ಶಿಕ್ಷಣ ಸಂಸ್ಥೆ ಉಜಿರೆರವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇದಿಕೆಯಲ್ಲಿ ಶ್ರೀ ತುಕಾರಾಮ ಬಿ, ಅಧ್ಯಕ್ಷರು, ಪತ್ರಕರ್ತರ ಸಂಘ, ಬೆಳ್ತಂಗಡಿ ತಾಲೂಕು, ಡಾ. ಪ್ರಶಾಂತ್ ಶೆಟ್ಟಿ, ಪ್ರಾಂಶುಪಾಲರು, ಎಸ್.ಡಿ.ಎಮ್, ಸಿ.ಎನ್.ವೈ.ಎಸ್, ಉಜಿರೆ, ಡಾ. ಶಿವಪ್ರಸಾದ್ ಶೆಟ್ಟಿ, ಮುಖ್ಯ ವೈದ್ಯಾಧಿಕಾರಿಗಳು, ಯೋಗ ವಿಭಾಗ, ಡಾ. ಗೀತಾ ಬಿ. ಶೆಟ್ಟಿ, ನ್ಯೂಟ್ರೇಷನ್ ವಿಭಾಗದ ಮುಖ್ಯಸ್ಥರು, ಡಾ. ರವಿ ಎಂ.ಎನ್, ಶಿಬಿರದ ನಿರ್ದೇಶಕರು, ಶ್ರೀಮತಿ ಪ್ರಮಿಳಾ, ಶಿಬಿರದ ಮೇಲ್ವಿಚಾರಕರು ಹಾಗೂ ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಶ್ರೀ ಭರತ್‌ರಾಜ್ ಕೆ, ಶಿಬಿರದ ಸಂಘಟಕರು ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ಕಡಲತೀರ ಚಾರಣ ಶಿಬಿರ – ಉಡುಪಿ



ದಿನಾಂಕ 2/5/2026 ರಿಂದ 5/5/2026 ರವರೆಗೆ **ರಾಜ್ಯ ಮಟ್ಟದ ಕಡಲ ತೀರ ಚಾರಣಶಿಬಿರ**ವನ್ನು ಉಡುಪಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮೊದಲ ದಿನ ಸರಕಾರಿ ಪ್ರಥಮ ದರ್ಜೆ ಕಾಲೇಜ್ ತೆಂಕನಡಿಯೂರಿನಲ್ಲಿ ನೋಂದಾವಣೆ ಹಾಗೂ ಶಿಬಿರಾರ್ಥಿಗಳ ಸ್ವ–ಪರಿಚಯ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಮಾಸ್ಟರ್ ದಿಗಂತ್ ಶೆಟ್ಟಿ ಇವರಿಂದ ನಾಗರಿಕತೆ ಹಾಗೂ ಪರಿಸರ ಇದರ ಬಗ್ಗೆ ಮಾಹಿತಿ ಮತ್ತು ಸಂವಾದವನ್ನು ಮಾಡಲಾಯಿತು. ತದನಂತರ ಶ್ರೀ ಗುರುರಾಜ್ ಸನೀಲ್ ಇವರಿಂದ ಪರಿಸರ ಮತ್ತು ಹಾವುಗಳ ಬಗ್ಗೆ ಪ್ರಾತ್ಯಕ್ಷಿತವಾಗಿ ಮಾಹಿತಿ ನೀಡುವುದರ ಮೂಲಕ ಸಂವಾದವನ್ನು ನಡೆಸಲಾಯಿತು. ರಾತ್ರಿ 8.30ಕ್ಕೆ ಶಿಬಿರಾಗ್ನಿಯ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಎರಡನೇ ದಿನ ಧ್ವಜವಂದನ ಕಾರ್ಯಕ್ರಮದ ನಂತರ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯಾರವರು ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕಾಲೇಜು ಪ್ರಾಂಶುಪಾಲರಾದ ಶ್ರೀ ನಿತ್ಯಾನಂದ ಗಾಂವ್ಕಾರ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಜಿಲ್ಲಾ ಖಜಾಂಚಿ ಆಗಿರುವ ಶ್ರೀ ಹರಿಪ್ರಸಾದ್ ರೈ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಶೇಖರ್ ಪೂಜಾರಿ, ಜಿಲ್ಲಾ ಕಾರ್ಯದರ್ಶಿ, ಶಿಬಿರ ನಾಯಕರು, ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಹಾಗೂ ದಳ ನಾಯಕ, ನಾಯಕಿಯರು ಉಪಸ್ಥಿತರಿದ್ದರು. ನಂತರ ಚಾರಣ ಗಾಂಧಿ ಶತಾಬ್ಧಿ ಶಾಲೆ ಮಲ್ಪೆಯ ಕಡೆಗೆ ಹೊರಟು ಅಲ್ಲಿ ಮಧ್ಯಾಹ್ನದ ನಂತರ ಗಾಳಿಪಟವನ್ನು ರಚಿಸಿ ಮಲ್ಪೆ ಸಮುದ್ರ ತೀರದಲ್ಲಿ ಗಾಳಿಪಟವನ್ನು ಹಾರಿಸಿ ಸಂಭ್ರಮಿಸಲಾಯಿತು. ನಂತರ ಸಿ ವಾಕ್ ಕಡೆಗೆ ಚಾರಣವನ್ನು ಮುಂದುವರಿಸಿ ಸಮುದ್ರವನ್ನು ವೀಕ್ಷಿಸಲಾಯಿತು. ಅಲ್ಲಿಂದ ಹೊರಟು ಗಾಂಧಿ ಶತಾಬ್ಧಿ ಶಾಲೆಗೆ ತಲುಪಿ ಸಂಜೆ ಭವ್ಯ ಶಿಬಿರಾಗ್ನಿಯೊಂದಿಗೆ ಆ ದಿನದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಮೂರನೇ ದಿನ ಗಾಂಧಿ ಶತಾಬ್ದ ಶಾಲೆಯಿಂದ ಹೊರಟ ಚಾರಣವು ಸಮುದ್ರ ಕಿನಾರೆಯ ಮೂಲಕ ಕಾಪು ಲೈಟ್ ಹೌಸ್ ತಲುಪಿ ಲೈಟ್ ಹೌಸ್ ಹಾಗೂ ಕಾಪು ಬೀಚ್ ಅನ್ನು ವೀಕ್ಷಿಸಲಾಯಿತು. ಚಾರಣ ನಡೆಸುವ ಸಂದರ್ಭದಲ್ಲಿ ಸ್ಥಳೀಯರು, ಹಲವು ಸಂಘ ಸಂಸ್ಥೆ, ಭಜನಾ ಮಂದಿರದ ಸದಸ್ಯರು ಮಕ್ಕಳಿಗೆ ತಂಪು ಪಾನೀಯ, ಹಣ್ಣು ಹಂಪಲುಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ತದನಂತರ ಚಾರಣವು ಕಾಪು ಸರಕಾರಿ ಪ್ರಥಮ ದರ್ಜೆ ಕಾಲೇಜನ್ನು ತಲುಪಿ,ಅಲ್ಲಿ ಭವ್ಯ ಶಿಬಿರಾಗ್ನಿ ಯೊಂದಿಗೆ ಆ ದಿನದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ನಾಲ್ಕನೇ ದಿನ ಬೆಳಿಗ್ಗೆ ಸರ್ವಧರ್ಮ ಪ್ರಾರ್ಥನೆಯನ್ನು ಮಾಡಿ, ಶ್ರೀ ಮಾರಿಕಾಂಬ ದೇವಿಯ ದರ್ಶನವನ್ನು ಪಡೆದು, ಸಮಾರೋಪ ಸಮಾರಂಭದ ಸಿದ್ಧತೆಯನ್ನು ಮಾಡಲಾಯಿತು. ಸಮಾರೋಪ ಸಮಾರಂಭದಲ್ಲಿ ಕಾಪು ಶಾಸಕರಾಗಿರುವ ಶ್ರೀ ಸುರೇಶ್ ಕುಮಾರ್ ಗುರ್ಮೆ ಇವರು ಭಾಗವಹಿಸಿ, ಮಕ್ಕಳಿಗೆ ಶುಭ ಹಾರೈಸಿದರು. ಈ

ಸಂದರ್ಭದಲ್ಲಿ ಪದವಿಪೂರ್ವ ಉಪನಿರ್ದೇಶಕರನ್ನು ಗೌರವಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಉಡುಪಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಹಿರಿಯ ಉಪಾಧ್ಯಕ್ಷರಾಗಿರುವ ಶ್ರೀ ಅಡ್ವಿನ ಆಳ್ವಾ, ಇತರ ಪದಾಧಿಕಾರಿಗಳು ಶಿಬಿರಾರ್ಥಿಗಳು, ರೇಂಜರ್ಸ್ ಲೀಡರ್, ಸ್ಕೌಟ್ ಮಾಸ್ಟರ್, ಸೀನಿಯರ್ ರೋವರ್ಸ್-ರೇಂಜರ್ಸ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಸಂಘಟಿಸಿದರು.





## ಯುವ ಅಪದ್‌ಮಿತ್ರ ತರಬೇತಿ ಶಿಬಿರ – ಶಿವಮೊಗ್ಗ





ಭಾರತ್ ಸ್ಕೌಟ್ಸ್-ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಸಹಯೋಗದೊಂದಿಗೆ 20ನೇ Kar BN NCC ಶಿವಮೊಗ್ಗದ 300 ಎನ್.ಸಿ.ಸಿ. ಕೆಡೆಟ್‌ಗಳಿಗೆ ಜವಾಹರ ನವೋದಯ ವಿದ್ಯಾಲಯ, ಗಾಜನೂರು ಆವರಣದಲ್ಲಿ ದಿನಾಂಕ 17.4.2026 ರಿಂದ 23.4.2026ರ ವರೆಗೆ ಕೇಂದ್ರ ಗೃಹ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "ಯುವ ಆಪದ್ ಮಿತ್ರ" ನಾಗರೀಕ ರಕ್ಷಣಾ ತರಬೇತಿ ಶಿಬಿರದ ಉದ್ಘಾಟನೆಯನ್ನು ದಿನಾಂಕ 17.4.2026 ರ ಮಧ್ಯಾಹ್ನ 2.30 ಗಂಟೆಗೆ ಆಯೋಜಿಸಲಾಗಿತ್ತು. ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಮಾಣಿಕ್ ಪಟಾನಿಯಾರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಕೆ. ಶಂಕರ್ ಎ.ಎಂ.ರವರು ಉಪಸ್ಥಿತರಿದ್ದರು. ಮತ್ತೋರ್ವ ಮುಖ್ಯ ಅತಿಥಿಗಳಾದ ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋವರ್)ರವರು ಯುವ ಆಪದ್ ಮಿತ್ರ ತರಬೇತಿಯ ಬಗ್ಗೆ ವಿವರಣೆ ನೀಡಿದರು. ಅತಿಥಿಗಳಾಗಿ ಶ್ರೀ ಚಂದ್ರಶೇಖರಯ್ಯ ಕೆ.ವಿ., ಜಿಲ್ಲಾ ಕಾರ್ಯದರ್ಶಿಯವರು ಉಪಸ್ಥಿತರಿದ್ದರು. ದಿನಾಂಕ 17.4.2026 ರಂದು ಶ್ರೀ ರಕ್ಷಿತ್ ಬಿ.ಆರ್. ಸ್ಕೌಟ್ಸ್ ಮಾಸ್ಟರ್ ಹಾಗೂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಮೂಡಿಗೆರೆ ಇವರು ಸಾಮಾನ್ಯ ಮಾಹಿತಿ ನೀಡಿದರು. ದಿನಾಂಕ 23.4.2026 ರಂದು ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿದ್ದು, ಈ ಸಮಾರಂಭದಲ್ಲಿ ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಮಾಣಿಕ್ ಪಟಾನಿಯಾ ಇವರು ಮಾತನಾಡಿ, ಯುವ ಮಿತ್ರ ಪುಸ್ತಕ, ಗುರುತಿನ ಕಾರ್ಡ್, ಟಿ-ಶರ್ಟ್ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಿದರು. ಈ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲ ಚಂದ್ರಶೇಖರ್, ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋವರ್), ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರಯ್ಯ ಕೆ.ವಿ. ಹಾಜರಿದ್ದರು.

## ರಾಜ್ಯ ತರಬೇತಿ ಸಮಿತಿ ಸಭೆ



ದಿನಾಂಕ:25.05.2026 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಡಾ.ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ "ರಾಜ್ಯ ತರಬೇತಿ ಸಮಿತಿ ಸಭೆ" ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಆಯುಕ್ತರು(ವಯಸ್ಕ ಸಂಪನ್ಮೂಲ) ಶ್ರೀ ಸಿ.ಎಸ್ ರೆಡ್ಡಿ ರವರು ವಹಿಸಿದ್ದರು.

ಸದರಿ ಸಭೆಯಲ್ಲಿ ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ಬಿ.ವಿ ರಾಮಲತಾ, ಶ್ರೀ ಎನ್.ಶ್ರೀನಿವಾಸನ್, ಶ್ರೀ ಕೆ.ಗಂಗಪ್ಪಗೌಡ, ಶ್ರೀ ಎಂ.ಎಸ್. ಸತೀಶ್, ಶ್ರೀ ಎಲ್.ಟಿ ಲೋಕೇಶ್ , ಶ್ರೀಮತಿ ಶ್ಯಾಮಲ, ಶ್ರೀ ನಾಗೇಶ್ ಆರ್ ಶಿವಪೂರ್, ಶ್ರೀ ಎಂ ಪ್ರಭಾಕರ್ ಭಟ್, ಶ್ರೀಮತಿ ಮಂಜುಳ ಮತ್ತು ತರಬೇತಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಭಾಗವಹಿಸಿದರು.

# ರಾಜ್ಯ ಮಟ್ಟದ ಬದುಕುಳಿಯುವ ಮತ್ತು ಅಗ್ರಗಾಮಿ ಶಿಬಿರ – ಕೊಂಡಜ್ಜಿ

## SURVIVAL AND PIONEERING





ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಬೆಂಗಳೂರು ಉತ್ತರ ಜಿಲ್ಲೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಐದು ದಿನಗಳ "ರಾಜ್ಯ ಮಟ್ಟದ ಬದುಕುಳಿಯುವ ಮತ್ತು ಅಗ್ರಗಾಮಿ ಶಿಬಿರ"ವು ದಾವಣಗೆರೆ ಜಿಲ್ಲೆಯ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದಲ್ಲಿ ಜರುಗಿತು. ದಿನಾಂಕ 7.5.2026 ರಿಂದ 11.5.2026ರ ವರೆಗೆ ನಡೆದ ಈ ಶಿಬಿರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 120ಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ನಿತನ್ ಅಮೀನ್ ಅವರ ಸಂಘಟನೆಯಲ್ಲಿ ಶಿಬಿರವು ಮೂಡಿ ಬಂದಿತು. ಐದು ದಿನಗಳ ಕಾಲ ನಡೆದ ಈ ತರಬೇತಿಯಲ್ಲಿ ವಿದ್ಯಾರ್ಥಿಗಳಿಗೆ ಸ್ಕೌಟಿಂಗ್‌ನ ಮೂಲಭೂತ ತತ್ವಗಳು, ಪೆಟ್ರೋಲ್ ವ್ಯವಸ್ಥೆ, ಸ್ವಾವಲಂಬಿ ಅಡುಗೆ ತಯಾರಿ, ವಿವಿಧ ರೀತಿಯ ಗಂಟುಗಳು ಮತ್ತು ಕಟ್ಟುಗಳು, ಧ್ವಜಸ್ತಂಭ ನಿರ್ಮಾಣ, ಟೆಂಟ್ ನಿರ್ಮಾಣ, ಹೊರಸಂಚಾರ ಮತ್ತು ಬದುಕುಳಿಯುವ ಕೌಶಲ್ಯಗಳ ಕುರಿತು ಪ್ರಾಯೋಗಿಕ ಹಾಗೂ ಅನುಭವಾತ್ಮಕ ತರಬೇತಿಗಳನ್ನು ನೀಡಲಾಯಿತು. ಕೊಂಡಜ್ಜಿ ಕೆರೆಯ ಸಮೀಪ ಆಯೋಜಿಸಲಾಗಿದ್ದ ಒಂದು ರಾತ್ರಿಯ ಬದುಕುಳಿಯುವ ಶಿಬಿರವು ಪ್ರಮುಖ ಆಕರ್ಷಣೆಯಾಗಿತ್ತು. ವಿದ್ಯಾರ್ಥಿಗಳು ಅತ್ಯಂತ ಕನಿಷ್ಠ ಸಂಪನ್ಮೂಲಗಳನ್ನು ಬಳಸಿಕೊಂಡು ಸ್ವತಃ ಅಡುಗೆ ತಯಾರಿಸುವುದು, ಟೆಂಟ್ ನಿರ್ಮಿಸುವುದು ಹಾಗೂ ತಂಡಭಾವನೆಯೊಂದಿಗೆ ಪ್ರಕೃತಿಯ ಸವಾಲುಗಳನ್ನು ಎದುರಿಸುವ ಮೂಲಕ ನೈಜ ಜೀವನ ಕೌಶಲ್ಯಗಳನ್ನು ಮೈಗೂಡಿಸಿಕೊಂಡರು. ಸಾಹಸ ಚಟುವಟಿಕೆಗಳು, ಮನರಂಜನಾ ಕಾರ್ಯಕ್ರಮಗಳು ಹಾಗೂ ಆಕರ್ಷಕ ಶಿಬಿರಾಗ್ನಿ ಶಿಬಿರಾರ್ಥಿಗಳಲ್ಲಿ ಹೊಸ ಚೈತನ್ಯವನ್ನು ತುಂಬಿದವು. ಶಿಬಿರದ ಕೊನೆಯ ದಿನದಂದು ಸರ್ವಧರ್ಮ ಪ್ರಾರ್ಥನೆ, ಧ್ವಜ ಸಮಾರಂಭ ಹಾಗೂ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. ಈ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಭಾರತ್ ಸ್ಕೌಟ್–ಗೈಡ್ ರಾಷ್ಟ್ರೀಯ ತರಬೇತಿ ಕೇಂದ್ರದ ಉಪನಿರ್ದೇಶಕರು (ಸ್ಕೌ) (ನಾಯಕ ತರಬೇತಿ) ಆದ ಶ್ರೀ ಎಸ್.ಎಸ್. ರಾಯ್ ಅವರು ಆಗಮಿಸಿದ್ದರು. ಶಿಬಿರದ ವ್ಯವಸ್ಥೆ ಹಾಗೂ ತರಬೇತಿಯ ಗುಣಮಟ್ಟವನ್ನು ಕಂಡು ಪ್ರಸನ್ನರಾದ ಅವರು, "ಇಂತಹ ಶಿಬಿರಗಳೇ ನಿಜವಾದ ಸ್ಕೌಟ್ ಶಿಬಿರಗಳು. ಯುವಕರಲ್ಲಿ ನೈಜ ಸಾಹಸ ಮನೋಭಾವ ಮತ್ತು ಸ್ವಾವಲಂಬನೆಯನ್ನು ಬೆಳೆಸಲು ಇವು ಪೂರಕವಾಗಿವೆ" ಎಂದು ಶಿಬಿರವನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ಪಿನ್ ಬ್ಯಾಡ್ಜ್ ಹಾಗೂ ವಿಶೇಷ 'ವೋಗಲ್' ನೀಡಿ ಸನ್ಮಾನಿಸಲಾಯಿತು.

# ಆಯುಕ್ತರುಗಳ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ – ಕೊಂಡಜ್ಜಿ





ದಿನಾಂಕ 12.05.2026 ರಿಂದ 16.05.2026ರ ವರೆಗೆ ಆಯುಕ್ತರುಗಳ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರವನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ರಾಷ್ಟ್ರೀಯ ಸಂಸ್ಥೆ ನವದೆಹಲಿ ಇವರ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು.

ಕರ್ನಾಟಕ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಮೂಲ ಆಯುಕ್ತರ ತರಬೇತಿಗೆ 18 ಹಾಗೂ ಮುಂದುವರೆದ ಆಯುಕ್ತರ ತರಬೇತಿಗೆ 16 ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

ಡಾ. ಬಿ. ರಮೇಶ್ ಪಟ್ನಾಯಕ ಎಲ್.ಟಿ (ಸ್ಕೌಟ್) ರಾಯಪುರ ಛತ್ತಿಸಗಢ ಇವರು ಮುಂದುವರೆದ ಆಯುಕ್ತರ ತರಬೇತಿ ಶಿಬಿರಕ್ಕೆ ನಾಯಕರಾಗಿ ಕಾರ್ಯನಿರ್ವಹಿಸಿದರು. ಡಾ. ಎಸ್. ಜಮ್‌ಶೀದ ಮೊಹದ್ದೀನ್ ಎಲ್.ಟಿ (ಸ್ಕೌಟ್) ತಮಿಳುನಾಡು ಇವರು ಮೂಲ ಆಯುಕ್ತರ ತರಬೇತಿ ಶಿಬಿರಕ್ಕೆ ನಾಯಕರಾಗಿ ಕಾರ್ಯನಿರ್ವಹಿಸಿದರು.

ಸಹಾಯಕ ನಾಯಕರಾಗಿ ಡಾ. ಸುಧಾಲಕ್ಷ್ಮೀ ಎಲ್.ಟಿ (ಸ್ಕೌಟ್) ತಮಿಳುನಾಡು, ಡಾ. ಎ. ಗುರುಸ್ವಾಮಿ ಪಾಂಡಿಯನ್ ಎಲ್.ಟಿ (ಸ್ಕೌಟ್), ಕೆ.ವಿ.ಎಸ್, ಶ್ರೀ ಕೆ.ಟಿ ಹರಿದಾಸ ಎಲ್.ಟಿ (ಸ್ಕೌಟ್) ಕೇರಳ, ಶ್ರೀ ಜೆ. ಕೃಷ್ಣಮೂರ್ತಿ ತಮಿಳುನಾಡು, ಶ್ರೀಮತಿ ಮೈಥಿಲಿರಾವ್ ಎಲ್.ಟಿ (ಗೈಡ್) ಕರ್ನಾಟಕ, ಶ್ರೀ ನಾಗೇಶ್ ಆರ್. ಶಿವಪೂರ ಎಲ್.ಟಿ (ಸ್ಕೌಟ್) ಮತ್ತು ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್) ಕರ್ನಾಟಕ ಇವರುಗಳು ಕಾರ್ಯನಿರ್ವಹಿಸಿದರು.

ಶ್ರೀ ಎಸ್.ಎಸ್. ರಾಯ್ ಡಿ.ಡಿ.ಎಸ್.ಎಲ್.ಟಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಷ್ಟ್ರೀಯ ತರಬೇತಿ ಕೇಂದ್ರ, ಪಚಮರಿ, ಮಧ್ಯಪ್ರದೇಶ ಇವರು ತರಬೇತಿ ಶಿಬಿರದ ಸಂಯೋಜಕರಾಗಿ ಶಿಬಿರಗಳನ್ನು ಯಶಸ್ವಿಗೊಳಿಸಿಕೊಟ್ಟರು.

ದಿನಾಂಕ 12.05.2026 ರಂದು ಬೆಳಿಗ್ಗೆ 08.30 ಗಂಟೆಯಿಂದ 10.30 ಗಂಟೆಯವರೆಗೆ ಶಿಬಿರಾರ್ಥಿಗಳ ಆಗಮನ, ನೊಂದಣಿ ಕಾರ್ಯ ಮತ್ತು ಶಿಬಿರಾರ್ಥಿಗಳನ್ನು ತರಬೇತಿಗೆ ಸಿದ್ಧಗೊಳಿಸುವ ಕಾರ್ಯವನ್ನು ಮಾಡಲಾಯಿತು. ಬೆಳಿಗ್ಗೆ 11.00 ಗಂಟೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾರ್ಥನೆ ಮತ್ತು ಧ್ವಜಾರೋಹಣ ಮಾಡುವುದರೊಂದಿಗೆ ತರಬೇತಿಗೆ ಚಾಲನೆ ನೀಡಲಾಯಿತು. ನಂತರ ಶಿಬಿರಗಳ ನಾಯಕರ ಮತ್ತು ಸಹ ನಾಯಕರ ಉಪಸ್ಥಿತಿಯಲ್ಲಿ ಶಿಬಿರದ ಉದ್ಘಾಟನಾ ಸಮಾರಂಭ ಜರುಗಿತು.

ದಿನಾಂಕ 14.05.2026 ರಂದು ಮಧ್ಯಾಹ್ನ 04.00 ಗಂಟೆಗೆ ಸನ್ಮಾನ್ಯ ಡಾ. ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು, ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ತರಬೇತಿಯ ಮಹತ್ವ ಹಾಗೂ ಆಯುಕ್ತರಾಗಿ ನಿರ್ವಹಿಸಬೇಕಾದ ಕಾರ್ಯಕ್ಷಮತೆಯ ಬಗ್ಗೆ ತಿಳಿಸಿ ಎಲ್ಲರಿಗೂ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀ ಎಮ್. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಕರ್ನಾಟಕ ಉಪಸ್ಥಿತರಿದ್ದರು.

ರಾಷ್ಟ್ರೀಯ ಸಂಸ್ಥೆ ಪಠ್ಯಕ್ರಮ (ಖಔಖ)ದ ಪ್ರಕಾರ ಮೊದಲೇ ಸಿದ್ಧಪಡಿಸಿದ ವಿಷಯಗಳ ವೇಳಾಪಟ್ಟಿಯಂತೆ (5 ದಿನಗಳು) ವಿಷಯ ಭೋಧನೆಯನ್ನು ಶಿಬಿರಾರ್ಥಿಗಳಿಗೆ ನಾಯಕರು ಮತ್ತು ಸಹ ನಾಯಕರು ಹಾಗೂ ಸಂಯೋಜಕರು ಮಾಡಿದರು. ಪ್ರತಿದಿನ ಬೆಳಿಗ್ಗೆ ಬಿ.ಪಿ. ವ್ಯಾಯಮ, ಬೆಳಗಿನ ತಪಾಸಣೆ, ಪ್ರಾರ್ಥನೆ ಮತ್ತು ಧ್ವಜಾರೋಹಣ ಮಧ್ಯಾಹ್ನ ಬಿಡುವಿನ ಕಾಲದ ಚಟುವಟಿಕೆಗಳು ಸಂಜೆ ಆಟಗಳು ಮತ್ತು ರಾತ್ರಿ ಶಿಬಿರಾಗ್ನಿ ಸಮಾರಂಭಗಳನ್ನು ನಡೆಸಲಾಯಿತು.

ದಿನಾಂಕ 15.05.2026 ರಂದು ಸಂಜೆ 07.30 ಗಂಟೆಗೆ ಭವ್ಯ ಶಿಬಿರಾಗ್ನಿಯನ್ನು ನಡೆಸಲಾಯಿತು. ಭವ್ಯ ಶಿಬಿರಾಗ್ನಿಯನ್ನು ಡಾ.ಕೆ.ಬಿ.ಗುರುಮೂರ್ತಿ ಅಧ್ಯಕ್ಷರು ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಕೇಂದ್ರದ ಅಭಿವೃದ್ಧಿ ಸಮಿತಿ ಕೊಂಡಜ್ಜಿ ಇವರು ಉದ್ಘಾಟಿಸಿದರು. ಕೊನೆಯಲ್ಲಿ ಶಿಬಿರಾರ್ಥಿಗಳಿಗೆ ಮೆಚ್ಚುಗೆ ನುಡಿಗಳನ್ನು ಆಡಿದರು, ಈ ಸಂದರ್ಭದಲ್ಲಿ ನಾಯಕರು ಮತ್ತು ಸಹನಾಯಕರು ಉಪಸ್ಥಿತರಿದ್ದರು.

ದಿನಾಂಕ 16.05.2026 ರಂದು ಬೆಳಿಗ್ಗೆ 07.00 ಗಂಟೆಗೆ ಸರ್ವಧರ್ಮ ಪ್ರಾರ್ಥನೆಯನ್ನು ಮತ್ತು ಧ್ವಜಾರೋಹಣ ಸಮಾರಂಭವನ್ನು ನಡೆಸಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳಿಂದ ಮೌಲ್ಯಮಾಪನ, ಶಿಬಿರಾರ್ಥಿಗಳಿಗೆ ಮುಕ್ತಸಭೆ ಹಾಗೂ ಧ್ವಜಅವರೋಹಣ ಕಾರ್ಯಕ್ರಮ ನಡೆಸಿ ರಾಷ್ಟ್ರಗೀತೆ ಹೇಳುವುದರೊಂದಿಗೆ ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

## 74ನೇ ಸಹಾಯಕ ನಾಯಕ ತರಬೇತುದಾರ ತರಬೇತಿ ಶಿಬಿರ (ಗೈಡ್ ವಿಭಾಗ), ಕೊಂಡಜ್ಜಿ



ದಿನಾಂಕ 17.05.2026 ರಿಂದ 23.05.2026ರ ವರೆಗೆ, ಗೈಡ್ ವಿಭಾಗದ ಸಹಾಯಕ ನಾಯಕ ತರಬೇತುದಾರ (**ALT –Guide Wing**) ತರಬೇತಿ ಶಿಬಿರವನ್ನು ಅರ್ಹ ದಳನಾಯಕರಿಗೆ, ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ತಾ. ಹರಿಹರ, ಜಿಲ್ಲಾ ದಾವಣಗೆರೆ ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ರಾಷ್ಟ್ರೀಯ ಸಂಸ್ಥೆ ಇವರ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು. ಕರ್ನಾಟಕ ರಾಜ್ಯದ 27 ಜಿಲ್ಲೆಗಳಿಂದ 65 ಅಭ್ಯರ್ಥಿಗಳು ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು.

2 ತಂಡಗಳಾಗಿ ವಿಂಗಡಣೆ ಮಾಡಿ (32+33). ಮೊದಲನೇ ತಂಡದ ನಾಯಕರಾಗಿ ಶ್ರೀಮತಿ ಗೀತಾ ನಟರಾಜ್, ಎಲ್.ಟಿ (ಗೈಡ್), ರಾಜ್ಯ ಆಯುಕ್ತರು (ಗೈಡ್) ಕರ್ನಾಟಕ ಮತ್ತು ಎರಡನೇ ತಂಡದ ನಾಯಕರಾಗಿ ಶ್ರೀಮತಿ ಭವಾನಿ, ಎಲ್.ಟಿ (ಗೈಡ್) ತಮಿಳುನಾಡು ಹಾಗೂ ಇವರುಗಳಿಗೆ ಸಹಾಯಕರಾಗಿ ಶ್ರೀಮತಿ ಗೀತಾ ಸೆಲ್ವನ್, ಎ.ಎಲ್.ಟಿ (ಗೈಡ್), ತಮಿಳುನಾಡು, ಶ್ರೀಮತಿ ಮೇರಿ ಫಿಲೋಮೀನ, ಎಲ್.ಟಿ (ಬುಲ್‌ಬುಲ್), ಶ್ರೀಮತಿ ಸುಮನ ಎಸ್.ವಿ., ಎಲ್.ಟಿ (ರೇಂಜರ್), ಶ್ರೀಮತಿ ರತ್ನವ್ವ ಗುಂಜಾಲ್, ಎಲ್.ಟಿ (ಗೈಡ್), ಶ್ರೀಮತಿ ಕಾಮೇಶ್ವರಿ, ಎಲ್.ಟಿ (ಗೈಡ್) ಶ್ರೀಮತಿ ಮಮತಾ ಶೀಲವಂತ, ಎಲ್.ಟಿ (ಗೈಡ್) ಕಾರ್ಯನಿರ್ವಹಿಸಿದರು.

ದಿನಾಂಕ 17.05.2026 ರಂದು ಬೆಳಿಗ್ಗೆ 8–30 ಗಂಟೆಯಿಂದ 10.30 ಗಂಟೆಯವರೆಗೆ ಶಿಬಿರಾರ್ಥಿಗಳ ಆಗಮನ, ನೊಂದಣಿ ಕಾರ್ಯ ಮತ್ತು ಶಿಬಿರಾರ್ಥಿಗಳನ್ನು ತರಬೇತಿಗೆ ಸಿದ್ಧಗೊಳಿಸುವ ಕಾರ್ಯವನ್ನು ಮಾಡಲಾಯಿತು. ಬೆಳಿಗ್ಗೆ 11.00 ಗಂಟೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾರ್ಥನೆ ಮತ್ತು ಧ್ವಜಾರೋಹಣ ಮಾಡುವುದರೊಂದಿಗೆ ತರಬೇತಿಗೆ ಚಾಲನೆ ನೀಡಲಾಯಿತು. ನಂತರ ಶಿಬಿರನಾಯಕ ಮತ್ತು ಸಹ ನಾಯಕರ ಉಪಸ್ಥಿತಿಯಲ್ಲಿ ಶಿಬಿರದ ಉದ್ಘಾಟನಾ ಸಮಾರಂಭ ಜರುಗಿತು.

ದಿನಾಂಕ 21.05.2026 ರಂದು ಬೆಳಿಗ್ಗೆ 09.00 ಗಂಟೆಗೆ ಡಾ. ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ತರಬೇತಿಯ ಮಹತ್ವ ಹಾಗೂ ಸಹಾಯಕ ನಾಯಕ ತರಬೇತುದಾರರಾದ ಮೇಲೆ ನಿರ್ವಹಿಸಬೇಕಾದ ಕಾರ್ಯಕ್ಷಮತೆಯ ಬಗ್ಗೆ ತಿಳಿಸಿ, ಎಲ್ಲರಿಗೂ ಶುಭ ಹಾರೈಸಿದರು.

ರಾಷ್ಟ್ರೀಯ ಸಂಸ್ಥೆ ಪಠ್ಯಕ್ರಮ(**SOT**)ದ ಪ್ರಕಾರ (7 ದಿನಗಳು) ವಿಷಯ ಭೋಧನೆಯನ್ನು ನಡೆಸಲಾಯಿತು.

ದಿನಾಂಕ 22.05.2026 ರಂದು ಸಂಜೆ 07.00 ಗಂಟೆಗೆ ಶಿಬಿರದ ನಾಯಕರ ನೇತೃತ್ವವದಲ್ಲಿ ಭವ್ಯ ಶಿಬಿರಾಗ್ನಿಯನ್ನು ಆಯೋಜಿಸಲಾಗಿತ್ತು. ದಿನಾಂಕ 23.05.2026 ರಂದು ಬೆಳಿಗ್ಗೆ 07.00 ಗಂಟೆಗೆ ಸರ್ವಧರ್ಮ ಪ್ರಾರ್ಥನೆಯನ್ನು ಮತ್ತು ಧ್ವಜಾರೋಹಣ ಸಮಾರಂಭವನ್ನು ನಡೆಸಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳಿಂದ ಮೌಲ್ಯಮಾಪನ, ಶಿಬಿರಾರ್ಥಿಗಳಿಗೆ ಮುಕ್ತಸಭೆ ಹಾಗೂ ಧ್ವಜಅವರೋಹಣ ಕಾರ್ಯಕ್ರಮ ನಡೆಯಿಸಿ, ರಾಷ್ಟ್ರಗೀತೆ ಹೇಳುವುದರೊಂದಿಗೆ ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ತರಬೇತಿ ಶಿಬಿರದ ಸಂಪೂರ್ಣ ಜವಾಬ್ದಾರಿಯನ್ನು ಶ್ರೀಮತಿ ಶಾಮಲ ಕೆ.ವಿ., ರಾಜ್ಯ ತರಬೇತಿ ಆಯುಕ್ತರು (ಗೈಡ್) ನಿರ್ವಹಿಸಿದರು.





## ಕಬ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಸ್ಕೌಟ್ ಮಾಸ್ಟರ್ಸ್/ಗೈಡ್ ಕ್ಯಾಪ್ಟನ್ಸ್/ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ – ದೊಡ್ಡಬಳ್ಳಾಪುರ



ದಿನಾಂಕ 20.05.2026 ರಿಂದ 26.05.2026ರ ವರೆಗೆ ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಬ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಸ್ಕೌಟ್ ಮಾಸ್ಟರ್ಸ್/ಗೈಡ್ ಕ್ಯಾಪ್ಟನ್ಸ್/ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳನ್ನು ರಾಜ್ಯ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿತ್ತು. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಒಟ್ಟು 97 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಶ್ರೀಮತಿ ಭಾರತಿ ಚಕ್ರವರ್ತಿ, ಎ.ಎಲ್.ಟಿ (ಕಬ್), ಶ್ರೀ ಜೆ. ಚಕ್ರವರ್ತಿ, ಎಲ್.ಟಿ (ಸ್ಕೌಟ್), ಶ್ರೀಮತಿ ಚೇತನಾ ಪಾಟೀಲ್, ಎ.ಎಲ್.ಟಿ (ಕಬ್), ಶ್ರೀ ಸಿ.ಎನ್. ಮಹೇಶ್, ಎಲ್.ಟಿ (ಸ್ಕೌಟ್), ಶ್ರೀ ರಾಜೇಶ್ ಅವಲಕ್ಕಿ, ಎಲ್.ಟಿ (ರೋವರ್), ಶ್ರೀ ನಾಗೇಶ್ ಆರ್. ಶಿವಪೂರ್ ಎಲ್.ಟಿ (ಸ್ಕೌಟ್), ಶ್ರೀಮತಿ ಗೌರಾಬಾಯಿ, ಎಲ್.ಟಿ (ಬುಲ್‌ಬುಲ್), ಶ್ರೀಮತಿ ಮಿನಾಕ್ಷಮ್ಮ, ಎಲ್.ಟಿ (ಬುಲ್‌ಬುಲ್), ಶ್ರೀಮತಿ ಗಾಯತ್ರಿ ಜಿ., ಎ.ಎಲ್.ಟಿ (ಗೈಡ್), ಶ್ರೀಮತಿ ಜಯಲಕ್ಷ್ಮಿ, ಎ.ಎಲ್.ಟಿ (ಗೈಡ್), ಶ್ರೀಮತಿ ಬಿ.ವಿ. ರಾಮಲತಾ, ಎಲ್.ಟಿ (ರೇಂಜರ್) ಇವರಗಳು ನಾಯಕರಾಗಿ ಕಾರ್ಯನಿರ್ವಹಿಸಿದರು.

ಸದರಿ ಶಿಬಿರಗಳ ಉದ್ಘಾಟನಾ ಸಮಾರಂಭವು ಆಯಾಯ ಶಿಬಿರಗಳ ನಾಯಕರ ಉಪಸ್ಥಿತಿಯಲ್ಲಿ ಜರುಗಿದವು.

S.O.T ಪ್ರಕಾರ ಶಿಬಿರಾರ್ಥಿಗಳಿಗೆ ತರಬೇತಿ ನೀಡಲಾಯಿತು.

ದಿನಾಂಕ 23.05.2026 ರಂದು, ಶಿಬಿರಾರ್ಥಿಗಳೆಲ್ಲರೂ ಹೊರಸಂಚಾರ ಕಾರ್ಯಕ್ರಮ ಪೂರೈಸಿದರು.

ದಿನಾಂಕ 25.05.2026 ರಂದು ಮಧ್ಯಾಹ್ನ 04.00 ಗಂಟೆಗೆ ಜರುಗಿದ ತರಬೇತಿ ಶಿಬಿರಗಳ ಸಮಾರೋಪ ಸಮಾರಂಭದಲ್ಲಿ ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಅಧ್ಯಕ್ಷತೆ ವಹಿಸಿ, ಶಿಬಿರಾರ್ಥಿಗಳನ್ನು ಉದ್ದೇಶಿಸಿ, ಮಾತನಾಡಿ ಶುಭಕೋರಿದರು. ಈ ಸಂದರ್ಭದಲ್ಲಿ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಮೈಸೂರು, ಶ್ರೀ ಅನಲೇಂದ್ರ ಶರ್ಮ ಸಹ ನಿರ್ದೇಶಕರು ಮಕ್ಕಳ ಕಾರ್ಯಕ್ರಮ, ರಾಷ್ಟ್ರೀಯ ಸಂಸ್ಥೆ, ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್), ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ರಾಜ್ಯ ಕಾರ್ಯದರ್ಶಿ, ಹಾಗೂ ಇತರರು ಉಪಸ್ಥಿತರಿದ್ದರು.

ದಿನಾಂಕ 24.05.2026 ರಂದು ರಾತ್ರಿ 07.00 ಗಂಟೆಗೆ ಭವ್ಯ ಶಿಬಿರಾಗ್ನಿಯನ್ನು ಆಯೋಜಿಸಲಾಗಿತ್ತು. ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಭವ್ಯ ಶಿಬಿರಾಗ್ನಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಮಧುಸೂದನ ಆವಲ, ಅಪರ ಅಂತರರಾಷ್ಟ್ರೀಯ ಆಯುಕ್ತರು (ಸ್ಕೌಟ್), ಶ್ರೀ ಎಂ.ಎಸ್ ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್) ಇವರು ಉಪಸ್ಥಿತರಿದ್ದರು.

26.05.2026 ರಂದು ಬೆಳಿಗ್ಗೆ "ಸರ್ವಧರ್ಮ ಪ್ರಾರ್ಥನೆ" ಸಮಾರಂಭವನ್ನು ನಡೆಸಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳಿಂದ ಮೌಲ್ಯಮಾಪನ, ಶಿಬಿರಾರ್ಥಿಗಳ ಮುಕ್ತ ಸಭೆ, ಧ್ವಜಾವರೋಹಣ ಕಾರ್ಯಕ್ರಮ ನಡೆಸಿ, ರಾಷ್ಟ್ರಗೀತೆ ಹೇಳುವುದರೊಂದಿಗೆ ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್) ಇವರು ತರಬೇತಿ ಶಿಬಿರದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದ್ದರು.



## ರಾಜ್ಯ ವಯಸ್ಕ ಸಂಪನ್ಮೂಲ ಸಮಿತಿ ಸಭೆ

ದಿನಾಂಕ:25.05.2026 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಡಾ. ಅನಿಬೆಸೆಂಟ್ ಸ್ಕೌಟ್ಸ್ ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ಜರುಗಿದ ರಾಜ್ಯ ವಯಸ್ಕ ಸಂಪನ್ಮೂಲ ಸಮಿತಿ ಸಭೆಯಲ್ಲಿ ಭಾಗವಹಿಸಿ ಸ್ಕೌಟ್ಸ್ ಗೈಡ್ಸ್ ಮುಂದಿನ ಚಟುವಟಿಕೆ, ಕಾರ್ಯಕ್ರಮ, ಶಿಬಿರಗಳ ಮತ್ತು ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಸಭೆಯಲ್ಲಿ ಶ್ರೀ ಸಿ. ಎಸ್ ರೆಡ್ಡಿ, ಶ್ರೀಮತಿ ಗೀತಾನಟರಾಜ್, ಶ್ರೀ ಬಿ. ಕೆ ಬಸವರಾಜ್, ಶ್ರೀಮತಿ ರಾಮಲತಾ, ಶ್ರೀ ಎಂ. ಎಸ್ ಸತೀಶ್ ಹಾಗೂ ಸಮಿತಿ ಸದಸ್ಯರುಗಳು ಭಾಗವಹಿಸಿದರು.

# ಸ್ಕೌಟ್ ಸ್ಕಿಲೋ ಕಾರ್ಯಕ್ರಮ















## ಬೆಂಗಳೂರು ದಕ್ಷಿಣ





– ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ದಳಗಳ ಮಟ್ಟದಲ್ಲಿ ಕಬ್ಸ್-ಬುಲ್‌ಬುಲ್ ಸ್ಕೌಟ್ಸ್-ಗೈಡ್ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಸ್ಕೌಟ್ಸ್-ಗೈಡ್ಸ್ ಪ್ರಾರ್ಥನೆ, ಧ್ವಜಗೀತೆ, ಪ್ರತಿಜ್ಞೆ, ನಿಯಮ, ಜಂಗಲ್ ಮತ್ತು ತಾರಾ ಸ್ಟೋರಿ, ಆಟದ ಮೂಲಕ ಗಂಟುಗಳನ್ನು ಅಭ್ಯಾಸವನ್ನು ಮಾಡಿಸಲಾಯಿತು, ದಳ ಮಟ್ಟದಲ್ಲಿ ಹೊರ ಸಂಚಾರವನ್ನು ಹಮ್ಮಿಕೊಳ್ಳಲಾಯಿತು. ಬೇಸಿಗೆ ಶಿಬಿರ ಕೊನೆಯ ದಿನದಂದು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪಧಾದಿಕಾರಿಗಳು ಬೇಸಿಗೆ ಶಿಬಿರಕ್ಕೆ ಭೇಟಿ ನೀಡಿ ಮಕ್ಕಳಿಗೆ ಶುಭಕೋರಿದರು.



ದಿನಾಂಕ 08/04/2026 ರಿಂದ 12/04/2026ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2025-26ನೇ ಸಾಲಿನ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ದಿನಾಂಕ 09/04/2026 ರಂದು ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ರಾಜ್ಯ ಮುಖ್ಯ ಆಯುಕ್ತರಾದ ಡಾ॥ ಪಿ.ಜಿ.ಆರ್ ಸಿಂಧ್ಯಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳನ್ನು ಉದ್ದೇಶಿ ಮಾತನಾಡಿದರು. ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ(ಸ್ಕೌ) ಶಿಬಿರದ ನಿರ್ದೇಶಕರಾಗಿದ್ದರು. ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು ಶಿಬಿರಕ್ಕೆ ಭೇಟಿ ನೀಡಿದರು. ಶ್ರೀ ಎ.ಎಸ್. ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು ಮತ್ತು ರಾಜ್ಯ ಜಂಟಿ ಕಾರ್ಯದರ್ಶಿಗಳು, ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್), ದಳನಾಯಕ-ನಾಯಕಿಯರು, ಸ್ಕೌಟ್ಸ್-ಗೈಡ್ಸ್‌ಗಳು, ಸೇವಾ ರೋವರ್ಸ್-ರೇಂಜರ್ಸ್ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರಕ್ಕೆ ಶ್ರೀ ಪಳನಿ, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶಿಬಿರಕ್ಕೆ ಭೇಟಿ ನೀಡಿದರು.

– ದಿನಾಂಕ 17/04/2026 ರಿಂದ 23/04/2026ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ಸ್ ಮಾಸ್ಟರ್, ಫ್ಲಾಕ್ ಲೀಡರ್ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಯಿತ್ತು. ಒಟ್ಟು 8 ಶಿಬಿರದಿಂದ 137 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಸ್ಕೌಟ್ಸ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ.(ಸ್ಕೌಟ್ಸ್) ಶಿಬಿರದ ನಾಯಕರಾಗಿದರು, 28 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಗೈಡ್ಸ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ವಿಕ್ಟೋರಿಯಾ ಅಮಲರಾಣಿ ಎ.ಎಲ್.ಟಿ.(ಗೈಡ್), ಶಿಬಿರದ ನಾಯಕಿಯಾಗಿದ್ದರು. 32 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ವಿ.ಎಂ ನಾರಾಯಣಸ್ವಾಮಿ, ಎಲ್.ಟಿ.(ಕಬ್) ಶಿಬಿರದ ನಾಯಕರಾಗಿದರು. 12 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಮೀನಾಕ್ಷಮ್ಮ, ಎಲ್.ಟಿ.(ಫ್ಲಾಕ್) ಶಿಬಿರದ ನಾಯಕಿರಾಗಿದ್ದರು. 15 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಸ್ಕೌಟ್ಸ್ ಮಾಸ್ಟರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀ ಎಂ.ವಿ. ಜನಾರ್ಧನ್, ಎಲ್.ಟಿ.(ಸ್ಕೌಟ್ಸ್) ಶಿಬಿರದ ನಾಯಕರಾಗಿದರು. 22 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಗೈಡ್ಸ್ ಕ್ಯಾಪ್ಟನ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಅಮಲಪೂರ್ವ ಮೇರಿ, ಎಲ್.ಟಿ.(ಗೈಡ್ಸ್) ಶಿಬಿರದ ನಾಯಕಿಯಾಗಿದರು. 12 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಬ್ ಮಾಸ್ಟರ್ ಮುಂದುವರದ ತರಬೇತಿ ಶಿಬಿರಕ್ಕೆ ಶ್ರೀಮತಿ ಸಂಧ್ಯಾರಾಣಿ ಎಲ್.ಟಿ.(ಕಬ್) ಶಿಬಿರದ ನಾಯಕರಾಗಿದರು. 07 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಫ್ಲಾಕ್ ಲೀಡರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಮೇರಿ ಫಿಲೋಮಿನಾ, ಎಲ್.ಟಿ.(ಫ್ಯಾಕ್ಸ್) ಶಿಬಿರದ ನಾಯಕಿರಾಗಿದರು. 9 ಶಿಬಿರಾರ್ಥಿಗಳು ಭಾಗವಹಿಸಿದ್ದರು.



ದಿನಾಂಕ 22/04/2026 ರಂದು ರಾಜ್ಯ ಮುಖ್ಯ ಆಯುಕ್ತರಾದ ಡಾ॥ ಪಿ.ಜಿ.ಆರ್. ಸಿಂಧ್ಯಾರವರು ತರಬೇತಿ ಶಿಬಿರ ಮುಕ್ತಾಯ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಎಸ್. ಮಧುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ







ಜಿಲ್ಲೆಯ ಖಜಾಂಚಿ, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು ಮತ್ತು ರಾಜ್ಯ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ವಿಕ್ಟೋರಿಯಾ ಅಮಲರಾಣಿ ಎ.ಎಲ್.ಟಿ. (ಗೈಡ್), ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ. (ಸ್ಕೌಟ್ಸ್) ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶಿಬಿರ ನಾಯಕರುಗಳು, ಸಹನಾಯಕರುಗಳು, ಶ್ರೀ ಚಂದ್ರು .ಪಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್), ಶಿಬಿರಾರ್ಥಿಗಳು ಮತ್ತು ಸೇವಾ ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.

## ಬೀದರ್









"ಭಾರತ್ ಸ್ಕೌಟ್ಸ್-ಗೈಡ್ಸ್‌ನಿಂದ ಪರಿಶ್ರಮ ಹಾಗೂ ಸೇವಾ ಮನೋಭಾವ ಗಟ್ಟಿಯಾಗುತ್ತದೆ" ಎಂದು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಈಶ್ವರ ಖಂಡ್ರೆ ಹೇಳಿದರು. ಶುಕ್ರವಾರ ನಗರದ ಶಿವನಗರ ಉತ್ತರದಲ್ಲಿ ನೂತನವಾಗಿ ನಿರ್ಮಿಸಲಾದ ಡಾ.ಎಸ್.ಎಸ್. ಸಿದ್ದಾರೆಡ್ಡಿ ಸ್ಕೌಟ್ಸ್ ಭವನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಭಾರತ್ ಸ್ಕೌಟ್ಸ್-ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಹಾಗೂ ಮಾಜಿ ಸಚಿವ ಡಾ. ಪಿ.ಜಿ.ಆರ್. ಸಿಂಧ್ಯಾ ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಸಂಸ್ಥೆಯನ್ನು ಲಾರ್ಡ್ ಬ್ಯಾಡೆನ್ ಪೊವೆಲ್ ಇಂಗ್ಲೆಂಡಿನಲ್ಲಿ 1907ರಲ್ಲಿ ಪ್ರಾರಂಭಿಸಿದ್ದು, ಭಾರತದಲ್ಲಿ 1909ರಲ್ಲಿ ಪ್ರಾರಂಭಿಸಲಾಯಿತು. ಮೈಸೂರು ಅರಸರು ರಾಜಾಶ್ರಯ ನೀಡಿದರು. ಇಂದು ಜಿಲ್ಲಾ ಅಷ್ಟೇ ಅಲ್ಲ, ತಾಲ್ಲೂಕು, ಹೋಬಳಿ ಹಾಗೂ ಗ್ರಾಮೀಣ ಭಾಗದಲ್ಲಿ ಸಹ ಕಾರ್ಯನಿರ್ವಹಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು. ಜ್ಞಾನ, ಕೌಶಲ, ಸೇವಾ ಮನೋಭಾವ ವೃದ್ಧಿಸುವಲ್ಲಿ ಜಗತ್ತಿನ 214 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ" ಎಂದರು. ಜಿಲ್ಲಾ ಮುಖ್ಯ ಆಯುಕ್ತೆ ಡಾ. ಗುರಮ್ಮ ಸಿದ್ದಾರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ವಿಧಾನ ಪರಿಷತ್ ಸದಸ್ಯ ಶ್ರೀ ಎಂ.ಜಿ. ಮುಳೆ, ಸ್ಕೌಟ್ಸ್ ರಾಜ್ಯ ಸಹಾಯಕ ಆಯುಕ್ತ ಶ್ರೀ ಸಿ.ಬಿ. ಪಾಟೀಲ ಓಕಳಿ, ಡಾ. ಎಸ್.ಎಸ್. ಸಿದ್ದಾರೆಡ್ಡಿ ಮಾತನಾಡಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಉಪಾಧ್ಯಕ್ಷೆ ಪ್ರೊ. ಲೀಲಾವತಿ ಚಕೋತೆ, ಡಾ. ಅಬ್ದುಲ್ ಖದೀರ್, ಡಾ. ಹೆಚ್.ಬಿ. ಭರಶೆಟ್ಟಿ ಇತರರಿದ್ದರು. ಶ್ರೀ ಎಸ್.ಎಸ್. ಹಿರೇಮಠ ಪ್ರಾಸ್ತಾವಿಕ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ರಮೇಶ್ ತಿಪಶೆಟ್ಟಿ ಸ್ವಾಗತಿಸಿದರು. ಸಹಾಯಕ ಸಂಘಟನಾ ಆಯುಕ್ತೆ ಮಲ್ಲೇಶ್ವರಿ ಜೂಜಾರೆ ನಿರೂಪಣೆ ಮಾಡಿ, ವಂದಿಸಿದರು.

# ಸಿದ್ಧರೆಡ್ಡಿ ಸ್ಕೌಟ್ ಭವನ, ಬೀದರ್



ಡಾ. ಎಸ್.ಎಸ್. ಸಿದ್ದಾರೆಡ್ಡಿ ಬಡವರ ವೈದ್ಯರೆಂದೇ ಖ್ಯಾತರಾಗಿದ್ದರು. ಇಲ್ಲಿ ಸ್ಕೌಟ್-ಗೈಡ್ ಸ್ಥಾಪಕರಾಗಿದ್ದರು. ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳಿಗೆ ಉತ್ತೇಜನ ದೊರಕಿ ಮಕ್ಕಳನ್ನು ಸಮಾಜದ ಆಸ್ತಿಯಾಗಿ ರೂಪಿಸಲು ಸಿದ್ಧಗೊಳಿಸಬೇಕೆಂಬ ನಿಟ್ಟಿನಲ್ಲಿ ಇಲ್ಲಿ ಸ್ಕೌಟ್ ಭವನ ನಿರ್ಮಿಸುವ ಕನಸು ಕಂಡಿದ್ದರು. ಅವರ ಮೂರು ದಶಕದ ಹಿಂದಿನ ಕನಸು ಇದೀಗ ನನಸಾಗುತ್ತಿದೆ. ಈ ಕನಸು ನನಸಾಗಿಸುವಲ್ಲಿ ಅವರ ಧರ್ಮಪತ್ನಿ ಡಾ. ಗುರುಮ್ಮ ಸಿದ್ದಾರೆಡ್ಡಿ ಪ್ರಯತ್ನ ಮುಖ್ಯವಾಗಿರುವುದು ವಿಶೇಷ. ಡಾ. ಸಿದ್ದಾರೆಡ್ಡಿ ಪುತ್ರರಾದ ಕಲಬುರಗಿ ಯುನೈಟೆಡ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಹಾಗೂ ಡಾ. ಸಿದ್ದಾರೆಡ್ಡಿ ಫೌಂಡೇಷನ್ ಅಧ್ಯಕ್ಷರಾದ ಡಾ. ವಿಕ್ರಮ್ ಸಿದ್ದಾರೆಡ್ಡಿ, ಕಲಬುರಗಿ ಸಿದ್ಧರಾಮೇಶ್ವರ ಕಣ್ಣಿನ ಆಸ್ಪತ್ರೆ ಮುಖ್ಯಸ್ಥೆ ಡಾ. ರಾಜಶ್ರೀ ರೆಡ್ಡಿ ಅವರು ಪಾರ್ವತಿ ಲೇಔಟ್‌ನಲ್ಲಿ ತಲಾ 65 ಲಕ್ಷ ವೆಚ್ಚದ (ಒಟ್ಟು 1.30 ಕೋಟಿ ಮೌಲ್ಯ) 48000 ಚದರ ಅಡಿಯ ನಿವೇಶನ 3 ವರ್ಷದ ಹಿಂದೆ ದಾನ ಮಾಡಿದ್ದು, ಇಲ್ಲಿ ಸಿದ್ದಾರೆಡ್ಡಿ ಸ್ಕೌಟ್ ಭವನ ತಲೆ ಎತ್ತಿದೆ ಕೆ.ಕೆ.ಆರ್.ಡಿ.ಬಿ. ಕಟ್ಟಡಕ್ಕೆ 2 ಕೋಟಿ ಅನುದಾನ ಒದಗಿಸಿದೆ, ಮಕ್ಕಳಿಗೆ ತರಬೇತಿ ವಿವಿಧಧ ಕೋರ್ಸ್, ಸಭೆ, ಸಮಾರಂಭ ನಡೆಸಲು ಅನುಕೂಲವಾಗುವ ನಿಟ್ಟಿನಲ್ಲಿ ಸ್ಕೌಟ್ಸ್ ಭವನವನ್ನು ನೆಲ ಹಾಗೂ ಮೊದಲ ಮಹಡಿಯಲ್ಲಿ ನಿರ್ಮಿಸಲಾಗಿದೆ. ಎರಡನೇ ಹಂತದಲ್ಲಿ ಇಲ್ಲಿ ಇನ್ನಷ್ಟು ಕಾಮಗಾರಿ ನಡೆಯಲಿವೆ. ಇದಕ್ಕೆ ಕೆ.ಕೆ.ಆರ್.ಡಿ.ಬಿ. ಸೇರಿ ವಿವಿಧ ಮೂಲಗಳಿಂದ ಅನುದಾನ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಈಶ್ವರ ಖಂಡ್ರೆ ಹಾಗೂ ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್ ಅವರು ಡಾ. ಸಿದ್ದಾರೆಡ್ಡಿ ಸೇವೆ ಮನ್ನಿಸಿ, ಭವನಕ್ಕೆ ಅನುದಾನ ಕೊಡಲು ಪ್ರಯತ್ನಿಸಿದ್ದಾರೆ. ಹೀಗಾಗಿ ಅಡಿಗಲ್ಲು ನೆರವೇರಿದ ಒಂದೂವರೆ ವರ್ಷದಲ್ಲಿ ಭವನ ಲೋಕಾರ್ಪಣೆಗೆ ಸಿದ್ಧವಾಗಿದೆ. ಡಾ. ಸಿದ್ದಾರೆಡ್ಡಿ ಮೂಲತಃ ವಿಜಯಪುರ ಜಿಲ್ಲೆಯ ಸಿಂದಗಿಯವರು. ಎಂ.ಎಸ್. ಪದವಿ ಪಡೆದಿದ್ದರು. 1967ರಲ್ಲಿ ಬೀದರ್ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ವೈದ್ಯರಾಗಿ ಬಂದವರು ಇಲ್ಲಿನವರೇ ಆಗಿದ್ದರು, ಬಸವಣ್ಣನವರಂತೆ ಇದನ್ನೇ ಕರ್ಮಭೂಮಿಯನ್ನಾಗಿ ಮಾಡಿಕೊಂಡು ಐದು ದಶಕ ಜಿಲ್ಲೆಗಾಗಿ ಸಾಕಷ್ಟು ಸೇವೆ ಸಲ್ಲಿಸಿದ್ದರು. 2015ರ ಏಪ್ರಿಲ್ 3 ರಂದು ಶಿವೈಕ್ಯರಾಗಿದ್ದರು. ವೈದ್ಯ ವೃತ್ತಿ ಬಡವರ ಸೇವೆಗೆ ಮೀಸಲಿಟ್ಟು ಕೆಲಸ ಮಾಡುವ ಜೊತೆಗೆ ಅಪ್ಪಟ ಸಮಾಜ ಸೇವಕರಾಗಿ ದುಡಿದಿದ್ದರು. ಬೀದರ್ ಎಫ್.ಪಿ.ಎ.ಐ. ಸ್ಥಾಪಿಸಿದ್ದರು. ಐ.ಎಂ.ಎ. ರೋಟರಿ ಕ್ಲಬ್, ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥಾಪಕರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಬಡವರಿಗೆ ಸೇವೆ, ಜಿಲ್ಲೆಯ ಅಭಿವೃದ್ಧಿಗೆ ಜೀವಿತಾವಧಿವರೆಗೂ ದುಡಿದಿದ್ದರು. ಇದೀಗ ಅವರ ಹೆಸರಿನಲ್ಲಿ ಸ್ಕೌಟ್ ಭವನ ನಿರ್ಮಾಣವಾಗಿದ್ದು, ಅವರ ಸೇವೆಗೆ ಸದಾ ಸ್ಮರಿಸುವಂತೆ ಮಾಡಲಿದೆ.



## ಚಿಕ್ಕಬಳ್ಳಾಪುರ



"ವಿದ್ಯಾರ್ಥಿಗಳಿಗೆ ಸ್ಕೌಟ್ಸ್-ಗೈಡ್ಸ್ ತರಬೇತಿ ನೀಡುವುದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಸ್ಕೌಟ್ಸ್-ಗೈಡ್ಸ್ ಶಿಬಿರದಲ್ಲಿ ಭಾಗವಹಿಸುವ ಮೂಲಕ, ಓದಿನಲ್ಲಿಯೂ ಸದಾ ಮುಂಚೂಣಿ ಕಾಯ್ದುಕೊಂಡ ಬಂದ ಅನೇಕ ವಿದ್ಯಾರ್ಥಿಗಳ ಸಾಧನೆಯೇ ಸಾಕ್ಷಿ" ಎಂದು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸತೀಶ್ ಎನ್. ಹರ್ಷ ವ್ಯಕ್ತಪಡಿಸಿದರು. ನಗರದ ಎಸ್.ಆರ್. ಸಿಟಿಜನ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಬೇಸಿಗೆ ಶಿಬಿರ ಹಾಗೂ ರಾಜ್ಯ ಪುರಸ್ಕಾರ ಪ್ರಶಸ್ತಿ ತಯಾರಿ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು. ಶಿಬಿರದಲ್ಲಿ ಸ್ಕೌಟ್ಸ್ ನಾಯಕರಾಗಿ ಶ್ರೀ ನಾಗರಾಜು ಆರ್., ಗೈಡ್ ಶಿಕ್ಷಕಿಯಾಗಿ ಶ್ರೀಮತಿ ಸತ್ಯಜ್ಯೋತಿ ತರಬೇತಿ ನೀಡಿದರು.



ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ ಇಲ್ಲಿ ದಿನಾಂಕ 18.5.2026 ರಂದು ಶ್ರೀಮತಿ ಚಿನ್ನತಾಯಮ್ಮ, ಡಾ. ಪಿ. ರಮೇಶ್ ಪ್ರಾಂಶುಪಾಲರು, ಕಾಲೇಜಿನ ಪ್ರಾಧ್ಯಾಪಕರುಗಳಾದ ಶ್ರೀ ಅರವಿಂದ ರೆಡ್ಡಿ, ಶ್ರೀಮತಿ ಶ್ವೇತಾ, ಶ್ರೀಮತಿ ಪೂರ್ಣಿಮಾ ಹಾಗೂ ಇತರರು ಉಪಸ್ಥಿತಿಯಲ್ಲಿ ಬೇಸಿಗೆ ಶಿಬಿರ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಾಧ್ಯಾಪಕರು, "ಈ ರೀತಿ ಮಾಹಿತಿ ಶಿಬಿರದಲ್ಲಿ ಹೆಚ್ಚು ವಿಷಯ ತಿಳಿದುಕೊಳ್ಳುವ ಮೂಲಕ ಜೀವನ ಮೌಲ್ಯಗಳು ಕಲಿಯಬೇಕು" ಎಂದು ಹೇಳಿದರು. ನಂತರ ಪ್ರಾಂಶುಪಾಲರು "ರೋವರ್ ಮತ್ತು ರೇಂಜರ್ ಘಟಕಕ್ಕೆ ಸೇರುವ ಮೂಲಕ ನಾಯಕತ್ವ ಗುಣ, ಉತ್ತಮ ಆರೋಗ್ಯ, ಪಡೆದುಕೊಳ್ಳಬೇಕು" ಎಂದು ಸಲಹೆ ನೀಡಿದರು.

## ದಕ್ಷಿಣ ಕನ್ನಡ



ದಿನಾಂಕ 07.04.2026 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ, ಲಾಲ್‌ಬಾಗ್ ಮಂಗಳೂರು ಇಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಇತ್ತೀಚೆಗೆ ಬೆಂಗಳೂರು ನಗರ ವಿಶ್ವ ವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ ಮೋಹನ್ ಆಳ್ವ ರವರನ್ನು ಜಿಲ್ಲಾ ಸಂಸ್ಥೆಯ ವತಿಯಿಂದ ಅಭಿನಂದಿಸಲಾಯಿತು.

– ದಿನಾಂಕ 08.04.2026 ರಿಂದ 10.04.2026 ರವರೆಗೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರವು ನಡೆಯಿತು. 50 ಸ್ಕೌಟ್-ಗೈಡ್ ಮಕ್ಕಳು ಭಾಗವಹಿಸಿದ್ದರು. ಗೈಡರ್ ಶ್ರೀಮತಿ ಸ್ವರ್ಣಲತಾ ಹಾಗೂ ಸ್ಕೌಟರ್ ಶ್ರೀ

ಪ್ರತಿಮ್ ಕುಮಾರ್ ಕೆ.ಎಸ್ ಹಾಗು ಆಗಮಿಸಿದ ಶಿಕ್ಷಕ-ಶಿಕ್ಷಕಿಯರು ಪರೀಕ್ಷಾ ಶಿಬಿರವನ್ನು ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆ, ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಹಾಗೂ ಸ್ಕೌಟರ್-ಗೈಡರ್‌ಗಳು ಸಹಕರಿಸಿದರು.



ಮೀಫ್ ಸಂಸ್ಥೆ, ದ.ಕ ಜಿಲ್ಲೆ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ದ.ಕ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ 25 ವಿದ್ಯಾಸಂಸ್ಥೆಗಳ 43 ಶಿಕ್ಷಕ-ಶಿಕ್ಷಕಿಯರಿಗೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಪ್ರಾಥಮಿಕ ಕಬ್, ಬುಲ್‌ಬುಲ್, ಸ್ಕೌಟ್, ಗೈಡ್ ತರಬೇತಿ ಶಿಬಿರವು ದಿನಾಂಕ 11.04.2026 ರಿಂದ 17.04.2026ರವರೆಗೆ ನಡೆಯಿತು. ದಿನಾಂಕ 11.04.2026 ರಂದು ಹಿರಿಯ ಕಬ್ ಮಾಸ್ಟರ್ ಶ್ರೀ ರಾಮರಾವ್ ರವರು ಗಿಡಕ್ಕೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆ ರವರು ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳನ್ನು ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಶಾಂತರಾಮ ಪ್ರಭು ಸ್ವಾಗತಿಸಿದರು. ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಧನ್ಯವಾದ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್ ಉಪಸ್ಥಿತರಿದ್ದರು. ಸ್ಕೌಟರ್ ಶ್ರೀಮತಿ ಸೀಮಾ ರವರು ಕಾರ್ಯಕ್ರಮ ನಡೆಸಿದರು.



ದಿನಾಂಕ 17.04.2026 ರಂದು ಶಿಬಿರದ ಸಮಾರೋಪ ಸಮಾರಂಭವು ನಡೆಯಿತು. ಅಧ್ಯಕ್ಷತೆಯನ್ನು ಮೀಫ್ ಅಧ್ಯಕ್ಷ ಮೂಸಬ್ಬ ಬ್ಯಾರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಂ. ಸಾಬಿತ್, ಉಪಾಧ್ಯಕ್ಷರಾದ ಪರ್ವೆಜ್ ಆಲಿ, ಕಾರ್ಯದರ್ಶಿ ರಿಯಾಜ್ ಅಹಮದ್, ಸಂಚಾಲಕರಾದ ಶೇಖ್ ರಹಮತುಲ್ ಅನ್ವರ್ ಉಪಸ್ಥಿತರಿದ್ದರು. ಇವರೊಂದಿಗೆ ಶಿಬಿರದ ನಾಯಕರಾದ ಶ್ರೀ ಬಿ.ಎಂ ತುಂಬೆ, ಶ್ರೀ ರಾಮರಾವ್ ಉಪಸ್ಥಿತರಿದ್ದರು. ಅತಿಥಿಗಳನ್ನು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್ ಧನ್ಯವಾದ ನೀಡಿದರು. ಶಿಬಿರಾರ್ಥಿಗಳಾದ ಜುನೇಫ್ ಹಾಗೂ ಮುಜೀದ ಕಾರ್ಯಕ್ರಮ ನಡೆಸಿದರು.

## ಕೋಲಾರ



ಏಪ್ರಿಲ್ 6 ರಿಂದ 12 ರವರೆಗೆ ಕೋಲಾರ ನಗರದ ಸ್ಕೌಟ್ ಭವನದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪ ರವರು ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿ ಮಾತನಾಡುತ್ತಾ "ಎಲ್ಲಾ ವಿದ್ಯಾರ್ಥಿಗಳು ಶಿಬಿರಗಳಲ್ಲಿ ಭಾಗವಹಿಸಿದಾಗ ಸಾಕಷ್ಟು ವಿಚಾರಗಳನ್ನು ಕಲಿಯಬಹುದು, ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಚಟುವಟಿಕೆಗಳು ಮನುಷ್ಯನಲ್ಲಿ ಬದಲಾವಣೆ ಕಾಣುವ ಕಲಿಕಾಂಶಗಳು ಹಾಗೂ ಜೀವನ ಕೌಶಲ್ಯಗಳಿವೆ, ಎಲ್ಲರೂ ಭಾಗವಹಿಸಲು ಪೋಷಕರು ಮಕ್ಕಳನ್ನು ಪ್ರೋತ್ಸಾಹಿಸಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲೆ ಮತ್ತು ಸ್ಥಳಿಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.



ಏಪ್ರಿಲ್ 7 ರಿಂದ 10 ರವರೆಗೆ ಮಾಲೂರು ತಾಲ್ಲೂಕಿನ ಗೊಲ್ಲಹಳ್ಳಿ ಶಾಲೆಯಲ್ಲಿ ಕಬ್ ಮಾಸ್ಟರ್ ಹಾಗೂ ಜಿಲ್ಲಾ ಪ್ರತಿನಿಧಿ ಶ್ರೀ ರಾಜಪ್ಪರವರ ನಾಯಕತ್ವದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಸಹಾಯಕರಾಗಿ ಶ್ರೀ ವೆಂಕಟೇಶ್‌ರವರು ಸೇವೆ ಸಲ್ಲಿಸಿದರು.



ಮೇ 3 ರಂದು ಕೆ.ಜಿ.ಎಫ್ ತಾಲ್ಲೂಕಿನ ಟಿ.ಗೊಲ್ಲಹಳ್ಳಿ ಗ್ರಾಮದ ಕೆರೆ ಅಂಗಳದಲ್ಲಿ 100 ಗಿಡಗಳನ್ನು ಬೆಳಕು ಸೇವಾ ಸಂಸ್ಥೆಯೊಂದಿಗೆ ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯಾಧೀಶರಾದ ಶ್ರೀಯುತ ಶಿವಕುಮಾರ್, ಶ್ರೀಯುತ ಮುಜಾಪರ್ ಎ. ಮಂಜರಿ, ಶ್ರೀಮತಿ ಜಯಲಕ್ಷ್ಮೀ, ಶ್ರೀಮತಿ ಶಮೀಧಾ, ಟ್ರಸ್ಟ್ ಅಧ್ಯಕ್ಷರಾದ ಶ್ರೀಯುತ ಪಾರ್ಥ, ಕಾರ್ಯದರ್ಶಿ ಶ್ರೀಮತಿ ರಾಧಾಮಣಿ, ಜಿಲ್ಲಾ ಸಂಘಟಕ ಸ್ಕೌಟ್ ಬಾಬು ಹಾಗೂ ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.



ಮೇ 1 ರಿಂದ 5 ರವರೆಗೆ ಬಂಗಾರಪೇಟೆ ಸ್ಥಳೀಯ ಸಂಸ್ಥೆಯ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜು, ಆದರ್ಶ ಶಾಲೆಯ ಸ್ಕೌಟ್ಸ್-ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ಸ್ಕೌಟ್ ಮಾಸ್ಟರ್ ಶ್ರೀ ನಂಜುಂಡಪ್ಪ, ಶ್ರೀ ನಾರಾಯಣಸ್ವಾಮಿ, ಗೈಡ್ ಶಿಕ್ಷಕಿ

ಶ್ರೀಮತಿ ಲಕ್ಷ್ಮಮ್ಮ, ಶ್ರೀಮತಿ ರಾಗಿಣಿರವರ ನಾಯಕತ್ವದಲ್ಲಿ ಜರುಗಿಸಲಾಯಿತು.

ಮೇ 12 ರಂದು ಸ್ಕೌಟ್ ಭವನದ ಆವರಣದಲ್ಲಿ ನಡೆದ ಬೇಸಿಗೆ ಶಿಬಿರದ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಮರುಬಳಕೆ ಕಾರ್ಯಾಗಾರವನ್ನು ರಾಷ್ಟ್ರಪತಿ ಪರೀಕ್ಷಾ ಅಭ್ಯರ್ಥಿಗಳಿಂದ ಪ್ರಾತ್ಯಕ್ಷಿಯನ್ನು ನಡೆಸಿ, ತಮ್ಮ ಮನೆಗಳಲ್ಲಿ ಪ್ಲಾಸ್ಟಿಕ್ ಹಾಗೂ ಮರುಬಳಕೆ ವಸ್ತುಗಳನ್ನು ಸುಡದೇ ಸಂಗ್ರಹಿಸಿ ಸಂಸ್ಥೆಗೆ ನೀಡಲು ತಿಳಿಸಲಾಯಿತು.

ಮೇ 12 ರಿಂದ 18 ರವರೆಗೆ ಎರಡನೆ ಬೇಸಿಗೆ ಶಿಬಿರವನ್ನು ನಗರದ ಸ್ಕೌಟ್‌ಭವನದಲ್ಲಿ ಆಯೋಜಿಸಲಾಗಿತ್ತು.

## ಮಧುಗಿರಿ



ದಿನಾಂಕ 26.03.2026 ರಂದು ಸರ್ಕಾರಿ ಪ್ರಥಮದರ್ಜೆ ಕಾಲೇಜು ಮಧುಗಿರಿ ಇಲ್ಲಿ ರೆಡ್ ಕ್ರಾಸ್, ರೋವರ್-ರೇಂಜರ್ಸ್ ವಿಭಾಗದಿಂದ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಕಾಲೇಜು ಪ್ರಾಂಶುಪಾಲರಾದ ಪ್ರೊ|| ಶ್ರೀ ಕುಮಾರ್ ಹಾಗೂ ರೋವರ್ ಲೀಡರ್, ರೆಡ್‌ಕ್ರಾಸ್ ಸಂಚಾಲಕರಾದ ಶ್ರೀ ದುರ್ಗಪ್ಪ ನೆರವೇರಿಸಿದರು. ಶ್ರೀಮತಿ ವೇದಲಕ್ಷ್ಮಿ, ರೇಜಂರ್ ಲೀಡರ್ ಶ್ರೀ ದರ್ಶನ್ ರೋವರ್ ಲೀಡರ್ ಹಾಗೂ ಇತರೆ ಪ್ರಾಧ್ಯಾಪಕರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಸಿಬ್ಬಂದಿ ವರ್ಗ ಜಿಲ್ಲಾ ಸಂಸ್ಥೆಯಿಂದ ಜಿಲ್ಲಾ ಕಾರ್ಯದರ್ಶಿ ಹಾಗೂ ಎ.ಎಸ್.ಓ.ಸಿ ಭಾಗವಹಿಸಿ ರಕ್ತದಾನವನ್ನು ಮಾಡಿದರು. ಸುಮಾರು 53 ವಿದ್ಯಾರ್ಥಿಗಳು ಮತ್ತು ಕಾಲೇಜು ಪ್ರಾಧ್ಯಾಪಕರು ರಕ್ತದಾನವನ್ನು ಮಾಡಿದರು.



ದಿನಾಂಕ 27.03.2026 ರಂದು ಡಯಟ್ ಆವರಣ ಮಧುಗಿರಿ ಇಲ್ಲಿ. ಜಿಲ್ಲಾ ಮಟ್ಟದ ವೃತ್ತಿ ಶಿಕ್ಷಣ ಮಾರ್ಗದರ್ಶನ ಮೇಳದ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾನ್ಯ ವಿಧಾನ ಪರಿಷತ್ ಸದಸ್ಯರು ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಆದ ಶ್ರೀ ರಾಜೇಂದ್ರ ರಾಜಣ್ಣ ಆಗಮಿಸಿದ್ದರು. ಈ ಮೇಳದಲ್ಲಿ ಶ್ರೀ ಮಾದವರೆಡ್ಡಿ ವಿ., ಉಪನಿರ್ದೇಶಕರು ಆಡಳಿತ ಹಾಗೂ ಜಿಲ್ಲಾ ಆಯುಕ್ತರು (ಸ್ಕೌಟ್), ಡಯಟ್ ಪ್ರಾಂಶುಪಾಲರಾದ ಮಾನ್ಯ ಶ್ರೀ ಗಂಗಾಧರ್ ಹೆಚ್.ಆರ್. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಾನ್ಯ ಶ್ರೀ ಹನುಮಂತರಾಯಪ್ಪ ಬಿ.ಹೆಚ್. ಭಾಗವಹಿಸಿದ್ದರು.

ದಿನಾಂಕ 14/04/2026 ರಂದು ಮಧುಗಿರಿ ತಾಲ್ಲೂಕು ಆಡಳಿತ ನಡೆಸಿದ ಭಾರತರತ್ನ ಸಂವಿಧಾನ ಶಿಲ್ಪಿ ಡಾ|| ಬಿ.ಆರ್. ಅಂಬೇಡ್ಕರ್‌ರವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಸನ್ಮಾನ್ಯ ಶ್ರೀ ರಾಜೇಂದ್ರ ರಾಜಣ್ಣ ವಿಧಾನ ಪರಿಷತ್ ಸದಸ್ಯರು ಕರ್ನಾಟಕ ಸರ್ಕಾರ, ಮಾನ್ಯ ಶ್ರೀ ಗೋಟೂರು ಶಿವಪ್ಪ, ಮಧುಗಿರಿ, ಉಪ ವಿಭಾಗಾಧಿಕಾರಿ ಮಾನ್ಯ ಶ್ರೀ ಶ್ರೀನಿವಾಸ್ ಹಾಗೂ ಇತರರು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮುಖಾಂತರ ಕನ್ನಡ ಭವನವನ್ನು ತಲುಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.



ದಿನಾಂಕ: 09-04-2026 ರಂದು ಸರ್ಕಾರಿ ಪ್ರಥಮದರ್ಜೆ ಕಾಲೇಜು ಮಿಡಿಗೇಶಿಯಲ್ಲಿ ಸ್ಕೌಟ್ಸ್-ಗೈಡ್ಸ್ ಘಟಕದ ಪ್ರಾರಂಭದ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಕರಿಸಿದ್ದಪ್ಪ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಮಧುಗಿರಿ ಇವರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಸಿ. ಬಸವರಾಜು ಮಾತನಾಡುತ್ತಾ "ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸ್ಕೌಟಿಂಗ್ ಅತ್ಯವಶ್ಯಕ" ಎಂದು ತಿಳಿಸಿದರು. ಸ್ಕೌಟ್ಸ್-ಗೈಡ್ಸ್ ಘಟಕ ಸಂಚಾಲಕರಾದ ಪ್ರೊ|| ಚಂದನ ಟಿ., ಸ್ವಾಗತ ಬಯಸಿ ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಭಾರತ ಸ್ಕೌಟ್ಸ್-ಗೈಡ್ಸ್ ಪ್ರಾಮುಖ್ಯತೆ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕರಾದ ಶ್ರೀ ತಿಪ್ಪೇಸ್ವಾಮಿ ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್‌ನ ಸದಸ್ಯರಾದ ಪ್ರೊ. ಬಿ.ಪಿ. ಪುಟ್ಟರಾಜು, ಅಧ್ಯಾಪಕರುಗಳಾದ ಡಾ. ಅನುಪಮ, ಡಾ. ಎಲ್. ಮಂಜುಭಾರ್ಗವಿ, ಶ್ರೀ ಷಣ್ಮುಖಚಾರಿ, ಶ್ರೀ ರಾಮಚಂದ್ರಯ್ಯ, ಉಪಸ್ಥಿತರಿದ್ದರು. ಪ್ರಾರ್ಥನಗೀತೆಯನ್ನು ಬಿ.ಎ. ವಿದ್ಯಾರ್ಥಿನಿ ಕು|| ಮೈತ್ರಿ ಹಾಗೂ ವಂದನಾರ್ಪಣೆಯನ್ನು ಬಿ.ಕಾಂ. ವಿದ್ಯಾರ್ಥಿ ಶ್ರೀ ಲೋಕೇಶ್ ನೆರವೇರಿಸಿದರು.

– ದಿನಾಂಕ 10.04.2026 ರಂದು ಶಿರಾಸ್ಥಳೀಯ ಸಂಸ್ಥೆ ಬೇಸಿಗೆ ಶಿಬಿರವನ್ನು ಪ್ರೆಸಿಡೆನ್ಸಿ ಪಬ್ಲಿಕ್ ಶಾಲೆಯಲ್ಲಿ ನೆರವೇರಿಸಲಾಯಿತು. ಈ ಶಿಬಿರದಲ್ಲಿ ಸುಮಾರು 60, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ದಿನಾಂಕ 15/4/26 ರಂದು ತಾಲೂಕ ಆಡಳಿತ, ಮಧುಗಿರಿ ಜಿಲ್ಲಾ ಪಂಚಾಯತ್, ಸರ್ಕಾರಿ ಪ್ರಥಮದರ್ಜೆ ಕಾಲೇಜ್, ಮಧುಗಿರಿ, ಸರ್ಕಾರಿ ಪದವಿಪೂರ್ವ ಕಾಲೇಜು ಮಧುಗಿರಿ ಹಾಗೂ ಇತರೆ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ಮಾನ್ಯ ಶಾಸಕರು ಮಾಜಿ ಸಚಿವರು ಶ್ರೀ ಕೆ.ಎ. ರಾಜಣ್ಣ, ಜಿಲ್ಲಾ ಗೌರವ ಅಧ್ಯಕ್ಷರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರು ಕರ್ನಾಟಕ ಸರ್ಕಾರ ಇವರು ಹುಟ್ಟುಹಬ್ಬದ ಪ್ರಯುಕ್ತ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್ ರೋವರ್-ರೇಂಜರ್ಸ್ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರ ಜೊತೆಯಲ್ಲಿ ಉದ್ಯೋಗ ಅವಕಾಶಗಳನ್ನು ಪಡೆದಿರುತ್ತಾರೆ.



ದಿನಾಂಕ 17/04/26 ರಂದು ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಕೊರಟಗೆರೆ ತಾಲ್ಲೂಕು ಎಲೆರಾಂಪುರದ ಶ್ರೀ ಕುಂಚಿಟಿಗ ಮಹಾ ಸಂಸ್ಥಾನ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಹನುಮಂತನಾಥ ಮಹಾಸ್ವಾಮಿಗಳು ಇವರ ನೇತೃತ್ವದಲ್ಲಿ ಐದನೇ ವರ್ಷದ ಸಂಸ್ಕಾರ ಶಿಬಿರ ದಿನಾಂಕ 16.4.2026 ರಿಂದ 26.4.2026ರ ವರೆಗೆ ಶ್ರೀಮತಿ ರಂಗಲಕ್ಷ್ಮೀ ರಾಜಯ್ಯ ಸಮುದಾಯ ಭವನ ಇಲ್ಲಿ ನಡೆಯಿತು. ಈ ಶಿಬಿರದ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಭಾ.ಸ್ಕೌ.ಗೈ. ಕರ್ನಾಟಕ ಹಾಗೂ ನಿವೃತ್ತ ನಿರ್ದೇಶಕರು ಶಿಕ್ಷಣ ಇಲಾಖೆ ಇವರು, "ಮಕ್ಕಳಿಗೆ ಈ ಶಿಬಿರದಿಂದ ವೈಯಕ್ತಿಕ ಬೆಳವಣಿಗೆ ಮತ್ತು ಬುದ್ಧಿ ವಿಕಸನ ಹತ್ತು ಹಲವಾರು ವಿಷಯಗಳ ಬಗ್ಗೆ ತರಬೇತಿಗಳು ಸಮಯಪ್ರಜ್ಞೆ, ಸಾಮಾನ್ಯ ಜ್ಞಾನದಿಂದ ಪ್ರಬುದ್ಧವಾಗಿ ಬೆಳೆಯುವ ಬಗ್ಗೆ ಈ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ" ಎಂದು ತಿಳಿಸಿದರು. ಇನ್ನೊಬ್ಬ ಅತಿಥಿಯಾದ ಮಾನ್ಯ ಶ್ರೀ ಸಿ.ಟಿ. ಶಿವೇಗೌಡ, ನಿವೃತ್ತ ಉಪನಿರ್ದೇಶಕರು ಬೆಂಗಳೂರು ಇವರು ಸಹ ಮಕ್ಕಳಿಗೆ ದೊರಕುವ ಉತ್ತಮ ಗುಣಮಟ್ಟದ ಬುದ್ಧಿ ಮತ್ತು ಜ್ಞಾನ ಈಗಿನಿಂದಲೇ ಮಕ್ಕಳಲ್ಲಿ ಬೆಳೆಸಿದರೆ ಮುಂದಿನ ಉತ್ತಮ ಸಮಾಜ ನಿರ್ಮಾಣಕ್ಕೆ ಸಾಧ್ಯ ಎಂದು ತಿಳಿಸಿದರು. ಸಂಸ್ಥೆಯ ಆಡಳಿತ ಅಧಿಕಾರಿಯಾದ ಶ್ರೀ ನಂಜುಂಡಯ್ಯ, ನಿವೃತ್ತ ಪ್ರಾಂಶುಪಾಲರು ಸಂಸ್ಥಾನ ಮಠದ ಆಡಳಿತ ಅಧಿಕಾರಿ ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 560 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಉಡುಪಿ




ದಿನಾಂಕ 26.3.2026 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ 93ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಸಲಾಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವಂತಹ ಶ್ರೀ ಎಸ್.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಾರ್ಕೂರ್ ಇಲ್ಲಿನ ಸೀನಿಯರ್ ರೇಂಜರ್ಸ್ ರೋವರ್ ಭಾಗವಹಿಸಿದ್ದರು. ರೈಲ್ವೆ ಇಲಾಖೆಯಿಂದ ಇಲಾಖೆಯ ಆಫೀಸರ್ ಶ್ರೀ ಎಸ್.ಕೆ. ಭಟ್ ಇವರು ವಿದ್ಯಾರ್ಥಿಗಳಿಗೆ ಉಪಹಾರ ವ್ಯವಸ್ಥೆಯನ್ನು ಮಾಡಿದರು. ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಕಾರ್ಯಕ್ರಮವನ್ನು ಸಂಘಟಿಸಿದರು.





– ದಿನಾಂಕ 21/4/26 ರಂದು ಡಾ. ವಿ.ಎಸ್. ಆಚಾರ್ಯ, ಜಿಲ್ಲಾ ತರಬೇತಿ ಕೇಂದ್ರದಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧಿಯಾ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪ್ರಗತಿ ಸಭೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿರುವಂತಹ ರಾಜ್ಯ ಮುಖ್ಯ ಆಯುಕ್ತರನ್ನು ಗೌರವಪೂರ್ವಕ ಅಭಿನಂದಿಸಲಾಯಿತು.

## ವಿಜಯಪುರ



ದಿನಾಂಕ 26.4.2026 ರಂದು ನಿಡಗುಂದಿ ಪಟ್ಟಣದ ಯುನಿಕ್ಸ್ ಚಾರಿಟೇಬಲ್ ಟ್ರಸ್ಟ್ ನಿಡಗುಂದಿ ಹಾಗೂ ಸ್ಥಳೀಯ ಸಂಸ್ಥೆ ನಿಡಗುಂದಿ ಜಿಲ್ಲಾ ವಿಜಯಪುರ ಇವರ ಸಹಯೋಗದಲ್ಲಿ ನಿಡಗುಂದಿ ತಾಲ್ಲೂಕಿನ ವಿವಿಧ ಶಾಲೆಯ ಮಕ್ಕಳಿಗೆ ದಿನಾಂಕ 26.4.4026 ರಂದು ಎರಡನೇಯ ಬೇಸಿಗೆ ಶಿಬಿರವನ್ನು ಪ್ರಾರಂಭಿಸಲಾಯಿತು. ಸದರಿ ಶಿಬಿರವನ್ನು ಯುನಿಕ್ಸ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಬಿ.ಬಿ. ಸಾಲಿಮನಿ, ಶ್ರೀ ಅಶೋಕ ಗುಂಡಿನಮನಿ, ಸ್ಥಳೀಯ ಸಂಸ್ಥೆಯ ಖಜಾಂಚಿಗಳು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ನಂತರ ಮಕ್ಕಳಿಗೆ ಸ್ಕೌಟಿಂಗ್‌ನ ಮೂಲಕ ತತ್ವಗಳು, ನಿಯಮ ಮತ್ತು ಪ್ರತಿಜ್ಞೆ ಹಾಗೂ ವಿವಿಧ ಹಂತದ ಪರೀಕ್ಷೆಗಳ ಕುರಿತು ಮಾಹಿತಿಯನ್ನು ತಿಳಿಸಲಾಯಿತು.



ದಿನಾಂಕ. 01.05.2026 ರಿಂದ 03.05.2026ರ ವರೆಗೆ ಜಿಲ್ಲಾ ಸಂಸ್ಥೆ ವಿಜಯಪುರ ವತಿಯಿಂದ ರೋವರ್ ಮತ್ತು ರೇಂಜರ್‌ಗಳಿಗೆ ನಿಪುಣ ಪರೀಕ್ಷಾ ಶಿಬಿರ ಜರುಗಿತು. ಶಿಬಿರವನ್ನು ಧ್ವಜಾರೋಹಣದೊಂದಿಗೆ ಪ್ರಾರಂಭಿಸಲಾಯಿತು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಎಲ್ಲರ ಸ್ವಾಗತದೊಂದಿಗೆ ಸ್ವಪರಿಚಯ ಮಾಡಿಕೊಳ್ಳಲಾಯಿತು. ಗುಂಪು ವಿಂಗಡಣೆ ಮಾಡಿ ಪ್ಯಾಟ್ರೋಲ್‌ಗಳನ್ನು ರಚಿಸಲಾಯಿತು. ಪ್ರವೇಶದ ವಿಷಯಗಳನ್ನು ಮೌಖಿಕವಾಗಿ ಪರೀಕ್ಷಿಸಲಾಯಿತು. ಸಾಯಂಕಾಲ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಸಿದ್ದಣ್ಣ ಸಕ್ರಿಯವರು ಶಿಬಿರಕ್ಕೆ ಆಗಮಿಸಿ ಶಿಬಿರದ ಎಲ್ಲ ಮಕ್ಕಳಿಗೆ ಶುಭಕೋರಿದರು. ಎರಡನೇ ದಿನ ಗಂಟುಗಳು, ಬ್ಯಾಂಡೇಜ್, ಲ್ಯಾಷಿಂಗ್‌ಗಳನ್ನು ಮತ್ತು ಪ್ರಾವಿಣ್ಯತಾ ಪದಕಗಳನ್ನು ಪರಿಶೀಲಿಸಲಾಯಿತು. ಕೊನೆಯ ದಿನ ಬೆಳಿಗ್ಗೆ 7.20 ಸರ್ವಧರ್ಮ ಪ್ರಾರ್ಥನೆಯನ್ನು ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಶ್ರೀ ಜೆ.ಎಸ್. ಬೋಳಸೂರ ಉಪಸ್ಥಿತರಿದ್ದರು. ಮಧ್ಯಾಹ್ನ



3.30ಕ್ಕೆ ಧ್ವಜಾವರೋಹಣದೊಂದಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು. ಶಿಬಿರದಲ್ಲಿ 124 ರೋವರ್ ಮತ್ತು ರೇಂಜರ್‌ಗಳು ಭಾಗವಹಿಸಿದ್ದರು.



ದಿನಾಂಕ 05.05.2026 ರಂದು ಸ್ಥಳೀಯ ಸಂಸ್ಥೆಯ ನಿಡಗುಂದಿ ವಿಜಯಪುರ ಜಿಲ್ಲೆವತಿಯಿಂದ ಇಟಗಿ ಗ್ರಾಮದ ಶ್ರೀ ಗುರುನಾಗಲಿಂಗ ಗಿಡ್ಡಯ್ಯ ಅಜ್ಜಾ ಪ್ರೌಢ ಶಾಲೆ ಇಟಗಿ ಇಲ್ಲಿ, ಶಾಲೆಯ ಮಕ್ಕಳಿಗೆ ಮೂರನೆ ಹಂತದ ಬೇಸಿಗೆ ಶಿಬಿರಜರುಗಿತು. ಸದರಿ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಟಿ.ಎ. ಬಂದಾಳ, ಬೆಳಗಾವಿ ವಿಭಾಗದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷರಾದ ಶ್ರೀ ವಿ.ಕೆ. ಮಸೂತಿ, ಇಟಗಿ ಗ್ರಾಮದ ನೀರು ಬಳಕೆದಾರರ ಸಂಘದ ಅಧ್ಯಕ್ಷರಾದ ಶ್ರೀ ಪಿ.ಎಸ್ ಬಳಬಟ್ಟಿ, ಶಾಲೆಯ ಮುಖ್ಯೋಪಾಧ್ಯಾಯರು ಶ್ರೀಹೆಚ್.ಬಿ. ಬಿಲಕೇರಿ, ಜಿಲ್ಲಾ ಸಂಸ್ಥೆಯ ತರಬೇತಿ ಆಯುಕ್ತ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ನಿಡಗುಂದಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಶ್ರೀ ಶಂಕರ ಭಜಂತ್ರಿ, ಎಎಸ್‌ಓಸಿ ಶ್ರೀ ಡಿ.ಬಿ. ಅತ್ತಾರ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಶಿವು ಮೇಟಿ ನಿರೂಪಿಸಿದರು. ಶ್ರೀ ಎಂ.ಪಿ. ಬಂದಾಳ ವಂದಿಸಿದರು. ಕಾರ್ಯಕ್ರಮದಲ್ಲಿ 70ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.






ದಿನಾಂಕ 13/05/2026 ರಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಮಾನ್ಯ ಕುಲಪತಿಗಳದ ಪ್ರೋ. ವಿಜಯಾ ಕೋರಿಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ರೇಂಜರ್ ದಳಗಳ ರಚನೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಸಭೆ ನಡೆಸಲಾಯಿತು



ಇಂದು ದಿನಾಂಕ 11.05.2026 ರಂದು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಇಲ್ಲಿ ಭೇಟಿ ನೀಡಿ ಮಾನ್ಯ ಕುಲಪತಿಗಳಾದ ಪ್ರೊ. ಸಿ ಎಂ ತ್ಯಾಗರಾಜ ರವರನ್ನು ಭೇಟ ಮಾಡಿ ರಾಜ್ಯಮಟ್ಟದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಮೂಲ ತರಬೇತಿಗೆ ಉಪನ್ಯಾಸಕರುಗಳನ್ನು ನಿಯೋಜನೆ ಮಾಡಲು ವಿನಂತಿಸಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ರೋವರ್ ಮತ್ತು ರೇಂಜರ್ ಕೋ ಆರ್ಡಿನೇಟರ್ ಡಾ. ಆರ್.ಕೆ. ಕುರಿ ಅವರು ಉಪಸ್ಥಿತರಿದ್ದರು.

## ವಿಜಯನಗರ



ವಿಜಯನಗರ ಜಿಲ್ಲಾ ಸಂಸ್ಥೆ ಹಾಗೂ ಲಿಟಲ್ ಫ್ಲಾವರ್ ಕೂ ಎಜುಕೇಶನ್ ಸ್ಕೂಲ್ ವಿಜಯನಗರ ಹಾಗೂ ವಿಜಯನಗರ ರೇಂಜರ್ಸ್ ಮುಕ್ತ ದಳ ವತಿಯಿಂದ ದಿನಾಂಕ.4.5.2026 ರಿಂದ 7.5.2026 ರವರಗೆ. ವಿಶೇಷ ಬೇಸಿಗೆ ಶಿಬಿರವನ್ನು "ವಸತಿ ಸಹಿತವಾಗಿ" ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 40 ಜನ ಸ್ಕೌಟ್ಸ್ ವಿದ್ಯಾರ್ಥಿಗಳು ಹಾಗೂ 15 ಜನ ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಶಿಬಿರದಲ್ಲಿ ಶಾಲೆಯ ಸ್ಕೌಟ್ಸ್ ಶಿಕ್ಷಕರಾದ ಶ್ರೀ ರಂಜಿತ್ ರಾಕೇಶ್ HWB , ಶ್ರೀ ಶ್ರೀನಿವಾಸ ಜೂಶಿ HWB, ಶ್ರೀ ಸಾಂಗ್ಲಿ NI. HWB, ಶ್ರೀಮತಿ ಆರೂಗ್ಯ ಮೇರಿ HWB, ಶ್ರೀ ಶರೀಫ್ ಹತ್ತಿಮತ್ತೂರ್ ಎ ಎಸ್ ಓ ಸಿ ಉಪಸ್ಥಿತರಿದ್ದರು. ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಸಾಹಸಮಯ ಚಟುವಟಿಕೆ, ಆಟ, ಪಾಠ ಚಟುವಟಿಕೆಗಳು, ಧ್ವಜ ಗೀತೆ ಜಂಡಾ ಗೀತೆ, ಪ್ರಥಮ ಚಿಕಿತ್ಸೆ, ಶಿಬಿರಾಗ್ನಿ, ಹಾಡುಗಳು, ಹಿಗೆ ಇತ್ಯಾದಿ ವಿಷಯಗಳ ಕುರಿತು ವಿಷಯಗಳನ್ನು ಭೂದನೆ ಮಾಡಲಾಯಿತು. ಶಿಬಿರದಲ್ಲಿ ವಿದ್ಯಾರ್ಥಿಗಳು ಬಹಳ ಸಂತೋಷ ಹಾಗೂ ಹರುಷದ ಕ್ಷಣಗಳಲ್ಲಿ ಭಾಗವಹಿಸಿರುತ್ತಾರೆ



**ಗೀತಾ ಎಂ. ಹೆಗಡೆ,**
**ಫ್ಲಾಕ್ ಲೀಡರ್, ಮಂಡ್ಯ**

# "ಸಹಾಯಕ ನಾಯಕಿಯರ ತರಬೇತಿ (ALT-GW)ಒಂದು ಅನುಭವ"

ದಿನಾಂಕ 17-05-2026 ರಿಂದ 23-05-2026 ರವರಗೆ ರಾಷ್ಟ್ರೀಯ ಸಂಸ್ಥೆ ಮತ್ತು ರಾಜ್ಯ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ STC ಕೊಂಡಜ್ಜಿಯಲ್ಲಿ 74ನೇ ಸಹಾಯಕ ತರಬೇತು ದಾರರ (ALT-GW) ವಸತಿ ಸಹಿತ ಶಿಬಿರ ವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಮಂಡ್ಯ ಜಿಲ್ಲೆಯಿಂದ ಭಾಗವಹಿಸಿದ ಮೂವರಲ್ಲಿ ನಾನು ಒಬ್ಬಳು.

ನಾನು ಇದೇ ಮೊದಲ ಬಾರಿಗೆ STC ಕೊಂಡಜ್ಜಿಗೆ ಬಂದಿದ್ದು. ನನ್ನನು ನನ್ನ ಮಗ ಶಿಬಿರ ನಡೆಯುವ ಸ್ಥಳಕ್ಕೆ ಬಿಟ್ಟುಹೋದ. ನನಗೆ ಈ ಸುಂದರ ಪ್ರಕೃತಿ ರಮ್ಯ ತಾಣ ಮನಸ್ಸಿಗೆ ಮುದ ನೀಡಿತು. ಈ ಬೃಹತ್ ಆವರಣವು ನೂರಾರು ಶಿಬಿರಾರ್ಥಿಗಳಿಗೆ ಏಕಕಾಲದಲ್ಲಿ ತರಬೇತಿ ನೀಡಲು ಬೇಕಾದ ಆಧುನಿಕ ಹಾಗೂ ಸಾಂಪ್ರದಾಯಿಕ ಸೌಲಭ್ಯವನ್ನು ಹೊಂದಿರುವುದು ನೋಡಿ ತುಂಬಾ ಸಂತೋಷ ಆಯಿತು. ಇಲ್ಲಿ ವರ್ಷ ಪೂರ್ತಿ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿವಿಧ ಶಿಬಿರಗಳು ನಡೆಯುತ್ತಿರುವ ವಿಷಯ ಗೊತ್ತಿತ್ತು. ಆದರೆ ಈ ಪ್ರದೇಶವನ್ನು ಇದೇ ಮೊದಲ ಬಾರಿಗೆ ಕಣ್ಣಾರೆ ಕಂಡಂತೆ ಆಯಿತು. ಈ ಪರಿಸರವನ್ನು ಕಂಡಾಗ ಇದು ಒಂದು ತರಬೇತಿ ಕೇಂದ್ರವಾಗಿರದೆ ಯುವಜನರಲ್ಲಿ ದೇಶಭಕ್ತಿ, ನಾಯಕತ್ವದ ಗುಣ, ಪರಿಸರಪ್ರೇಮ ಮತ್ತು ಸೇವಾ ಮನೋಭಾವನೆಯನ್ನು ಉದ್ದೀಪಿಸುವ, ಶಿಸ್ತಿನ ತಪೋವನದಂತೆ ಕಂಡು ಬಂತು. ಪ್ರಕೃತಿ ಸೌಂದರ್ಯ ಮತ್ತು ಸ್ಕೌಟ್ ತತ್ವಗಳು ಸಮ್ಮಿಲನ ಗೊಂಡಂತೆ ಕಂಡಿತು.ಇದರ ಸಂಸ್ಥಾಪಕರ ಬಗ್ಗೆ ಹೆಚ್ಚಿನ ಗೌರವಾದಗಳು ಮೂಡಿಬಂದು ಮನದಲ್ಲಿ ಅವರಿಗೆ ನಮನ ಸಲ್ಲಿಸಿದೆ.

ಶ್ಯಾಮಲ ಮ್ಯಾಮ್ ಬಂದ ಶಿಬಿರದ ನಾಯಕಿಯರನ್ನು, ಶಿಬಿರಾರ್ಥಿಗಳನ್ನು ತನ್ನ ಮನೆಯ ಕಾರ್ಯಕ್ರಮಕ್ಕೆ ಬಂದ ಅತಿಥಿಗಳನ್ನು ಸಂಭ್ರಮದಿಂದ ಸ್ವಾಗತಿಸುವಂತೆ ಪ್ರೀತಿಯಿಂದ ಬರಮಾಡಿಕೊಂಡರು. ಹೋದ ಸ್ವಲ್ಪ ಹೊತ್ತಿನಲ್ಲೇ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಭಯಂಕರವಾಗಿ ಸುರಿಯಿತು. ಬಿಸಿಲಿನ ಜಳ ಕಡಿಮೆ ಆದಂತೆ ಎಲ್ಲರಿಗೂ ಅನ್ನಿಸಿತು. ಬಂದ ಎಲ್ಲರಿಗೂ ವಸತಿ ಸ್ಥಳವನ್ನು ತೋರಿಸಿದರು. ಶಿಬಿರಾರ್ಥಿಗಳು ಎಷ್ಟೇ ಹೊತ್ತಿಗೆ ಬಂದು ಕಾಲ್ ಮಾಡಿದರೂ ನಗುನಗುತ್ತಾ ಮಾಹಿತಿಯನ್ನು ನೀಡುತ್ತಿದ್ದರು. ರಾತ್ರಿ ಮಲಗಲು ಎಲ್ಲರಿಗೂ ಹಾಸಿಗೆ ಬೆಡ್‌ಶೀಟ್-ದಿಂಬು ಕೊಟ್ಟರು. ನನ್ನ ಮಂಡಿಯ ಸಮಸ್ಯೆ ತಿಳಿದಿದ್ದ ಅವರು ನನಗೆ ಹಾಗೂ ತೊಂದರೆ ಇರುವ ಇನ್ನೊಬ್ಬರಿಗೆ ಛಿಣ ವ್ಯವಸ್ಥೆ ಮಾಡಿಕೊಟ್ಟರು.

ಮರುದಿನ ನಾವೆಲ್ಲರೂ ಪೂರ್ಣ ಸಮವಸ್ತ್ರ ಧರಿಸಿ ತಿಂಡಿ ಮುಗಿಸಿಕೊಂಡುಬಂದೆವು. ರಾಜ್ಯದ ವಿವಿಧ ಜಿಲ್ಲೆಯಿಂದ 65 ಜನ ಶಿಬಿರಾರ್ಥಿಗಳು ಬಂದಿದ್ದು ಅದರಲ್ಲಿ 7 ಜನರು ರೇಂಜರ್ ವಿಭಾಗದಿಂದ 9 ಜನ ಜಿಟಿಅಭಿಳಾ ವಿಭಾಗ ದಿಂದ ಬಂದಿದ್ದರು ಎಲ್ಲರನ್ನೂ ಒಂದೆಡೆ ನಿಲ್ಲಿಸಿ ನಂಬರ್ ಹೇಳಿಸಿ 4 ಭಾಗ ಮಾಡಿ ಒಬ್ಬಬ್ಬ ಲೀಡರ್‌ಗಳನ್ನ ಬೇರೆ ಬೇರೆ ಜಾಗದಲ್ಲಿ ಅಸ್ಸೈನ್ಮೆಂಟ್ ಪಡೆಯಲು ಸಹಾಯಕವಾಗುವಂತೆ ಆಸನದ ವ್ಯವಸ್ಥೆ ಮಾಡಿ ಅಸೈನ್ಮೆಂಟ್ ಪಡೆದು ಕೊಳ್ಳಲು ಸೂಚಿಸಿದರು. ಹಾಗೆ ಪಡೆದುಕೊಳ್ಳುವಾಗ ಪ್ರಶ್ನೆಗಳನ್ನು ಕೇಳಲು ಸೂಚಿಸಿದರು. ಪ್ರಶ್ನೆಗಳನ್ನು ಕೇಳುತ್ತಾರೆ ಅಂತ ಕಿವಿಗೆ ಬಿದ್ದಾಗ ನಾವು ಅಸೈನ್ಮೆಂಟ್ ಪೇಪರನ್ನು ತಿರುವಿಹಾಕಲು ಪ್ರಾರಂಭಿಸಿದೆವು. ಎಲ್ಲರೂ ತಮ್ಮ ಸರದಿ ಬರುವವರೆಗೆ ಓದುತ್ತಾ ಕುಳಿತೆವು. ಅದನ್ನು ನೋಡಲು ತುಂಬಾ ಖುಷಿ ಅನ್ನಿಸುತ್ತಿತ್ತು. ಅಸೈನ್ಮೆಂಟ್ ಕೊಟ್ಟು ಬಂದಾಗ ಯುದ್ಧ ಗೆದ್ದು ಬಂದ ಖುಷಿ ಮುಖದಲ್ಲಿ ಕಾಣುತ್ತಿತ್ತು. ನಂತರ ಅಪ್ಲಿಕೇಶನ್ ಕೊಟ್ಟು ನೋಂದಣಿ ಮುಗಿಸಿಕೊಂಡು ಊಟಕ್ಕೆ ಹೋದೆವು. ನಂತರ ಧ್ವಜಾರೋಹಣ ಮಾಡಿ ಎಲ್ಲಾ ಶಿಬಿರಾರ್ಥಿಗಳನ್ನು 2 ತಂಡವಾಗಿ ಮಾಡಿದರು. ತಂಡ ಒಂದರಕ್ಕೆ ಕಿತ್ತೂರು ರಾಣಿ ಚನ್ನಮ್ಮ ಎಂದು ಹೆಸರಿಟ್ಟರು. ಅದಕ್ಕೆ ನಾಯಕಿಯಾಗಿ ಶ್ರೀಮತಿ ಗೀತಾ ನಟರಾಜ್ LT(G) ಅವರಿಗೆ ಸಹಾಯಕರಾಗಿ ಶ್ರೀಮತಿ ಗೀತಾ ಸೆಲ್ವನ್ LT(G), ಶ್ರೀಮತಿ ಸುಮನ SV LT(R), ಶ್ರೀಮತಿ ಮಮತಾ LT(G) ಹಾಗೆ ತಂಡ ಎರಡನೆಯದಕ್ಕೆ ಸುನಿತಾ ವಿಲಿಯಂ ಎಂಬ ಹೆಸರನ್ನು ಇಟ್ಟು ಅದರ ನಾಯಕಿ ಭವಾನಿ ಬಾಯಿ LT(G) ಅವರಿಗೆ ಸಹಾಯಕರಾಗಿ ಡಾಕ್ಟರ್ ಮೇರಿ ಫಿಲೋಮಿನ LT(F) ಶ್ರೀಮತಿ ಕಾಮೇಶ್ವರಿ LT(G) ಶ್ರೀಮತಿ ರತ್ನಮ್ಮಾ LT(G) ನೇಮಿಸಿಕೊಂಡರು. ಪ್ರತಿ ತಂಡವು ನಾಲ್ಕು ನಾಲ್ಕರಂತೆ Patrol ಮಾಡಿಕೊಂಡುರು ಅದಕ್ಕೆ ಹೆಸರುನ್ನೂ ಇಟ್ಟುಕೊಂಡುರು. ಎಲ್ಲಾ ತರಬೇತಿ ಶಿಬಿರದಲ್ಲಿ ನಡೆಯುವಂತೆ Duty change ನಡೆಯುತ್ತಿತ್ತು. ಇದು 7 ದಿನಗಳ ಕಾರ್ಯಕ್ರಮ ಯಾವುದೇ ಗೊಂದಲವಿಲ್ಲದೆ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲು ಇದು ಸಹಾಯಕವಾಗುತ್ತದೆ. ಇನ್ನು ದಿನಚರಿಯು ಅಷ್ಟೇ ನಾವು ಹಿಂದೆ ತರಬೇತಿ ಶಿಬಿರದಲ್ಲಿ ಮಾಡಿದ ರೀತಿಯಲ್ಲೇ ಬೆಳಿಗ್ಗೆ 5.30 ರಿಂದ 10 ಗಂಟೆಯ ವರೆಗಿನ ಎಲ್ಲಾ ಚಟುವಟಿಕೆಗಳು ನಡೆಯುತ್ತಿತ್ತು. ಅದನ್ನು ವಿವರಿಸಲು ಹೋಗಲಿಲ್ಲ.

ನಮಗೆ ತರಬೇತಿ ನೀಡಲು ಬಂದ ಎಲ್ಲಾ ನಾಯಕಿಯರು ತಮ್ಮದೇ ಆದ ಶೈಲಿಯಲ್ಲಿ ಪ್ರವಚನ ಮಾಡುತ್ತಿದ್ದರು. ಉದಾ. ಪ್ರತಿದಿನಯೂ ಪ್ರವಚನ ಮಾಡಿದ ಭವಾನಿ ಬಾಯಿ ಸಮಯಕ್ಕೆ ಹೆಚ್ಚು ಒತ್ತು ಕೊಟ್ಟು ಸಮಯ ವ್ಯರ್ಥ ವಾಗದಂತೆ ಮಿಲಿಟರಿ ಆಫೀಸರ್ ತರಹ ಎಲ್ಲರನ್ನೂ ಎಚ್ಚರಿಸುತ್ತ, ಹುರಿದುಂಬಿಸಿಸುತ್ತ ತುಂಬಾ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ತಮಿಳಿಯನ್ನ ರಾದರು ಸ್ವಲ್ಪಸ್ವಲ್ಪ ಕನ್ನಡ ಅರ್ಥ ಆಗುತ್ತಿತ್ತು. ಅವರು ಬೋಧಿಸಿದ, 'Training need of unit leader' ಪರಿಣಾಮಕಾರಿ ಆಗಿತ್ತು. ಅವರು ಹೇಳಿಕೊಟ್ಟ ದೇಶ ಭಕ್ತಿ ಗೀತೆ ಉದಾ. ಇಂಡಿಯಾದ ಬ್ಯೂಟಿಫುಲ್ ಹಾಡು, ಡಾನ್ಸ್ ಅನೇಕ ರೀತಿಯ ಚಪ್ಪಾಳೆ ಎಲ್ಲರಿಗೂ ಸಂತೋಷ ಉಂಟು ಮಾಡಿತು. ಹಾಗೆ ಶ್ರೀಮತಿ ಗೀತಾ ನಟರಾಜರವರು ಉತ್ತಮ ನಾಯಕಿ ಎನ್ನಿಸಿಕೊಳ್ಳುವ ಎಲ್ಲಾ ಗುಣ ಲಕ್ಷಣಗಳನ್ನು ತಣ್ಣದಾಗಿಸಿಕೊಂಡವರು. ತಾಯಿ ತನ್ನ ಮಕ್ಕಳು ತಪ್ಪು ಮಾಡಿದಾಗ ಗದರಿಸಿ ಸರಿಮಾಡುತ್ತ ಸರಿ ಮಾಡಿದಾಗ ಪ್ರಶಂಸೆ ಮಾಡುತ್ತಾ ಇರುವಂತೆ ಎಲ್ಲಾ ಶಿಬಿರಾರ್ಥಿಗಳೂ ಚಟುವಟಿಕೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುತ್ತಿದ್ದರು. ಎಲ್ಲರ ಬಗ್ಗೆ ಕಾಳಜಿ ತಗೊತಿದ್ದರು. ನನ್ನನಂತೂ ಹೆಜ್ಜೆ ಹೆಜ್ಜೆಗೂ ಹುಷಾರಾಗಿ ನಡೆಯುವಂತೆ ಹೇಳುತ್ತಿದ್ದುದನ್ನು ನಾನು ಎಂದೂ ಮರೆಯಲಾರೆ. ಅವರು ಮಾಡಿದ ಪಾಠದಲ್ಲಿ SDG. The sustainable development Goals ಪ್ರವಚನ ಅದರಲ್ಲಿ ಬರುವ ಎಲ್ಲಾ ಅಂಶಗಳು ನನ್ನ ಜ್ಞಾನ ವಿಸ್ತಾರ ಆಗುವಂತೆ ಮಾಡಿತು. ಆಡಿ ಮೇರಿ ಫಿಲೋಮಿನರವರು ಶಿಸ್ತಿನ ಸಿಪಾಯಿಯಂತೆ ಕಂಡರೂ ಎಲ್ಲರೂ ಸ್ಕೌಟ್ ಮತ್ತು ಗೈಡ್ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕಬೇಕು ಎಂಬ ಕಾಳಜಿ ಇರುವವರು. ಪ್ರತಿಯೊಂದರಲ್ಲೂ ಒಪ್ಪ ಓರಣ ಬಯಸಿದವರು. ಇವರು ಮಾಡಿದ ಪ್ರವಚನದಲ್ಲಿ Prinicipla of communication ಎಲ್ಲಾ ಶಿಬಿರಾರ್ಥಿಗಳನ್ನೂ ಅವರತ್ತ ಸೆಳೆಯುವಂತೆ ಮಾಡಿತು. ನಂತರ ನಮ್ಮ ಅವರ ಮದ್ಯದ ಅಂತರ ಕಡಿಮೆ ಆಗಿ ಉತ್ತಮ ಸಂವಹನಕ್ಕೆ ದಾರಿ ಮಾಡಿತು. ಕೋಮಲ ಮನಸ್ಸಿನ ಶ್ರೀಮತಿ ಸುಮನ ಮೇಡಂ ಶಾಂತವಾಗಿ ಪರಿಣಾಮಕಾರಿಯಾಗಿ ಪ್ರವಚನ ಮಾಡುತಿದ್ದರು. ಅವರು ಮಾಡಿದ ಪ್ರವಚನದಲ್ಲಿ Micro Teaching ತುಂಬಾ ಚನ್ನಾಗಿತ್ತು. ಇದರ ಬಗ್ಗೆ ಡೀಪಾಗಿ ತಿಳಿದುಕೊಂಡೆವು. ಮಾತು ಕಡಿಮೆ ಕೆಲಸ ಜಾಸ್ತಿ ಎನ್ನುವಂತಿದ್ದ ಶ್ರೀಮತಿ ಗೀತಾ ಸೆಲ್ವನ್ ತಮ್ಮ ಎತ್ತರದ ನಿಲುವಿನಿಂದ, ಆತ್ಮೀಯತೆ ಸೂಸುವ ಕಣ್ಣಿನಿಂದ ನಮ್ಮನೆಲ್ಲರನ್ನೂ ತನ್ನತ್ತ ಸೆಳೆದುಕೊಳ್ಳುತ್ತಿದ್ದರು. ತಮಿಳಿಯನ್ನಾದರೂ ಕನ್ನಡವನ್ನು ಚನ್ನಾಗಿ ಮಾತಾಡುತ್ತಿದ್ದರು. ಅವರು ಮಾಡಿದ ಪ್ರವಚನದಲ್ಲಿ Trainig needs of a unite ತುಂಬಾ ಸೊಗಸಾಗಿತ್ತು ಮತ್ತು ನಮಗೆ ಅವಶ್ಯವೆನಿಸಿತು. ಶ್ರೀಮತಿ ಕಾಮೇಶ್ವರಿ ಮೇಡಂ ಹೆಸರಿಗೆ ತಕ್ಕಂತೆ ಯಾವಾಗಲೂ ಶಾಂತವಾಗಿ ಪ್ರಸನ್ನಚಿತ್ತರಾಗಿ ನಗುನಗುತ್ತಾ ಇರುವ ಇವರು ನಮಗೆಲ್ಲಾ ಆದರ್ಶ ಪ್ರಾಯರು. ಅವರ ಯೋಗ ಕ್ಲಾಸ್‌ನಲ್ಲಿ ನಮ್ಮನೆಲ್ಲ ಕೆಲವು ಕ್ಷಣ ಯೋಗ ಲೋಕಕ್ಕೆ ಒಯ್ದವರು. ನಾವು ವಿಷಯ ಜ್ಞಾನ ಆಳವಾಗಿ ಅರಿತಿರಬೇಕು. ಯಾವುದೇ ಸಂದರ್ಭದಲ್ಲೂ ಆತ್ಮ ಗೌರವಕ್ಕೆ ದಕ್ಕೆ ಆಗದಂತೆ ನಡೆದು ಕೊಳ್ಳಬೇಕು ಎಂಬ ಕಿವಿ ಮಾತನ್ನು ಹೇಳಿದರು. ಇವರು ಮಾಡಿದ ಪ್ರವಚದಲ್ಲಿ Leadership completencies ನಂಗಂತೂ ತುಂಬಾ ಇಷ್ಟವಾಯಿತು. ಮುಗುಳುನಗೆ ಜೊತೆಗೆ ಸ್ವಲ್ಪ ಬಿಗಿ ಎನ್ನುವಂತಿದ್ದ ಮುದ್ದು ಮುಖದ ಶ್ರೀಮತಿ ಮಮತಾ ಮೇಡಂ ಉತ್ತರ ಕರ್ನಾಟಕ ಶೈಲಿ ಯಲ್ಲಿ Back Dating ಪ್ರವಚನದಿಂದ ಎಲ್ಲರನ್ನೂ ಪ್ರವಚನದೊಳಗೆ ಇನ್ವಾಲ್ ಮಾಡಿಬಿಟ್ಟರು. ನಿದ್ದೆಯ ಜೋಮಿಗೆ ಹೋಗಿತ್ತಿರುವವರನ್ನು ಎದ್ದು ಭಾಗವಹಿಸುವಂತೆ ಮಾಡಿದರು. ಒಂದು ಮದುವೆಯ ಮುಂಚೆ ಮಾಡುವ ಸಿದ್ಧತೆ, ಮದುವೆ ಮಾಡುವಾಗ, ಮದುವೆಯ ನಂತರ ಮಾಡುವ ಕೆಲಸದ ಉದಾಹರಣೆಯೊಂದಿಗೆ ತಮ್ಮ ವಿಷಯ ಮಂಡಿಸಿದರು. ಶ್ರೀಮತಿ ರತ್ನಮ್ಮ ಮುಗುಳುನಗೆ ಇಂದ

ನಾಯಕರಿಗೆ ಏಷ್ಟು ಇಷ್ಟವಾಯಿತು ಎಂಬುದು ಅವರು ಕೊಟ್ಟ ಅಂಕದ ಮೇಲೆ ತಿಳಿಯಬೇಕು ಅಲ್ವಾ? ಶಿಬಿರ ನಡೆಯುತ್ತಿರುವಾಗ ನಮ್ಮೆಲ್ಲರ ನೆಚ್ಚಿನ ಆಡಿ ಪಿ.ಜಿ.ಆರ್. ಸಿಂಧ್ಯರವರು ಬಂದಿದ್ದು ಎಲ್ಲರಿಗೂ ಸಂತೋಷ ಸಂಭ್ರಮ. ಅವರು ತಮ್ಮ ಸ್ಕೌಟಿಂಗ್ / ಗೈಡಿಂಗ್‌ನಲ್ಲಿ ತಮ್ಮ ಅನುಭವ ಹಂಚಿಕೊಂಡರು. ಈ ಸಂಸ್ಥೆಯ ಬಗ್ಗೆ ಅವರಿಗಿದ್ದ ಪ್ರೀತಿ ಕಾಳಜಿ ತುಂಬಾ ದೊಡ್ಡದು. ಒಮ್ಮೆ ರಾಜಕೀಯ ಪ್ರವೇಶ ಮಾಡಿದವರು ಬಿಡೋದು ಕಷ್ಟ. ಅದನ್ನು ಬಿಟ್ಟು ನಿಸ್ವಾರ್ಥ ಸೇವೆ ಮಾಡಬೇಕು ಅನ್ನುವ ಹಂಬಲದಿಂದ ಬಂದರಲ್ಲ. ಅವರಿಗೆ ಏಷ್ಟು ಪ್ರಣಾಮಗಳನ್ನು ಸಲ್ಲಿಸಿದರೂ ಅದು ತೀರಾ ಕಡಿಮೆ ಅನ್ನಿಸುತ್ತದೆ ಅಲ್ವಾ? ಅವರು ಈ ಸಂಸ್ಥೆಯ ಅಭಿವೃದ್ಧಿಗಾಗಿ ಈ ವಯಸ್ಸಿನಲ್ಲಿ ಹಗಲಿರುಳು ದುಡಿಯುವುದನ್ನು ನೋಡಿದರೆ ಹರೆಯದವರು ನಾಚಿಕೊಳ್ಳಬೇಕು. ಅವರು ಯಾರೇ ಕರೆದರೂ (ಅದು ಚಿಕ್ಕ ಕಾರ್ಯಕ್ರಮ ಇರಲಿ, ದೊಡ್ಡ ಕಾರ್ಯಕ್ರಮ ಇರಲಿ ಅಲ್ಲಿ ಹೋಗಿ ಅವರು ಮಾಡಿರೋದನ್ನು ಪ್ರಸಂಸಿಸಿ, ಪ್ರೋತ್ಸಾಹಿಸಿ ಇನ್ನಷ್ಟು ಮಾಡಬೇಕು ಅನ್ನುವ ಮನೋಭಾವನೆ ಮೂಡುವಂತೆ ಮಾಡುವುದೇ ಅವರ ವಿಶೇಷತೆ.) ಇವರ ಪರಿಶ್ರಮ ನೋಡಿ ನಾನೇ ಎಷ್ಟೋ ಸಲ ನನ್ನ ಮನಸ್ಸಿಗೆ ಹೇಳಿಕೊಂಡಿದ್ದೇನೆ. ನಾನು ಮಾಡ್ತಿರೋದು ಏನೂ ಸಾಲದು ಇನ್ನೂ  ಹೆಚ್ಚು ಮಕ್ಕಳು ಸೇರುವಂತೆ ಮಾಡಬೇಕು ಅಂತ. ಅದೇ ದಾರಿಯಲ್ಲಿ ನಡೆಯುತ್ತಿದ್ದೇನೆ. ಈ ಸಂಸ್ಥೆಯ ಬಗ್ಗೆ ಏನೇನು ಮಾಡಬೇಕು ಅಂತ ಇಟ್ಟುಕೊಂಡ ಅವರ ಎಲ್ಲಾ ಕನಸು ನನಸಾಗಲಿ, ದೇವರು ಆ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ **lady** ಬಿಪಿಯವರ **saying "God give me work till my life shall end : God give me life till my work is done".** ನೆನಪಾಗುತ್ತೆ.

ಜೊತೆಗೆ ಬಂದಿದ್ದ ಶ್ರೀ ಪ್ರಭಾಕರ್ ಭಟ್ ನಮಗೆಲ್ಲಾ ಶುಭ ಕೋರಿದರು.

ಇದರ ಹಿಂದಿನ ದಿನ ನನಗೆ ಸ್ಮಶಾನ ವೈರಾಗ್ಯ ಬಂದಿತ್ತು! ಕಾರಣ ಯಾವ ಕೆಲಸವನ್ನೂ ಪರಿಪೂರ್ಣ ಮಾಡಲಾಗುತ್ತಿಲ್ಲ ಅಂತ. ಪ್ರವಚನ ಮಾಡುವಾಗ **English**ನಲ್ಲಿ ಹೇಳುತ್ತಿದ್ದ ವಿಷಯವನ್ನು **English**ನಲ್ಲಿ ಬರೆಯುವಾಗ ಎಲ್ಲಿ ಸ್ಪೆಲಿಂಗ್ ಮಿಸ್ಟೇಕ್ ಆಗತ್ತೋ ಅಂತ ಪೆನ್ಸಿಲ್ ನಲ್ಲಿ ಬರೆದು ಕೊಳ್ಳುತ್ತಿದೆ. ಅದನ್ನು **Note book**ಗೆ ಬರೆಯಲು ಸಮಯ ಆಗ್ತಾ ಇಲ್ಲ, **lashing sari** ಬರ್ತಿಲ್ಲ, **Gadgete** (ನಾನು **Flock leader** ಆಗಿರುವ ಕಾರಣ ಅದರ  ಹೆಚ್ಚಿನ ತಿಳುವಳಿಕೆ ಇರಲಿಲ್ಲ) ಕಟ್ಟೋದು ಗೊತ್ತಿಲ್ಲ, **micro lesson** ಬರೆಯುವ ಎಲ್ಲಿ ತಪ್ಪಾಗುತ್ತೋ ಇತ್ಯಾದಿ ಅನೇಕ ಒತ್ತಡದಿಂದ ಅಯ್ಯೋ ನನಗೆ ಈಗ ಈ ಒತ್ತಡ ಅನುಭವಿಸೋದು ಬೇಕಿತ್ತಾ? ನಾಳೆ ವಾಪಾಸ್ ಹೋಗೋಣ ಅಂತ ಅಂದುಕೊಂಡೆ, ಆಪ್ತರಲ್ಲಿ ಹೇಳಿಕೊಂಡೆ. ಅವರು ಸಮಾಧಾನ ಮಾಡಿದರೂ ನಂಗೆ ಸಮಾಧಾನ ಆಗದೆ ಒದ್ದಾಡುತ್ತಿದ್ದೆ. ಅರ್ಧದಲ್ಲಿ ಹೋದರೆ ಮನೆಯವರಿಗೆ, ಶ್ಯಾಮಲಾರವರಿಗೆ ನನ್ನಿಂದ ಕೆಟ್ಟ ಹೆಸರು ಅಂತಲೂ ಅನ್ನಿಸುತ್ತಿತ್ತು. ಮೇರಿ ಮೇಡಂ ನನ್ನ ಹತ್ತಿರ ಬಂದು ಧೈರ್ಯ ಕೊಟ್ಟು ಸಮಾಧಾನ ಮಾಡಿದರು. ಮಾರನೇ ದಿನನೇ ಅವರ ಮುಂದೆ **Micro lesson** ಕೊಡಬೇಕಿತ್ತು. ದೇವರನ್ನು ನೆನೆದು **lesson plan** ಬರೆದು ಪಾಠ ಮಾಡಿ ಸೈ ಅನ್ನಿಸಿ ಕೊಂಡಾಗ ವೈರಾಗ್ಯ ಓಡಿ ಹೋಯಿತು.

ರಾತ್ರಿ ಇಡಿ **micro lesson** ಕೊಡಲು ಎಲ್ಲಾರೂ ವಿಷ್ಯಕ್ಕೆ ಸಂಬಂಧಿಸಿದ ಚಾರ್ಜ್ ತಯಾರಿಸುವವರನ್ನೂ, ನಾಯಕಿಯರು ಕೊಟ್ಟ ಮಾದರಿಯಲ್ಲಿ **gadget** ಕಟ್ಟುವವರನ್ನೂ ನೋಡಿದಾಗ ತುಂಬಾ ಸಂಭ್ರಮಿಸಿದೆ. ಅಂದಂತೂ ಬೆಳಗಿನ ಜಾವ 4 ಗಂಟೆಯವರೆಗೆ **gadget** ಕಟ್ಟುವ ಕೆಲಸ ನಡೆದಿತ್ತು ಹಾಗೆ ಮರುದಿನ ಎಲ್ಲಾ ನಾಯಕಿಯರ ಮೆಚ್ಚುಗೆಗೆ ಪಾತ್ರ ಆಯ್ತು. ಆನ್ಲೈನ್, ಅಪ್ ಲೈನ್ ಟೆಸ್ಟು ಚನ್ನಾಗಿತ್ತು.

ಈ ಎಲ್ಲಾ ಪ್ರವಚನಗಳ ಅಂತ್ಯದಲ್ಲಿ ನಾವೆಲ್ಲರೂ ಸ್ಕೌಟಿಂಗ್ / ಗೈಡಿಂಗ್ ಎಂದರೇನು? ತರಬೇತುದಾರರ ಪಾತ್ರ ಮತ್ತು ಕಾರ್ಯ ಕೌಶಲ, ವಯಸ್ಕರು ಕಲಿಯುವ ವಿಧಾನ, ತರಬೇತಿಯನ್ನು ಸ್ಪಷ್ಟವಾಗಿಸುವುದು ಯಾವುದು? ಸಂವಹನ ತತ್ವಗಳು, ಗುಂಪು ಚಲನಶೀಲತೆ, ಬೋಧನಾ ವಿಧಾನ ಮತ್ತು ಕಲಿಕಾ ಪ್ರಕ್ರಿಯೆ, ಆಟಗಳು, ಯೂನಿಟ್ ನಾಯಕನ ತರಬೇತಿಯ ಅಗತ್ಯತೆಗಳು, ತಡಬೇತಿ ಕೋರ್ಸ್‌ಗಳಿಗಾಗಿ ಸಿಬ್ಬಂದಿಯ ನೇಮಕಾತಿ, ಆಯ್ಕೆ ಮತ್ತು ಬಳಕೆ, **SDC**–ಸುಸ್ತಿರ ಅಭಿವೃದ್ಧಿ, ಗುರಿಗಳು, ಬ್ಯಾಕ್ ಡೇಟಿಂಗ್, ನಾಯಕತ್ವದ ಸಾಮರ್ಥ್ಯಗಳು, ಸೂಕ್ಷ್ಮ ಬೋಧನೆ, ತರಬೇತಿ ಕೋರ್ಸ್‌ಗಳಿಗಾಗಿ ಸಿಬ್ಬಂದಿ ನಿರ್ವಹಣೆ, ಉಪರಾಷ್ಟ್ರಪತಿ ಪ್ರಶಸ್ತಿ ಸ್ಪರ್ಧೆ, ಗೋಲ್ಡನ್ ಆರೋ – (ಕಬ್ /ಬುಲ್ ಬುಲ್ ಅತ್ಯುನ್ನತ ಪ್ರಶಸ್ತಿ ) ಮಾನವ ಸಂಪನ್ಮೂಲ, ಕೋರ್ಸ್‌ನ ರೂಪಿಕರಣ/ಪಠ್ಯ ಕ್ರಮ, ವಿನ್ಯಾಸ ಮುಂತಾದ ಎಲ್ಲಾ ವಿಷಯಗಳ ಬಗ್ಗೆ ಸವಿಸ್ತಾರವಾಗಿ ತಿಳಿದು ಕೊಂಡೆವು. ಇದರ ಜೋತೆ ಎಲ್ಲಾ ನಾಯಕರಿಂದ ಹೊಸ ಹೊಸ ಹಾಡು, ಚಪ್ಪಾಳೆನೂ ಕಲಿತೆವು.

ನಾವೆಲ್ಲರೂ **"Spare Time Activities"**ಗಳಾದ ಗೈಡ್ ಪ್ರಾಮಿಸ್, ಗೈಡ್ ಲಾ, ಪ್ರೇಯೆರ್, ಫ್ಲಾಗ್ ಸಾಂಗ್, ರಾಷ್ಟ್ರಗೀತೆ, ಫೋರ್ ಬಾಂಡ್ಸ್, 3 ಫ್ಲಾಗ್ಸ್ ಮತ್ತು **Etiquette**, ನಾಟ್, **Lashins**, ಫ್ಲಾಗ್ ಪ್ರೊಸೀಜರ್, ಫಸ್ಟ್ ಏಡ್, **B.P's** 6 ಎಕ್ಸರ್ಸೈಜ್ಸ್, ಮ್ಯಾಪ್, ಎಸ್ಟಿಮೇಷನ್‌ಗಳನ್ನು ನಾಯಕರಿಗೆ ಒಪ್ಪಿಸುವಾಗ ನಾವು ಹಿಂದೆ ಮಕ್ಕಳಾಗಿದ್ದಾಗ ಶಿಕ್ಷಕರ ಮುಂದೆ ಒಪ್ಪಿಸುವಾಗ ಇದ್ದ ವಿದೇಯತೆ, ಹೆದರಿಕೆ, ಗೊಂದಲ, ಗಾಬರಿ ಎಲ್ಲಾ ಭಾವನೆಗಳು ಸಮ್ಮಿಶ್ರ ಗೊಂಡಿದ್ದವು. ಸರಿಯಾಗಿ ಒಪ್ಪಿಸಿ **Book**ಗೆ ಸಹಿಹಾಕಿಸಿಕೊಂಡಾಗ ಎಷ್ಟು ಖುಷಿ ಪಟ್ಟೆವೊ ದೇವರೇ ಬಲ್ಲ.

21ನೇ ತಾರೀಖು ರಾತ್ರಿ ಗೈಡ್ **own** ಸಂಭ್ರಮದಿಂದ ಆಚರಿಸಿದೆವು. ಮರುದಿನ ಬೆಳಿಗ್ಗೆ ದಿನಚರಿಯಲ್ಲಿ ಇರುವಂತೆ ಸರ್ವಧರ್ಮ ಪ್ರಾರ್ಥನೆ ಮಾಡಿದೆವು. ಸಂಜೆ ಕ್ಯಾಂಪಫೈರ್‌ನಲ್ಲಿ 8 ಪಟಾಲಂಗಳು ಸ್ಕೌಟ್ ನಿಯಮದ 9 ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಕ್ಕಂತೆ ಕಿರು ರೂಪಕಗಳನ್ನು ಮಾಡಿ ನಾಯಕರ ಮೆಚ್ಚುಗೆಗೆ ಪಾತ್ರರಾದರು. ಕೊನೆಯಲ್ಲಿ ನಮ್ಮೊಂದಿಗೆ ನಾಯಕುರೂ ಹೆಜ್ಜೆ ಹಾಕಿ ಹಾಡಿ ಕುಣಿದು  ಸಂತೋಷ ಪಟ್ಟರು.

ಕೊನೆಯ ದಿನ ಪ್ರವಚನ ಮಾಡಿದ ಗುರುಗಳಿಗೆ ಅಭಿನಂದನೆಗಳನ್ನು ಹೇಳುವ ಕಾರ್ಯಕ್ರಮ. ಶಿಬಿರಾರ್ಥಿಗಳು ತಮ್ಮ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ಮಾತಿನ ಮೂಲಕ, ಕವನದ ಮೂಲಿಕ ತಿಳಿಸಿದರು. ಪ್ರತಿಯೊಬ್ಬ ನಾಯಕಿಯರು ತಮ್ಮ ಅನುಭವ ಹಂಚಿಕೊಂಡು ಹಾರೈಸಿ ಕಳಿಸಿದರು. 7 ದಿನಗಳ ಎಲ್ಲಾ ಕಾರ್ಯಕ್ರಮಗಳು ದಿನಚರಿ ಚಾರ್ಟ್‌ನಂತೆ ಚಾಚು ತಪ್ಪದಂದೆ ನಡೆದವು.

ಈ ತರಬೇತಿಗೆ ಇಷ್ಟು ಸಂಖ್ಯೆಯ ಶಿಬಿರಾರ್ಥಿಗಳು ಸೇರಲು ಕಾರಣರು ಮುಖ್ಯರದವರು ಡೈನಾಮಿಕ್ ಹೀರೋಯಿನ್ ಶ್ರೀಮತಿ ಶ್ಯಾಮಲಾ ಮೇಡಂರವರು. ಶಿಬಿರದ ಸಮಸ್ತ ಜವಾಬ್ದಾರಿ ಹೊತ್ತು ಅದನ್ನು ಯಾವುದೇ ಕುಂದು ಬರದಂತೆ ನಿರ್ವಹಿಸಿ ಶಿಬಿರದ ಯಶಸ್ಸಿಗೆ ಕಾರಣರಾದರು.

ಈ ಯಶಸ್ಸು ಸುಮ್ ಸುಮ್ನೆ ಬರತ್ತಾ? ಅವರು 2, 3 ತಿಂಗಳಿಂದ ಮಾಡಿದ ಗ್ರೌಂಡ್ ವರ್ಕ್ ಕಾರಣ. **ALT** ಬರುವವರಿಗಾಗಿ ಗ್ರೂಪ್ ಮಾಡಿ ಎಲ್ಲದರ ಬಗ್ಗೆ ಮಾಹಿತಿಯನ್ನು ಕೊಡುತ್ತಾ, ತಮಗೆ ಬೇಕಾದ ಮಾಹಿತಿಯನ್ನು ಪಡೆಯುತ್ತಾ. ಹೇಗೆ ಪೂರ್ವ ಸಿದ್ಧತೆ ಮಾಡಿಬರಬೇಕೆಂದು ರಾತ್ರಿ 9 ಗಂಟೆಯ ನಂತರ (ಹಲವರಿಗೆ ಹಗಲಿನಲ್ಲಿ ಗಣತಿ ಕೆಲಸ ಇರುವುದರಿಂದ) ಮೀಟಿಂಗ್ 10, 11 ಗಂಟೆಯವರೆಗೆ ಮಾಡಿ ಹೀಗೆ ಬರಬೇಕು ಅಂತ ಹೇಳಿ ಹೆದರಿಸಿ, ಏನೂ ಹೆದರಬೇಡಿ ನಾವು ಇದ್ದೇವೆ ಅಂತ ಸಮಾಧಾನಿಸಿ, ಕನ್ನಡ ಬಳಕೆ ಮಾಡಬಹುದು, ಕರ್ನಾಟಕ ದಿಂದಲೇ ಹೆಚ್ಚಿನ ಲೀಡರ್ ಬರ್ತಾರೆ ಅಂತ ಹುರಿದುಂಬಿಸಿ ಇಷ್ಟು ದೊಡ್ಡ ಸಂಖ್ಯೆಯ ಶಿಬಿರಾರ್ಥಿಗಳು ಬರಲು ಕಾರಣೆಭೂತರು. ಅವರೊಂದಿಗೆ ಕೈ ಜೋಡಿಸಿದವರು ಶ್ರೀಮತಿ ಗೀತಾನಟರಾಜ್, ಶ್ರೀಮತಿ ರಾಮಲತಾರವರು ಇವರಿಗೆಲ್ಲ ಧನ್ಯವಾದಗಳು.

**ALT** ನಮ್ಮ ರಾಜ್ಯದಲ್ಲೇ ನಡೆಯಲು ಕಾರಣೆಭೂತರದವರನ್ನು ನಾವು ಎಂದೆಂದಿಗೂ ಮರೆಯಲ್ಲ. ಅವರ ಸತತ ಪ್ರಯತ್ನದ ಫಲವನ್ನು ನಾವೇ ಮೊದಲ ಪಂಕ್ತಿಯಲ್ಲಿ ಪಡೆದವರೆಂಬ ಹೆಗ್ಗಳಿಕೆ ನಮ್ಮದಾಗಿದೆ. ಅವರಿಗೂ ಅನಂತ ಅನಂತ ಧನ್ಯವಾದಗಳು. ಹಾಗೆ ಶಿಬಿರ ನಮಗೆ ಕೊಟ್ಟ ದೊಡ್ಡ ಕಾಣಿಕೆ ಏನೆಂದರೆ ಹಳೆಯದನ್ನು ನೆನಪಿಸಿ ಹೊಸದನ್ನು ಕೊಟ್ಟು ಜ್ಞಾನ ವಿಸ್ತಾರ ಮಾಡಿದ್ದು ಹಾಗೂ ಫೋಟೋ ಛಟಿ ನಿಂದ ನಾವು ಎಂದೂ ಮರೆಯಲಾಗದ ನೆನಪನ್ನು ಕೊಟ್ಟಿದ್ದು.

ಶಿಬಿರದ ಕಾರ್ಯಕ್ರಮಗಳಿಗೆ ತಾಂತ್ರಿಕ ಸಹಾಯ ನೀಡಿದ ಪ್ರಿಯಾಂಕಾ, ಅಶ್ವಿನಿ, ದೀಪಿಕಾನಾ ಮರೆಯಲುಂಟೆ? ಅವರಿಗೂ ಥ್ಯಾಂಕ್ಸ್. ಕಾಲ ಕಾಲಕ್ಕೆ ಶುಚಿ ರುಚಿಯಾಗಿ ಅಡುಗೆ ಮಾಡಿ ಬಡಿಸಿದ ಅಡುಗೆ ಸಿಬ್ಬಂದಿಯವರರಿಗೆ ಹಾಗೂ ಶಿಬಿರಕ್ಕೆ ಸಂಬಂದಿಸಿದ ಕಾರ್ಯಾಚಟುವಟಿಕೆಯಲ್ಲಿ ಭಾಗಿಯಾದ ಎಲ್ಲರಿಗೂ ಧನ್ಯವಾದಗಳು.

"ಒಂದು ವಾರದ ಕ್ಯಾಂಪ್ ಜೀವನವು ತರಗತಿಯ  ಆರು ತಿಂಗಳ ಸೈದ್ಧಾಂತಿಕಾ ಬೋಧನೆಗಿಂತ ಹೆಚ್ಚು ಮೌಲ್ಯ ವಾಗಿದೆ." – ಲೇಡಿ ಬಿ.ಪಿ

ಮನೆಗೆ ತೆರಳುವಾಗ ದಾವಣಗೆರೆ ಬೆಣ್ಣೆದೋಸೆ ಸವಿದು ಯಾವುದೇ ತೊಂದರೆ ಇಲ್ಲದೆ ಸುರಕ್ಷಿತವಾಗಿ ಮನೆ ತಲುಪಿದೆ.

ಧನ್ಯವಾದಗಳು.....

# ಶ್ರದ್ಧಾಂಜಲಿ



**ಶ್ರೀಮತಿ ಸುಚರಿತ ರವರು** ( ಶ್ರೀ ಆರ್. ಚಂದ್ರಶೇಖರನ್ LT (Cub) ಇವರ ಧರ್ಮಪತ್ನಿ) 23.5.26 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 88 ವರ್ಷ ವಯಸ್ಸಾಗಿತ್ತು. ಅವರು ಬಾಲ್ಯದಲ್ಲಿ ಬೆಂಗಳೂರು ಹೋಂ ಸ್ಕೂಲ್ಲಿ ಪೆಟ್ರೋಲ್ ಲೀಡರ್ ಆಗಿದ್ದರು. ಮುಂದೆ Trained Guide Captain ಆಗಿ ಸೇವೆಸಲ್ಲಿಸಿದ್ದರು. 1962 –63 ರಲ್ಲಿ ಚಿತ್ರದುರ್ಗ ಜಿಲ್ಲಾ ಸಂಸ್ಥೆ ಹಾಗೂ 1963–66 ರಲ್ಲಿ ದಾವಣಗೆರೆ ಜಿಲ್ಲಾ ಸಂಸ್ಥೆಗಳಲ್ಲಿ ADC ಹಾಗೂ ಜಂಟಿ ಕಾರ್ಯದರ್ಶಿ ಆಗಿ ಸೇವೆ ಸಲ್ಲಿಸಿದ್ದರು. ಸ್ಕೌಟ್ & ಗೈಡ್ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರು ತಮ್ಮ ಪತಿ ಶ್ರೀ ಆರ್ ಚಂದ್ರಶೇಖರನ್, ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



ಮೈಸೂರಿನ "ರಜಿನಿ ಸ್ಕೌಟ್ ಮತ್ತು ಗೈಡ್ ಗ್ರೂಪ್"ನ ರೇಂಜರ್ **ಕುಮಾರಿ ಕೀರ್ತನ** ದಿನಾಂಕ 22 ಮೇ 2026ರಂದು ಮೈಸೂರಿನಲ್ಲಿ ನಿಧನರಾದರು. ಇವಳಿಗೆ 20 ವರ್ಷ ವಯಸ್ಸಾಗಿತ್ತು. ಮಹಾರಾಣಿ ಕಲಾ ಕಾಲೇಜು ಮೈಸೂರು ಇಲ್ಲಿ ಬಿ.ಎ. 2ನೇ ವರ್ಷ ವ್ಯಾಸಂಗ ಮಾಡುತ್ತಿದ್ದು, ರಾಜ್ಯ ಪುರಸ್ಕಾರ ಗೈಡ್ ಮತ್ತು ರೇಂಜರ್ ಆಗಿದ್ದಳು.



ದಾವಣಗೆರೆ ಜಿಲ್ಲೆ ಹೊನ್ನಾಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಡುತ್ತಿದ್ದ ರೋವರ್ ವಿದ್ಯಾರ್ಥಿಯಾದ ದರ್ಶನ್ ರವರು ದಿನಾಂಕ 8–5–2026 ರಂದು ಬಸ್ ಅಪಘಾತದಲ್ಲಿ ನಿಧನವೊಂದಿದನು ಇತನಿಗೆ 22ವರ್ಷ ವಯಸ್ಸಾಗಿತ್ತು ಈತನು ರೋವರ್ ವಿಭಾಗದಲ್ಲಿ ನಿಪೂಣ್ ಪ್ರಶಸ್ತಿ ಪಡೆದಿದ್ದನು.



ಶ್ರೀಮತಿ ಗಾಯತ್ರಿ ಗೈಡ್ ಕ್ಯಾಪ್ಟನ್ (**Pre-ALT**), ನಿವೃತ್ತ ಶಿಕ್ಷಕರು ಮತ್ತು ಇವರ ಪತಿ ಶ್ರೀ ಕುಮಾರ್ ಮಂಡ್ಯ ಇವರು ದಿನಾಂಕ 09–05–2026ರಂದು ಅಪಘಾತದಲ್ಲಿ ನಿಧನರಾದರು. ಇವರಿಗೆ 65 ವರ್ಷ ವಯಸ್ಸಾಗಿತ್ತು ಸುಮಾರು 20 ವರ್ಷಗಳಿಂದ ಗೈಡ್ ಶಿಕ್ಷಕಿಯಾಗಿ ಮಂಡ್ಯ ಜಿಲ್ಲೆಯಲ್ಲಿ ಸೇವೆಸಲ್ಲಿಸಿದ್ದರು. ಇವರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ

**ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರುಗಳ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.**

**– ರಾಜ್ಯ ಕಾರ್ಯದರ್ಶಿ**




ದಿನಾಂಕ:15–05–2026 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬೀದರ ಹಾಗೂ ಜಿಲ್ಲಾ ಪಂಚಾಯತ್, ಬೀದರ್ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಾದೇಶಿಕ ನಿಧಿ ಯೋಜನೆಯಡಿ ನಿರ್ಮಿಸಿರುವ "ಡಾ. ಎಸ್ ಎಸ್ ಸಿದ್ದಾರೆಡ್ಡಿ ಸ್ಕೌಟ್ ಭವನ"ದ ನೂತನ ಕಟ್ಟಡ ಲೋಕಾರ್ಪಣೆ ಸಮಾರಂಭದಲ್ಲಿ ಶ್ರೀ ಶ್ರೀ ನಾಡೋಜ ಡಾಕ್ಟರ್ ಬಸಲಿಂಗ ಪಟ್ಟದ ದೇವರು ಸ್ವಾಮೀಜಿ, ಸನ್ಮಾನ್ಯ ಮಂತ್ರಿಗಳಾದ ಶ್ರೀ ಈಶ್ವರ ಖಂಡ್ರೆ, ರಾಜ್ಯ ಮುಖ್ಯ ಆಯುಕ್ತರಾದ ಡಾ.ಪಿ.ಜಿ.ಆರ್. ಸಿಂಧ್ಯಾ, ಶಾಸಕರು ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಡಾ. ಅಜಯ್ ಧರ್ಮಸಿಂಗ್, ಶಾಸಕರಾದ ಶ್ರೀ ಎಂ.ಜಿ. ಮೂಳೆ, ಡಾ. ಗುರಮ್ಮ ಸಿದ್ದರೆಡ್ಡಿ, ಹಾಗೂ ಹಲವಾರು ಮುಖಂಡರು ಮತ್ತು ಜಿಲ್ಲಾ ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.




ದಿನಾಂಕ:23.05.2026 ರಿಂದ 26.05.2026 ರವರೆಗೆ ಡಾ ಅನಿಬೆಸೆಂಟ್ ಸ್ಕೌಟ್ಸ್ ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ಆಯೋಜಿಸಿದ್ದ "VISION ECHO WORKSHOP-2034" ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಡಾ.ಪಿ.ಜಿ.ಆರ್. ಸಿಂಧ್ಯಾರವರು ಅಧ್ಯಕ್ಷತೆ ವಾಹಿಸಿದ್ದರು ಕಾರ್ಯಕ್ರಮದಲ್ಲಿ ರಾಜ್ಯ ಆಯುಕ್ತರಾದ ಶ್ರೀ ಎಂ. ಎ ಖಾಲೀದ್, ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಆಶಾ ಪ್ರಸನ್ನ ಕುಮಾರ್, ಶಿಬಿರದ ನಾಯಕರಾದ ಶ್ರೀ ಅನಲೇಂದ್ರ ಶರ್ಮಾ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ಅಂತರಾಷ್ಟ್ರೀಯ ಉಪ ಆಯುಕ್ತರಾದ ಶ್ರೀ ಎ.ಎಸ್ ಮಧುಸೂದನ್, ರಾಜ್ಯ ಪದಾಧಿಕಾರಿಗಳಾದ ಶ್ರೀ ಬಿ.ಕೆ ಬಸವರಾಜ, ಶ್ರೀ ಪಿ.ವಿಶ್ವನಾಥ್, ಶ್ರೀಮತಿ ರಾಧ ವೆಂಕಟೇಶ್ ವಿವಿಧ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)

SHAHEEN
GROUP OF INSTITUTIONS

Shaheen Group of Institutions

37 Years of
SHAPING FUTURE WITH EXCELLENCE

# FLAGSHIP PROGRAMMES 2026

**MADRASA PLUS** مدرسہ پلس

Strengthening Madrasa Students and Madrasas through Academic Support

**PRE PLUS TWO** پری پلس 2

*Class X*
*Pass or Fail – Don't Worry*
In just 3 Years, Become a **Doctor, Engineer** or pursue any professional career

MBBS کی تعلیم بیرون ملک
**STUDY MBBS ABROAD**

Become a Doctor at just **28.8 Lakhs** Including Food and Hostel

پانچ سالہ انٹیگریٹ پروگرام
**5 YEARS INTEGRATED PROGRAMME**

Class 11 & 12 Arts & Commerce with **BA / BCA / BCom** Along with Alimiyath

**SHAHEEN AUSTRALIAN INTERNATIONAL SCHOOL** شاہین آسٹریلین انٹرنیشنل اسکول

Residential School for Classes 5 to 8

**DEENIYAT PLUS** دینیات پلس

A blended educational model of religious and contemporary education for dropouts and needy children

**ADMISSIONS OPEN** From 1st April 2026

For more details visit
**shaheengroup.org**
**Toll Free: 1800 121 6235**

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.in

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26